ಗುರುವಾರ, ಆಗಸ್ಟ್ 25, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಳೆಯಲಿ ಜತೆಯಲಿ

ದಾವಣಗೆರೆಯಲ್ಲಿ ಬುಧವಾರ ಎವಿಕೆ ಕಾಲೇಜಿನ ವಿದ್ಯಾರ್ಥಿನಿಯರು ಮಳೆಯಲ್ಲಿಯೇ ಕೊಡೆ ಹಿಡಿದು ಸಾಗಿದರು



ಗುರುವಾರ, ಆಗಸ್ಟ್ 25, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 236 | ಪುಟ 16
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕೇಂದ್ರದ ಸಿಬ್ಬಂದಿ ನೇಮಕಾತಿ ಆಯೋಗವು ಎಸ್‌ಎಸ್‌ಸಿ, ದೆಹಲಿ ಪೊಲೀಸ್ ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ.



ಆಳ-ಅಗಲ ಸಂಪತ್ತು ಇಲ್ಲದವರಿಗೆ ಸವಲತ್ತೂ ಇಲ್ಲ
ಬಹುಮತ ಸಾಬೀತುಪಡಿಸಿದ ನಿತೀಶ್ 11
ಮೋದಿ ಸ್ವಾಗತ ತಯಾರಿ; ನಳಿನ್ ವಿರುದ್ಧ ಅಭಿಯಾನ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,085 ▲	17,604 ▲	₹53,250 (ಬೆಂಗಳೂರು)	₹57,400 (ಬೆಂಗಳೂರು)	79.86 ▼

ದಾದಾಪೀರ್‌ಗೆ ಯುವ, ತಮ್ಮಣ್ಣಗೆ ಬಾಲ ಸಾಹಿತ್ಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿಯ 2022ನೇ ಸಾಲಿನ ಯುವ ಸಾಹಿತ್ಯ ಪ್ರಶಸ್ತಿಗೆ ವಿಜಯ ನಗರ ಜಿಲ್ಲೆಯ ಹಗರಿಬೊಮ್ಮನ ಹಳ್ಳಿಯ ದಾದಾಪೀರ್ ಜೈಮನ್, ಬಾಲ ಸಾಹಿತ್ಯ ಪ್ರಶಸ್ತಿಗೆ ಶಿರಸಿ ಸಿದ್ದಾಪುರದ ತಮ್ಮಣ್ಣ ಬೀಗಾರ ಆಯ್ಕೆಯಾಗಿದ್ದಾರೆ.



ದಾದಾಪೀರ್ ಜೈಮನ್



ತಮ್ಮಣ್ಣ ಬೀಗಾರ

ಪ್ರಶಸ್ತಿ ಪುರಸ್ಕೃತರು ತಲಾ ₹50 ಸಾವಿರ ನಗದು ಹಾಗೂ ಸನ್ಮಾನ ಪತ್ರ ಪಡೆಯಲಿದ್ದಾರೆ. ದಾದಾಪೀರ್ ಅವರ 'ನೀಲಕುರಿಂಜಿ' ಕಥಾಸಂಕಲನಕ್ಕೆ ಯುವ ಸಾಹಿತ್ಯ ಪ್ರಶಸ್ತಿ ಮತ್ತು ತಮ್ಮಣ್ಣ ಬೀಗಾರ ಅವರ 'ಬಾವಲಿ ಗುಹೆ' ಮಕ್ಕಳ ಕಾದಂಬರಿಗೆ ಬಾಲ ಸಾಹಿತ್ಯ ಪ್ರಶಸ್ತಿ ಸಂದಿದೆ.

ಸಿದ್ದರಾಮಯ್ಯ ಜತೆ ಚರ್ಚಿಸಿದ ಕೆಂಪಣ್ಣ • ವಾಕ್ಸಮರಕ್ಕೆ ದಾರಿ

ಶೇ 40 ಲಂಚ: ಮತ್ತೆ ಭುಗಿಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷದ ಹಿಂದೆ ರಾಜ್ಯದಲ್ಲಿ ಜೋರಾಗಿ ಸದ್ದು ಮಾಡಿದ್ದ ಶೇಕಡ 40ರಷ್ಟು ಲಂಚದ ಆರೋಪ ಈಗ ಮತ್ತೆ ಚರ್ಚೆಯ ಮುನ್ನೆಲೆಗೆ ಬಂದಿದೆ.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ಆರೋಪವನ್ನು ಪುನರುಚ್ಚರಿಸುವುದರ ಜತೆಯಲ್ಲೇ ಬಿಬಿಎಂಪಿ ಗುತ್ತಿಗೆದಾರರ ಸಂಘ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಗುತ್ತಿಗೆದಾರರ ಸಂಘಗಳೂ ಆರೋಪಕ್ಕೆ ದನಿಗೂಡಿಸಿವೆ.


ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿಮಾಡಿದ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಮತ್ತು ಪದಾಧಿಕಾರಿಗಳು, ಇದೇ ವಿಚಾರ ಕುರಿತು ಚರ್ಚೆ ನಡೆಸಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕೆಂಪಣ್ಣ, 'ಪ್ರಧಾನಿ ನರೇಂದ್ರ ಮೋದಿಯವರಿಗೆ 2021ರ ಜುಲೈನಲ್ಲೇ ಪತ್ರದ ಮೂಲಕ ದೂರು ನೀಡಿದ್ದೆವು. ಆದರೆ, ಈಗಲೂ ಶೇಕಡ 40ರಷ್ಟು ಲಂಚ ನಿಂತಿಲ್ಲ' ಎಂದು ಆರೋಪಿಸಿದರು. 'ಗುತ್ತಿಗೆದಾರರಿಂದ ಹಣ ಸಂಗ್ರಹಿಸುವಂತೆ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದಾರೆ' ಎಂದು ನೇರ ಆರೋಪ ಮಾಡಿದರು.

6ನೇ ಪುಟ ನೋಡಿ

> **ಯಾವುದೇ ಭ್ರಷ್ಟಾಚಾರ ಮಾಡಿಲ್ಲವೆಂದು ಸರ್ಕಾರ ಹೇಳುತ್ತಿದೆ. ಹಾಗಾದರೆ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರಕ್ಕೆ ಸಮಸ್ಯೆಯೇನು?**
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

> **ದಾಖಲೆ ಇಲ್ಲದೇ ಆರೋಪ ಮಾಡುತ್ತಿರುವ ಕೆಂಪಣ್ಣ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವೆ. ಸಿದ್ದರಾಮಯ್ಯ ಗಾಳಿಯಲ್ಲಿ ಗುಂಡು ಹೊಡೆಯುತ್ತಿದ್ದಾರೆ. ದಾಖಲೆ ಇದ್ದರೆ ಅಧಿವೇಶನದಲ್ಲಿ ಚರ್ಚಿಸಲಿ**
> **ಮುನಿರತ್ನ,** ತೋಟಗಾರಿಕೆ ಸಚಿವ

ಲೋಕಾಯುಕ್ತಕ್ಕೆ ದೂರು ನೀಡಲಿ: ಸಿ.ಎಂ



'ಲಂಚದ ಆರೋಪಕ್ಕೆ ಪೂರಕವಾಗಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಬಳಿ ದಾಖಲೆ ಇದ್ದರೆ ಲೋಕಾಯುಕ್ತಕ್ಕೆ ದೂರು ನೀಡಲಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಗುತ್ತಿಗೆದಾರರ ಸಂಘದ ಆರೋಪ ಕುರಿತು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ಅವರ ಆರೋಪದಲ್ಲಿ ಹುರುಳಿಲ್ಲ. ಆಧಾರರಹಿತವಾಗಿ ಇಂತಹ ಹೇಳಿಕೆ ನೀಡಬಾರದು. ಲೋಕಾಯುಕ್ತವು ಸ್ವತಂತ್ರ ತನಿಖಾ ಸಂಸ್ಥೆ. ಅಲ್ಲಿಯೇ ತನಿಖೆ ನಡೆಯಲಿ' ಎಂದರು.

6ನೇ ಪುಟ ನೋಡಿ

'ಸಚಿವರೊಬ್ಬರ ವಿರುದ್ಧ ಮೊಕದ್ದಮೆ'



ಡಿ.ಕೆಂಪಣ್ಣ

'ಅತಿಯಾದ ಭ್ರಷ್ಟಾಚಾರದಲ್ಲಿ ನಿರತರಾಗಿರುವ ಒಬ್ಬ ಸಚಿವರ ವಿರುದ್ಧ ಶೀಘ್ರದಲ್ಲೇ ಕ್ರಿಮಿನಲ್ ಮೊಕದ್ದಮೆ ಹೂಡುತ್ತೇವೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ತಿಳಿಸಿದರು.

ಸಂಘದ ಪದಾಧಿಕಾರಿಗಳ ಸಭೆ ಬಳಿಕ 'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ಕೆಲವು ಸಚಿವರು ಭ್ರಷ್ಟಾಚಾರದಲ್ಲಿ ನಿರತರಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು ಲಭಿಸಿವೆ' ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬೇಗ್– ಮೊಗೆದಷ್ಟು ಭೂ ಅಕ್ರಮ

ಪ್ರಭಾವ ಬಳಸಿ ಮೂರು ಕಡೆ ಭೂ ಮಂಜೂರಾತಿ: ಇ.ಡಿ. ತನಿಖೆಯಿಂದ ಪತ್ತೆ

• ಮಂಜುನಾಥ ಹೆಬ್ಬಾರ್

ಪ್ರಜಾವಾಣಿ ವಿಶೇಷ

ನವದೆಹಲಿ: ಕರ್ನಾಟಕದ ರಾಜಕಾರಣಿ ಆರ್. ರೋಷನ್ ಬೇಗ್ ಸಚಿವರಾಗಿದ್ದ ವೇಳೆಯಲ್ಲಿ ರಾಜಕೀಯ ಪ್ರಭಾವ ಬಳಸಿ ₹50 ಕೋಟಿಗೂ ಅಧಿಕ ಬೆಲೆಬಾಳುವ ಸರ್ಕಾರಿ ಭೂಮಿಯನ್ನು ನಿಯಮ-ಬಾಹಿರವಾಗಿ ಮಂಜೂರು ಮಾಡಿಸಿಕೊಂಡಿರುವುದು ಜಾರಿ ನಿರ್ದೇಶನಾಲಯದ (ಇ.ಡಿ.) ತನಿಖೆಯಿಂದ ಬಯಲಾಗಿದೆ.

ಐ ಮಾನಿಟರಿಂಗ್ ಅಡ್ವೈಸರಿ (ಐಎಂಎ) ಹಗರಣದಲ್ಲಿ ಬೇಗ್ ಅವರನ್ನು ಬಂಧಿಸಲಾಗಿತ್ತು. ಹಣ ಅಕ್ರಮ ವರ್ಗಾವಣೆ ತಡೆ (ಪಿಎಂಎಲ್) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಜಾರಿ ನಿರ್ದೇಶನಾಲಯ, ಕಳೆದ ವರ್ಷ ಏಪ್ರಿಲ್‌ನಲ್ಲಿ ಬೇಗ್ ಮನೆಯಲ್ಲಿ ಶೋಧ ಕಾರ್ಯಾಚರಣೆ ನಡೆಸಿತ್ತು.



ರೋಷನ್ ಬೇಗ್

ಬೇಗ್ ಅವರ ಭೂ ಅಕ್ರಮದ ಬಗ್ಗೆ ಹೆಚ್ಚುವರಿ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿ ಜಾರಿ ನಿರ್ದೇಶನಾಲಯದ ಹೆಚ್ಚುವರಿ ನಿರ್ದೇಶಕರಾದ ಮೋನಿಕಾ ಶರ್ಮಾ ಅವರು ಕರ್ನಾಟಕ ಸರ್ಕಾರದ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಪತ್ರ ಬರೆದಿದ್ದಾರೆ.

'ಬೇಗ್ 1984ರಿಂದ 2019ರ ಅವಧಿಯಲ್ಲಿ ಏಳು ಬಾರಿ ಶಾಸಕರಾಗಿ ಚುನಾಯಿತರಾಗಿದ್ದರು. 1996ರಿಂದ 1999ರವರೆಗೆ ಗೃಹ ಸಚಿವ, 2014ರಿಂದ 2018ರವರೆಗೆ ನಗರಾಭಿವೃದ್ಧಿ, ಮೂಲಸೌಕರ್ಯ ಹಾಗೂ ಹಜ್ ಸಚಿವರಾಗಿದ್ದರು. ಬೇಗ್ ಅವರು ಸಚಿವ ಹಾಗೂ ಶಾಸಕ ಸ್ಥಾನದ ರಾಜಕೀಯ ಪ್ರಭಾವ ಬಳಸಿಕೊಂಡು ನಿಯಮಗಳನ್ನು ಉಲ್ಲಂಘಿಸಿ ಸರ್ಕಾರಿ ಜಾಗವನ್ನು ಭೂಕಬಳಿಕೆ ಮಾಡಿದ್ದಾರೆ' ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಅಕ್ರಮ ಭೂ ಹಂಚಿಕೆಯಲ್ಲಿ ಬೇಗ್, ಕರ್ನಾಟಕದ ಆಗಿನ ಮುಖ್ಯಮಂತ್ರಿ, ಸಚಿವರು, ಬಿಬಿಎಂಪಿಯ ಆಗಿನ ಆಯುಕ್ತರು ಹಾಗೂ ಅಧಿಕಾರಿಗಳು, ಕಿಯೋನಿಕ್ಸ್‌ನ ಆಗಿನ ವ್ಯವಸ್ಥಾಪಕ ನಿರ್ದೇಶಕರು, ಅಧಿಕಾರಿಗಳು ಭಾಗಿಯಾಗಿದ್ದಾರೆ. ಅವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988ರ ಅಡಿಯಲ್ಲಿ ಕ್ರಮ ಕೈಗೊಳ್ಳಲು ಅವಕಾಶ ಇದೆ' ಎಂದೂ ಅವರು ಹೇಳಿದ್ದಾರೆ.

7ನೇ ಪುಟ ನೋಡಿ



ಮಡಿವಾಳದ ಸೇಂಟ್ ಜಾನ್ಸ್ ಆಸ್ಪತ್ರೆ ರಸ್ತೆಯಲ್ಲಿ ಮಳೆಯಿಂದಾಗಿ ಸಂಚಾರ ಅಸ್ತವ್ಯಸ್ತಗೊಂಡಿತ್ತು
ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್



ನಗರದ ರೆಸಿಡೆನ್ಸಿ ರಸ್ತೆಯಲ್ಲಿ ಸಂಜೆ ಸುರಿದ ಮಳೆಯಲ್ಲಿ ಸಾಗಿದ ಜನರು
ಪ್ರಜಾವಾಣಿ ಚಿತ್ರ/ರಂಜು ಪಿ.

ಧಾರಾಕಾರ ಮಳೆ: ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಬಹುತೇಕ ಭಾಗಗಳಲ್ಲಿ ಬುಧವಾರ ಸಂಜೆಯಿಂದ ರಾತ್ರಿ ತನಕ ಧಾರಾಕಾರ ಮಳೆ ಸುರಿಯಿತು. ಇದರಿಂದ ನಗರದಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಸಂಜೆ 5.30ರ ವೇಳೆಗೆ ಆರಂಭವಾದ ಮಳೆ ನಿರಂತರವಾಗಿ ಸುರಿಯಿತು. ಪೀಣ್ಯ, ಯಶವಂತಪುರ, ಕಬ್ಬನ್‌ಪಾರ್ಕ್, ವಿಧಾನಸೌಧ, ಚಿಕ್ಕಪೇಟೆ, ಕೆ.ಆರ್. ಮಾರುಕಟ್ಟೆ, ಶೇಷಾದ್ರಿಪುರಂ, ಮಲ್ಲೇಶ್ವರ, ರಾಜಾಜಿನಗರ, ಜಾಲಹಳ್ಳಿ, ಗೊರಗುಂಟೆಪಾಳ್ಯ, ಯಲಹಂಕ, ಹಂಪಿನಗರ, ವಿಜಯನಗರ, ರಾಜರಾಜೇಶ್ವರಿ ನಗರ, ಮಹಾಲಕ್ಷ್ಮಿ ಲೇಔಟ್, ಕೆಂಗೇರಿ, ಬ್ಯಾಟರಾಯನಪುರ, ಕೆಂಗೇರಿ ಉಪನಗರ ಭಾಗಗಳಲ್ಲಿ ಧಾರಾಕಾರ ಮಳೆಯಾಗಿದೆ. ವಾಹನ ಸವಾರರು ಟ್ರಾಫಿಕ್‌ನಲ್ಲಿ ಸಿಲುಕಿ ಪರದಾಡಿದರು.

ಬುಧವಾರ ಬೆಳಿಗ್ಗೆಯಿಂದ ಬಿಸಿಲಿನ ವಾತಾವರಣ ಇತ್ತು. ಆದರೆ, ಸಂಜೆ ಸುರಿದ ಮಳೆಯಿಂದ ಕೆಳಸೇತುವೆಗಳಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿತ್ತು. ಸಂಗ್ರಹಗೊಂಡಿದ್ದ ಮಳೆ ನೀರಿನ ನಡುವೆ ವಾಹನಗಳು ಸಾಗಿದವು. ಕೆಲವು ವೃತ್ತಗಳಲ್ಲಿ ವಾಹನಗಳು ಮುಂದಕ್ಕೆ ಚಲಿಸಲೂ ಸಾಧ್ಯವಾಗದೆ ಪರ್ಯಾಯ ರಸ್ತೆಯಲ್ಲಿ ಸಾಗಿದವು.

ಒಂದು ವಾರದಿಂದ ಮಳೆ ದೂರವಾಗಿ ಬಿಸಿಲಿನ ಧಗೆಯಿತ್ತು. ದಿಢೀರ್ ಸುರಿದ ಮಳೆಯಿಂದ ವಾತಾವರಣ ತಂಪಾಯಿತು.

ಇನ್ನೆರಡು ದಿನ ಉತ್ತಮ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ನಗರದ ಅನಿಲ್ ಕುಂಬ್ಳೆ ವೃತ್ತದಲ್ಲಿ ಹರಿದ ಮಳೆಯ ನೀರು
ಪ್ರಜಾವಾಣಿ ಚಿತ್ರ/ ಬಿ.ಕೆ.ಜನಾರ್ದನ್



ಆಜಾದ್ ನಗರದ ರುದ್ರಪ್ಪ ಗಾರ್ಡನ್ ಪೈಪ್‌ಲೈನ್ ರಸ್ತೆಯಲ್ಲಿ ವಾಹನಗಳು ಸಾಗಿದವು
ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.



ನಗರದಲ್ಲಿ ಬುಧವಾರ ಸುರಿದ ಮಳೆಯಿಂದ ಮಿಲ್ಲರ್ ರಸ್ತೆಯ ಬದಿಯಲ್ಲಿ ನೀರು ಕಿರು ಜಲಪಾತದಂತೆ ಧುಮ್ಮಿಕ್ಕಿದ್ದು ಹೀಗೆ
ಪ್ರಜಾವಾಣಿ ಚಿತ್ರ/ಪುಷ್ಕರ್ ವಿ

ವೈದ್ಯರ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಘೋಷಣೆ


ಜಿಲ್ಲಾ ಕೇಂದ್ರಗಳಲ್ಲೇ ಮಾನಸಿಕ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ರೋಗಗಳಿಗೆ ಜಿಲ್ಲಾ ಕೇಂದ್ರಗಳಲ್ಲೇ ಉತ್ತಮವಾದ ಚಿಕಿತ್ಸೆ ನೀಡಲು ಆರೋಗ್ಯ ಇಲಾಖೆಯ ಮೂಲಕ ವಿಶೇಷ ಯೋಜನೆಯೊಂದನ್ನು ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಆರೋಗ್ಯ ಇಲಾಖೆಯು ಬುಧವಾರ ಆಯೋಜಿಸಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, 'ಮಾನಸಿಕ ರೋಗಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಎಳೆಯ ಮಕ್ಕಳಲ್ಲೂ ಖಿನ್ನತೆಯ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಇಂತಹ ಸಮಸ್ಯೆಗಳಿಗೆ ತ್ವರಿತ ಚಿಕಿತ್ಸೆಯ ಅಗತ್ಯವಿದೆ' ಎಂದರು.

ನಿಮ್ಹಾನ್ಸ್ ಮೇಲೆ ಹೆಚ್ಚಿನ ಒತ್ತಡವಿದೆ. ಅದನ್ನು ತಪ್ಪಿಸಲು ಮತ್ತು ಜನರಿಗೆ ಜಿಲ್ಲಾ ಮಟ್ಟದಲ್ಲೇ ಅತ್ಯುತ್ತಮವಾದ ಮಾನಸಿಕ ರೋಗ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಹೊಸ ಯೋಜನೆ ಜಾರಿಗೊಳಿಸಲಾಗುವುದು. ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ನೇತೃತ್ವದಲ್ಲಿ ಈ ಯೋಜನೆಯ ರೂಪುರೇಷೆಗಳನ್ನು ಅಂತಿಮಗೊಳಿಸುವ ಕೆಲಸ ನಡೆಯುತ್ತಿದೆ ಎಂದು ಹೇಳಿದರು.



ರಾಷ್ಟ್ರೀಯ ವೈದ್ಯರ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಡಾ.ಬಿ.ಸಿ. ರಾಯ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಸಚಿವ ಡಾ.ಕೆ. ಸುಧಾಕರ್, ರಾಜ್ಯ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ.ಎ.ಎನ್. ದೇಸಾಯಿ ಇದ್ದರು

ರಾಜ್ಯದ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಕೆಲಸ ಶೀಘ್ರದಲ್ಲಿ ಆರಂಭವಾಗಲಿದೆ. ಒಂಬತ್ತು ಜಿಲ್ಲೆಗಳಲ್ಲಿ ಸರ್ಕಾರಿ- ಖಾಸಗಿ ಸಹಭಾಗಿತ್ವದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸುವ ಯೋಜನೆಯೂ ವರ್ಷದೊಳಗೆ ಅನುಷ್ಠಾನಗೊಳ್ಳಲಿದೆ ಎಂದು ಬೊಮ್ಮಾಯಿ ತಿಳಿಸಿದರು.

ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಮಾತನಾಡಿ, 'ಆರೋಗ್ಯ ಸೇವೆಯಲ್ಲಿ ತಂತ್ರಜ್ಞಾನ ಬಳಕೆಯಲ್ಲಿ ರಾಜ್ಯವು ಮುಂಚೂಣಿಯಲ್ಲಿದೆ. 25 ಲಕ್ಷ ಮಂದಿ ಕೋವಿಡ್ ರೋಗಿಗಳಿಗೆ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಂಡು ಆಪ್ತ ಸಮಾಲೋಚನೆಯ ನೆರವು ಒದಗಿಸಲಾಗಿದೆ. ಇ-ಸಂಜೀವಿನಿ ಪೋರ್ಟಲ್ ಮೂಲಕ 50 ಲಕ್ಷ ಜನರಿಗೆ ವೈದ್ಯಕೀಯ ಸಮಾಲೋಚನೆ ಸೌಲಭ್ಯ ಒದಗಿಸಿದ್ದು, ಈ ವಿಚಾರದಲ್ಲಿ ಕರ್ನಾಟಕವು ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ ಎಂದರು.

ವೈದ್ಯರಿಗೆ ಸನ್ಮಾನ

ಸರ್ಕಾರಿ ಆಸ್ಪತ್ರೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರು, ಆರೋಗ್ಯ ಇಲಾಖೆಯಲ್ಲಿ ದೀರ್ಘ ಕಾಲ ಸೇವೆ ಸಲ್ಲಿಸಿದವರು, ಕೋವಿಡ್ ನಿಯಂತ್ರಣಕ್ಕೆ ಶ್ರಮಿಸಿದವರು ಸೇರಿದಂತೆ 250 ಮಂದಿ ವೈದ್ಯಾಧಿಕಾರಿಗಳನ್ನು ರಾಷ್ಟ್ರೀಯ ವೈದ್ಯರ ದಿನಾಚರಣೆಯಲ್ಲಿ ಸನ್ಮಾನಿಸಲಾಯಿತು.

ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಿದ್ದರು. ಕಂದಾಯ ಸಚಿವ ಆರ್. ಅಶೋಕ, ಸಂಸದ ಉಮೇಶ್ ಜಾಧವ್, ವಿಧಾನ ಪರಿಷತ್ ಸದಸ್ಯ ಎ. ದೇವೇಗೌಡ, ಶಾಸಕ ರಾಜಶೇಖರ ಪಾಟೀಲ ತೇಲ್ಕೂರ, ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್, ಆಯುಕ್ತ ಡಿ. ರಂದೀಪ್, ನಿರ್ದೇಶಕಿ ಡಾ. ಇಂದುಮತಿ, ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕಿ ಡಾ.ಅರುಂಧತಿ ಚಂದ್ರಶೇಖರ್, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆ ನಿರ್ದೇಶಕಿ ಡಾ. ಪರಿಮಳಾ ಮರೂರು, ರಾಜ್ಯ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ.ಎ.ಎನ್. ದೇಸಾಯಿ ಉಪಸ್ಥಿತರಿದ್ದರು.




ಯಲಹಂಕದ ರೇವಾ ವಿಶ್ವವಿದ್ಯಾಲಯದಲ್ಲಿ 2022ನೇ ಬ್ಯಾಚ್‌ನ ಎಂಜಿನಿಯರಿಂಗ್ ತರಗತಿಗಳನ್ನು ಉದ್ಘಾಟಿಸಿದ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರನ್ನು ಸನ್ಮಾನಿಸಲಾಯಿತು. ಕುಲಾಧಿಪತಿ ಡಾ.ಪಿ.ಶ್ಯಾಮರಾಜು, ಕುಲಪತಿ ಡಾ.ಎಂ. ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ಟ್ರಸ್ಟಿ ಉಮೇಶ್ ರಾಜು ಇದ್ದರು.

ಮೆಟ್ರೊ: ಮತ್ತೊಂದು ಸುರಂಗ ಪೂರ್ಣ

ಬೆಂಗಳೂರು: ಮೆಟ್ರೊ ರೈಲು ಯೋಜನೆಯ ಮತ್ತೊಂದು ಸುರಂಗ ಮಾರ್ಗದ ಕಾಮಗಾರಿಯನ್ನು ಬಿಎಂಆರ್‌ಸಿಎಲ್ ಪೂರ್ಣಗೊಳಿಸಿದ್ದು, ವೆಂಕಟೇಶಪುರದಿಂದ ಶಾದಿಮಹಲ್ ನಡುವೆ ಸುರಂಗ ಕೊರೆದಿರುವ 'ತುಂಗಾ' ಟಿಬಿಎಂ(ಟನಲ್ ಬೋರಿಂಗ್ ಮಷಿನ್) ಬುಧವಾರ ಹೊರಬಂದಿದೆ.

ಗೊಟ್ಟಿಗೆರೆ–ನಾಗವಾರ ಮೆಟ್ರೊ ರೈಲು ಮಾರ್ಗದಲ್ಲಿ ವೆಂಕಟೇಶಪುರ–ಶಾದಿಮಹಲ್ ನಡುವೆ 1064 ಮೀಟರ್ ಸುರಂಗ ನಿರ್ಮಾಣದ ಕಾಮಗಾರಿಯನ್ನು 395 ದಿನಗಳಲ್ಲಿ ಪೂರ್ಣಗೊಳಿಸಿದೆ. ಬುಧವಾರ ಸಂಜೆ ಈ ಯಂತ್ರವು ಶಾದಿಮಹಲ್ ಬಳಿ ಹೊರಬಂದಿತು. ಈ ಸಂದರ್ಭದಲ್ಲಿ ಎಂಜಿನಿಯರ್‌ಗಳು, ಗುತ್ತಿಗೆದಾರರು, ಕಾರ್ಮಿಕರು ಹರ್ಷೋದ್ಗಾರದೊಂದಿಗೆ ಯಂತ್ರವನ್ನು ಸ್ವಾಗತಿಸಿದರು.



ಶಾದಿಮಹಲ್ ಬಳಿ ಸುರಂಗದಿಂದ ಹೊರಬಂದ ಟಿಬಿಎಂ

ನೀರಿನ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ 25ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್ ನಡೆಯಲಿದೆ ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ. ನೀರಿನ ಬಿಲ್, ನೀರು, ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಸೇರಿ ವಿವಿಧ ಕುಂದುಕೊರತೆಗಳನ್ನು ಪರಿಹರಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ: 8762228888ಗೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ತಿಳಿಸಿದ್ದಾರೆ.

ಪತ್ರಕರ್ತರ ನಿವೃತ್ತಿ ವೇತನಕ್ಕೆ ಸಮಿತಿ ರಚನೆ ಶೀಘ್ರ: ಸಿ.ಎಂ

ಬೆಂಗಳೂರು: 'ಪತ್ರಕರ್ತರ ನಿವೃತ್ತಿ ವೇತನ ಯೋಜನೆ ಪುನರ್ ಜಾರಿಗೆ ಶೀಘ್ರವೇ ಆದೇಶ ಹೊರಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪ್ರೆಸ್‌ಕ್ಲಬ್ ಬಿಸಿನೆಸ್ ಐಕಾನ್ ಅವಾರ್ಡ್–2022 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಪತ್ರಕರ್ತರಿಗೆ ನಿವೃತ್ತ ವೇತನ ನೀಡುವ ಸಂಬಂಧ ಸದ್ಯ ಸಮಿತಿ ಇಲ್ಲ. ಕೂಡಲೇ ಸಮಿತಿಯೊಂದನ್ನು ರಚನೆ ಮಾಡಲು ಆದೇಶಿಸುತ್ತೇನೆ' ಎಂದರು.

'ನಿವೃತ್ತಿ ವೇತನ ಮಂಜೂರು ಮಾಡಲು ಇರುವ ಷರತ್ತುಗಳನ್ನು ಸಡಿಲಗೊಳಿಸಲಾಗುವುದು. ಅಲ್ಲದೇ, ನಿವೃತ್ತಿ ವೇತನ ಮೊತ್ತ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅಧ್ಯಕ್ಷತೆ ವಹಿಸಿದ್ದರು.

ನಟಿ ರಮ್ಯಾ ಮಾತನಾಡಿ, 'ಬೇರೆ ಬೇರೆ ಕ್ಷೇತ್ರಗಳ ಸಾಧಕರನ್ನೂ ಗುರುತಿಸಿ ಪ್ರಶಸ್ತಿ ನೀಡಬೇಕು. ಸಿನಿಮಾ ಕ್ಷೇತ್ರದ ಸಾಧಕರಿಗೂ ಪ್ರಶಸ್ತಿ ನೀಡುವ ಕಾರ್ಯಕ್ರಮ ಆಯೋಜಿಸುವುದು ಸೂಕ್ತ' ಎಂದು ಸಲಹೆ ನೀಡಿದರು.

ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್, 'ಮುಂದಿನ ದಿನಗಳಲ್ಲಿ ಸಿನಿಮಾ ಮತ್ತು ಕ್ರೀಡಾ ಕ್ಷೇತ್ರದ ಸಾಧಕರಿಗೂ ಪ್ರಶಸ್ತಿ ನೀಡುವ ಬಗ್ಗೆ ತೀರ್ಮಾನಿಸಲಾಗಿದೆ' ಎಂದು ತಿಳಿಸಿದರು.

ಮದರಸಾ ಪರಿಶೀಲನೆ; ಅಧಿಕಾರಿಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಅಧಿಕಾರಿಗಳು ಮದರಸಾಗಳಿಗೆ ತೆರಳಿ ಅಲ್ಲಿನ ಸ್ಥಿತಿಗತಿಗಳ ಪರಿಶೀಲನೆ ನಡೆಸಿ, ವರದಿ ನೀಡಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಸೂಚಿಸಿದ್ದಾರೆ.

ಸಮಗ್ರ ಶಿಕ್ಷಣ ಕರ್ನಾಟಕ ಕಚೇರಿಯಲ್ಲಿ ಬುಧವಾರ ಶಿಕ್ಷಣ ಇಲಾಖೆಯ ಅಧಿಕಾರಿಗಳ ಜತೆ ಸಭೆ ಬಳಿಕ ಅವರು ಮಾತನಾಡಿದರು. ಶಿಕ್ಷಣ ಇಲಾಖೆ ಅಧಿಕಾರಿಗಳು ಮದರಸಾಗಳ ಪರಿಶೀಲನೆಗೆ ತೆರಳಿದ್ದಾಗ ಕೆಲ ಆಡಳಿತ ಮಂಡಳಿಗಳು ಸಹಕರಿಸಿಲ್ಲ ಎಂಬ ದೂರುಗಳು ಇಲಾಖೆಗೆ ಬಂದಿವೆ. ಮದರಸಾಗಳಲ್ಲಿ ಧಾರ್ಮಿಕ ಶಿಕ್ಷಣ ಪಡೆದ ಬಳಿಕ ವಿಜ್ಞಾನ, ಗಣಿತ ಅಧ್ಯಯನ ಮಾಡಲು ಹತ್ತಿರದ ಶಾಲೆಗಳಿಗೆ ಹಾಜರಾಗಬೇಕು ಎಂಬ ನಿಯಮವಿದೆ. ಮದರಸಾಗಳಲ್ಲಿ ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ ಸಿಗಬೇಕಾಗ ಶಿಕ್ಷಣ ಸಿಗುತ್ತಿದೆಯೇ? ಯಾವ ರೀತಿಯ ಶಿಕ್ಷಣ ನೀಡಲಾಗುತ್ತಿದೆಯೇ? ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಶಿಕ್ಷಣದ ಸ್ವರೂಪ ಹೇಗಿದೆ ಎನ್ನುವ ಕುರಿತು ಮಾಹಿತಿಯ ಅಗತ್ಯವಿದೆ. ಅಧಿಕಾರಿಗಳ ವರದಿಯ ನಂತರ ಶಿಕ್ಷಣ ತಜ್ಞರು, ಮದರಸಾ ಮುಖ್ಯಸ್ಥರ ಜತೆ ಸಭೆ ನಡೆಸಲಾಗುವುದು ಎಂದರು.

ಸಭೆಯಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್, ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕ ಆರ್. ರಾಮಚಂದ್ರನ್ ಉಪಸ್ಥಿತರಿದ್ದರು.

'ಪಠ್ಯದ ಸ್ವರೂಪವೂ ಬದಲು'

ಮದರಸಾಗಳಲ್ಲಿ ಬೋಧಿಸುವ ಪಠ್ಯಗಳ ಸ್ವರೂಪದಲ್ಲೂ ಬದಲಾವಣೆ ತರುವ ಕುರಿತು ಚರ್ಚೆ ನಡೆಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಮದರಸಾ ಶಿಕ್ಷಣದತ್ತ ಸರ್ಕಾರ ಗಮನ ನೀಡಬೇಕು. ಎಲ್ಲರಂತೆ ತಮ್ಮ ಮಕ್ಕಳಿಗೂ ಉತ್ತಮ ಶಿಕ್ಷಣ ಸಿಗಬೇಕು. ಸ್ಪರ್ಧಾತ್ಮಕ ಪ್ರಪಂಚಕ್ಕೆ ತೆರೆದುಕೊಳ್ಳಬೇಕು ಎಂದು ಮುಸ್ಲಿಂ ಸಮುದಾಯದವರೇ ಕೇಳಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಸರ್ಕಾರ ಒಂದಷ್ಟು ಕ್ರಮ ಕೈಗೊಳ್ಳುವ ಚಿಂತನೆ ನಡೆಸಿದೆ ಎಂದರು.

'ಮಂಡಳಿ ರಚನೆಯ ನಂತರ ಮುಂದಿನ ರೂಪುರೇಷೆ ಸಿದ್ಧಪಡಿಸಲಾಗುವುದು. ಆದರೆ, ಉತ್ತರ ಪ್ರದೇಶ ಅಥವಾ ಇತರೆ ರಾಜ್ಯಗಳ ಮಾದರಿ ಅನುಸರಿಸುವುದಿಲ್ಲ. ನಮ್ಮದೇ ನೀತಿ ನಿಯಮಗಳನ್ನು ರೂಪಿಸುವೆವು' ಎಂದು ಸಮರ್ಥಿಸಿಕೊಂಡರು.

ಚಿಕ್ಕಪೇಟೆ ಸರ್ಕಾರಿ ಶಾಲೆಯ ದಾಖಲೆಗಳ ಸಂಗ್ರಹ ಕಾರ್ಯ ನಡೆಯುತ್ತಿದೆ. ಸ್ವಾತಂತ್ರ್ಯ ಪೂರ್ವದ ಆ ಶಾಲೆಯ ಕೆಲವು ದಾಖಲೆಗಳು ಸಿಗುತ್ತಿಲ್ಲ. ಈಗಾಗಲೇ ಕಂದಾಯ ಇಲಾಖೆ ಜತೆ ಮಾತುಕತೆ ನಡೆಸಲಾಗಿದೆ. ಶಾಲೆ ಹೆಸರಿಗೆ ಶೀಘ್ರ ಖಾತೆ ಮಾಡಿಸಲಾಗುವುದು ಎಂದರು.

ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಆಕ್ಷೇಪ

ರಾಜ್ಯದಲ್ಲಿ ಮುಸ್ಲಿಂ ಧಾರ್ಮಿಕ ಕೇಂದ್ರಗಳ ಮೇಲೆ ಸರ್ಕಾರದ ಹಸ್ತಕ್ಷೇಪ ಅಸಂವಿಧಾನಿಕ ಎಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಸಂಘಟನೆ ಖಂಡಿಸಿದೆ.

ಮದರಸಾ ಶಿಕ್ಷಣಕ್ಕೆ ಮಂಡಳಿ ರೂಪಿಸಿ, ಧಾರ್ಮಿಕ ಶಿಕ್ಷಣದಲ್ಲಿ ಹಸ್ತಕ್ಷೇಪ ನಡೆಸುವುದು ಆರ್‌ಎಸ್‌ಎಸ್ ಗುಪ್ತ ಕಾರ್ಯಸೂಚಿ. ಅಲ್ಪಸಂಖ್ಯಾತ ಧಾರ್ಮಿಕ ಶಿಕ್ಷಣ ವ್ಯವಸ್ಥೆಯ ಮೇಲೆ ಬಿಜೆಪಿಯ ಕಾನೂನು ಬಾಹಿರ ಹಸ್ತಕ್ಷೇಪವು ಸಂವಿಧಾನದ 29 ಮತ್ತು 30ನೇ ಪರಿಚ್ಛೇದದ ನೇರ ಉಲ್ಲಂಘನೆ. ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳನ್ನು ಬೆಳೆಸಿ, ಅಭಿವೃದ್ಧಿಪಡಿಸುವುದು ಸಂವಿಧಾನದ ಪ್ರತಿಪಾದನೆಯಾಗಿದೆ. ಸಂವಿಧಾನಕ್ಕೆ ಬೆಲೆ ಕೊಡದೆ, ಸಂಘದ ಹಿತಾಸಕ್ತಿಗೋಸ್ಕರ ತಗೆದುಕೊಳ್ಳುವ ಇಂತಹ ನಿರ್ಧಾರಗಳು ಸರ್ವಾಧಿಕಾರ ಧೋರಣೆ ಪ್ರತೀಕ ಎಂದು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಅನೀಸ್ ಕುಂಬ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್' ಇಂದು

ಬೆಂಗಳೂರು: ಕೆ.ಆರ್. ಪುರದ ಕೇಂಬ್ರಿಡ್ಜ್ ತಂತ್ರಜ್ಞಾನ ಸಂಸ್ಥೆಯಲ್ಲಿ ಸೆ.25 ಮತ್ತು 26ರಂದು ರಾಷ್ಟ್ರಮಟ್ಟದ 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್–2022' ಆಯೋಜಿಸಲಾಗಿದೆ.

ಬೆಳಿಗ್ಗೆ 8ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಡಿಆರ್‌ಡಿಒ ನಿವೃತ್ತ ಮಹಾನಿರ್ದೇಶಕ ಡಾ.ಜಿ. ಅತೀತನ್, ವಿಪ್ರೊ3ಡಿ ಕಾರ್ಯಕ್ರಮ ನಿರ್ದೇಶಕ ಡಾ. ಯು. ಚಂದ್ರಶೇಖರ್, ಕೇಂಬ್ರಿಡ್ಜ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಅಧ್ಯಕ್ಷ ಡಿ.ಕೆ. ಮೋಹನ್ ಪಾಲ್ಗೊಳ್ಳಲಿದ್ದಾರೆ.

ಈದ್ಗಾ ಮೈದಾನ: ಹೈಕೋರ್ಟ್‌ಗೆ ಅರ್ಜಿ

ಬೆಂಗಳೂರು: 'ಬಿಬಿಎಂಪಿ' ವ್ಯಾಪ್ತಿಯಲ್ಲಿರುವ ಚಾಮರಾಜಪೇಟೆ ಆಟದ ಮೈದಾನದ ಮಾಲೀಕತ್ವ ಕಂದಾಯ ಇಲಾಖೆಗೆ ಸೇರಿದೆ' ಎಂಬ ಸರ್ಕಾರದ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ.

ವಕ್ಫ್ ಮಂಡಳಿಯ ಸಿಇಒ, ಬೆಂಗಳೂರು ಜಿಲ್ಲೆ ವಕ್ಫ್ ಸಲಹಾ ಸಮಿತಿ ಸಲ್ಲಿಸಿರುವ ರಿಟ್ ಅರ್ಜಿ ಆ.25ರ ಮಧ್ಯಾಹ್ನ 2.30ಕ್ಕೆ ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರ ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿದೆ.

ನಗರದಲ್ಲಿ ಇಂದು

ವಿರಾಸತ್-2022: ನಾದ ಯೋಗ: ರಿತೇಶ ಮಿಶ್ರಾ, ರಜನೀಶ್ ಮಿಶ್ರಾ, ಆಯೋಜನೆ: ಸ್ಪಿಕ್ ಮೆಕೆ, ಆರ್‌ವಿ ಯೂನಿವರ್ಸಿಟಿ, ಸ್ಥಳ: ಆರ್.ವಿ. ಯೂನಿವರ್ಸಿಟಿ, ಪಟ್ಟಣಗೆರೆ ಮೆಟ್ರೋ ಸ್ಟೇಷನ್ ಹತ್ತಿರ, ಮೈಸೂರು ರಸ್ತೆ, ಬೆಳಿಗ್ಗೆ 8ರಿಂದ 9.15

ಅ.ನಾ. ಪ್ರಹ್ಲಾದರಾವ್ ಅವರ 'ಹೆಜ್ಜೆಗುರುತು' ಪುಸ್ತಕ ಬಿಡುಗಡೆ: ಉದ್ಘಾಟನೆ: ಟಿ.ಎಸ್. ನಾಗಾಭರಣ, ಪುಸ್ತಕ ಬಿಡುಗಡೆ: ಎಚ್.ಎಸ್. ವೆಂಕಟೇಶಮೂರ್ತಿ, ಅಧ್ಯಕ್ಷತೆ: ಮಹೇಶ ಜೋಶಿ, ಆಯೋಜನೆ: ಹಂಸಜ್ಯೋತಿ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಬೆಳಿಗ್ಗೆ 10.30

'ಕಾಲ್ ಫಾರ್ ಕನ್‌ಸರ್ವೇಷನ್' ಛಾಯಾಚಿತ್ರ ಪ್ರದರ್ಶನ ಹಾಗೂ ಕಮ್ಮಟ–'ಎಕೋ–ವಾಚ್' ಹಾಗೂ 'ವೈಲ್ಡ್ ಅಲರ್ಟ್'ನಿಂದ: ಅತಿಥಿಗಳು: ರೋಜರ್ ಬಿನ್ನಿ, ರಾಜ್ ಕಿಶೋರ್ ಸಿಂಗ್, ಸುರೇಶ್ ಹೆಬ್ಳೀಕರ್, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಜೆ. ನಂದಕುಮಾರ್ ಬರೆದಿರುವ 'ಲುಕ್ ಬಿಯಾಂಡ್ ಫ್ಲೋಕ್' ಪುಸ್ತಕ ಬಿಡುಗಡೆ: **ಅತಿಥಿಗಳು:** ಟಿ.ಎಂ. ಭಾಸ್ಕರ್, ಜೆ. ನಂದ ಕುಮಾರ್, ಆಯೋಜನೆ: ಪ್ರಜ್ಞಾ ಪ್ರವ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5

ಮನೆ-ಮನಗಳಲ್ಲಿ ಶಿವಪೂಜೆ ಶಿವಾನುಭವ ಹಾಗೂ ಸಿದ್ಧಾಂತ ಶಿಖಾಮಣಿ–ವಚನ ಪ್ರವಚನ ಕಾರ್ಯಕ್ರಮದ ಸಮಾರೋಪ: ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ಸಂಘ, ಮಹಾದೇವಪುರ ಕ್ಷೇತ್ರ, ಸಂಜೆ.

'ರಾಜಾರುದ್ರಕೋಪ' ಯಕ್ಷಗಾನ ಪ್ರದರ್ಶನ: ಪ್ರಸ್ತುತಿ ಮತ್ತು ಆಯೋಜನೆ: ಗಾನ ಸೌರಭ ಯಕ್ಷಗಾನ ಶಾಲೆ ಹಾಗೂ ಕಲಾವಿದರ ಸಮ್ಮಿಲನ, ಸ್ಥಳ: ಕುವೆಂಪು ಕಲಾಮಂದಿರ, ಬಿ.ಟಿ.ಎಂ ಬಡಾವಣೆ, ಸಂಜೆ 6

ಅಕ್ಕಯ್ ಪದ್ಮಶಾಲಿ ಅವರ ಜೀವನ ಆಧಾರಿತ, ನಾಟಕ 'ಅಕ್ಕಯ್ ಜೀವನ ಹೋರಾಟ' ಪುಸ್ತಕ ಬಿಡುಗಡೆ ಸಮಾರಂಭ: ಆಯೋಜನೆ: ಶಾರದಾ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ವಚನ ಶ್ರಾವಣ: ಗಾಯನ: ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಉಪನ್ಯಾಸ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ನಿತ್ಯ ನೂತನ ಯೋಗ ಶಾಲೆ, ದೊಡ್ಡಬಸ್ತಿ ಮುಖ್ಯರಸ್ತೆ, ಕೆ.ಸಿ.ಎಚ್.ಎಸ್, ಲೇಔಟ್, ಸಂಜೆ 5.30

ಭಾರತದ ಅಮೃತ ಮಹೋತ್ಸವದ ಪ್ರಯುಕ್ತ ವೈವಿಧ್ಯಮಯ ಸಾಂಸ್ಕೃತಿಕ ಸಮಾರಂಭ: ಸಾನ್ನಿಧ್ಯ: ಶಿವಮೂರ್ತಿ ಮುರುಘಾ ಶರಣರು, ಉದ್ಘಾಟನೆ: ಬಿ.ಎಸ್ ಯಡಿಯೂರಪ್ಪ, ಅತಿಥಿಗಳು: ಶಿವರಾಜ್ ಪಾಟೀಲ್, ಸಿ.ಸಿ ಪಾಟೀಲ್, ಮುರುಗೇಶ ನಿರಾಣಿ, ಅಧ್ಯಕ್ಷತೆ: ಅರಳಿ ನಾಗರಾಜ್, ಆಯೋಜನೆ: ಕರ್ನಾಟಕ ಪ್ರತಿಭಾವರ್ಧಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5.40

ಬೆಂಗಳೂರಿನ ಐತಿಹಾಸಿಕ ಚರಿತ್ರೆ ಕುರಿತು ಉಪನ್ಯಾಸ: ಉಪನ್ಯಾಸಕರು: ಲಕ್ಷ್ಮೀ ಶ್ರೀನಿವಾಸ್, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ಶಿವಭಕ್ತ ಶಕುನಿ' ನಾಟಕ ಪ್ರದರ್ಶನ: ಉದ್ಘಾಟನೆ: ಲಕ್ಷ್ಮೀಪತಯ್ಯ ಕೆ.ಸಿ.ಎಸ್., ಮುರಳೀಧರ ಹಾಲಪ್ಪ, ವಿ.ರಘು, ರಚನೆ: ಕಾಕೋಳ ರಾಮಯ್ಯ, ನಿರ್ದೇಶನ: ಅಶ್ವತ್ಥ ನಾರಾಯಣ ಕೆ.ಪಿ., ಆಯೋಜನೆ: ಅಭಿನಯ ರಂಗ ಕೇಂದ್ರ ಕರ್ನಾಟಕ, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6

ಭಜನೆ ಮತ್ತು ಪ್ರವಚನ: ಭಜನೆ ಪ್ರಸ್ತುತಿ: ಮಲ್ಲೇಶ್ವರದ ವಾಸವಿ ಗಾನ ಮಂಡಳಿ, 'ಭಾಗವತ ಅಷ್ಟಮ ಸ್ಕಂದ' ಪ್ರವಚನ: ರಾಮವಿಠಲಾಚಾರ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಕನ್ನಿಕಾ ಪರಮೇಶ್ವರಿ ದೇವಸ್ಥಾನ, ರಾಜಾಜಿನಗರ, ಸಂಜೆ 6

ಜೀವಭಯದಲ್ಲೇ ಸಂಚರಿಸಬೇಕಾದ ಸ್ಥಿತಿ • ರಸ್ತೆ ಗುಂಡಿಗಳಿಂದ ಪರದಾಡುತ್ತಿರುವ ವಾಹನ ಸವಾರರು

ಥಣಿಸಂದ್ರ: ಪಾದಚಾರಿ ಮಾರ್ಗಕ್ಕೆ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲವೆಡೆ ಪಾದಚಾರಿ ಮಾರ್ಗವಿಲ್ಲ. ಇರುವ ಕಡೆ ಅಂಗಡಿಗಳಿಂದ ಒತ್ತುವರಿ, ಜೀವಭಯದಲ್ಲೇ ಸಂಚರಿಸುವ ಪಾದಚಾರಿಗಳಿಂದ ಮಾರ್ಗಗಳ ಹುಡುಕಾಟ... ಇದು ಥಣಿಸಂದ್ರ ಮುಖ್ಯರಸ್ತೆಯ ಸ್ಥಿತಿ.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲು ಇರುವ ಪರ್ಯಾಯ ರಸ್ತೆ ಇದಾಗಿದೆ. ಈ ರಸ್ತೆಗೆ ಇತ್ತೀಚೆಗೆ ವೈಟ್ ಟಾಪಿಂಗ್ ಕೂಡ ಮಾಡಲಾಗಿದೆ. ಆದರೆ, ಪಾದಚಾರಿ ಮಾರ್ಗಗಳು ಸುಸ್ಥಿತಿಯಲ್ಲಿ ಇಲ್ಲ. ನಾಗವಾರ ವೃತ್ತದಿಂದ ಮುಂದೆ ಸಾಗಿದರೆ ರಸ್ತೆಯ ಎರಡೂ ಬದಿಯಲ್ಲಿ ರಸ್ತೆಯಲ್ಲೇ ವಾಹನಗಳು ಸಾಲುಗಟ್ಟಿ ನಿಂತಿರುವುದು ಕಾಣಿಸುತ್ತದೆ.

ಸ್ವಲ್ಪ ಮುಂದೆ ಸಾಗಿದರೆ ಎಡ ಬದಿಯಲ್ಲಿ ಹಣ್ಣು ಮತ್ತು ತರಕಾರಿ ಅಂಗಡಿಗಳು ಪಾದಚಾರಿ ಮಾರ್ಗಕ್ಕೆ ಚಾಚಿಕೊಂಡಿವೆ. ಕೆಲವು ತಳ್ಳುವ ಗಾಡಿಗಳು ಪಾದಚಾರಿ ಮಾರ್ಗವನ್ನು ದಾಟಿ ರಸ್ತೆಗೇ ಇಳಿದಿವೆ. ಥಣಿಸಂದ್ರ ವೃತ್ತದಲ್ಲಿ ನಂದಿನಿ ಪಾರ್ಲರ್ ಇದ್ದು, ಅದರ ಮುಂಭಾಗ ಹಾಲಿನ ಬಾಕ್ಸ್‌ಗಳಿಂದ ಇಡೀ ಪಾದಚಾರಿ ಮಾರ್ಗವನ್ನು ಮುಚ್ಚಲಾಗಿದೆ.

ರೈಲ್ವೆ ಮೇಲ್ಸೇತುವೆ ದಾಟಿ ಮುಂದೆ ಸಾಗಿದರೆ ಬಲ ಬದಿಯಲ್ಲಿ ಹೆಗಡೆನಗರ, ರೇವಾ ಕಾಲೇಜು ತನಕ ಪಾದಚಾರಿ ಮಾರ್ಗವೇ ನಿರ್ಮಾಣವಾಗಿಲ್ಲ. ಆದ್ದರಿಂದ ರಸ್ತೆ ಬದಿಯ ಜಾಗದಲ್ಲಿ ಅಂಗಡಿಗಳು ವಿಸ್ತರಿಸಿಕೊಂಡಿವೆ. ರೈಲ್ವೆಮೆನ್ ಲೇಔಟ್ ಬಸ್ ನಿಲ್ದಾಣದ ಸುತ್ತಮುತ್ತ ಪಾದಚಾರಿ ಮಾರ್ಗ ಹುಡುಕಬೇಕಾದ ಸ್ಥಿತಿ ಇದೆ.

ವೈಟ್ ಟಾಪಿಂಗ್ ರಸ್ತೆ ಆಗಿರುವುದರಿಂದ ವಾಹನಗಳು ವೇಗವಾಗಿ ಸಂಚರಿಸುತ್ತವೆ. ಅದರಲ್ಲೂ ಬೆಳ್ಳಹಳ್ಳಿ ನೆಲಭರ್ತಿ ಘಟಕಕ್ಕೆ ಕಸ ಸಾಗಿಸುವ ಬಿಬಿಎಂಪಿ ಟಿಪ್ಪರ್‌ಗಳು ಕ್ಷಣಕ್ಕೊಂದರಂತೆ ಸಂಚರಿಸುತ್ತವೆ. ಪಾದಚಾರಿ ಮಾರ್ಗ ಇಲ್ಲದಿರುವುದರಿಂದ ರಸ್ತೆಗೆ ಇಳಿಯುವ ಜನ ಜೀವ ಭಯದಲ್ಲೇ ಹೆಜ್ಜೆ ಇಡುವಂತಾಗಿದೆ.

ಹೆಗಡೆನಗರದ ಬಳಿ ಇರುವ ಮೇಲ್ಸೇತುವೆಗೂ ಮುನ್ನ ರಸ್ತೆಯಲ್ಲೇ ದೊಡ್ಡ ಗುಂಡಿಯೊಂದು ನಿರ್ಮಾಣವಾಗಿದೆ. ಮೇಲ್ಸೇತುವೆಯಿಂದ ಇಳಿಜಾರಿನಲ್ಲಿ ವೇಗವಾಗಿ ಬರುವ ವಾಹನಗಳು ಈ ಗುಂಡಿಗೆ ಇಳಿದು ತೊಂದರೆಗೆ ಸಿಲುಕುತ್ತಿವೆ. ದ್ವಿಚಕ್ರ ವಾಹನಗಳ ಸವಾರರು ನಿತ್ಯ ಗುಂಡಿಯಲ್ಲಿ ಬಿದ್ದು ಎದ್ದು ಹೋಗುತ್ತಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ. ಮಳೆ ಬಂದರೆ ಗುಂಡಿ ಇರುವುದು ಗೊತ್ತಾಗದೆ ಹಲವರು ವಾಹನದೊಂದಿಗೆ ಬಿದ್ದು ಪೆಟ್ಟು ಮಾಡಿಕೊಂಡಿದ್ದಾರೆ ಎಂದು ವಿವರಿಸುತ್ತಾರೆ.



ಥಣಿಸಂದ್ರ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗದಲ್ಲೇ ಅಂಗಡಿಗಳು ಚಾಚಿಕೊಂಡಿರುವುದು —ಪ್ರಜಾವಾಣಿ ಚಿತ್ರ/ರಂಜು ಪಿ.

ತೆರವುಗೊಳಿಸಿದರೂ ಬದಲಾಗದ ಪರಿಸ್ಥಿತಿ

ಪಾದಚಾರಿ ಮಾರ್ಗದ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಇತ್ತೀಚೆಗೆ ಮಾಡಿದ್ದರೂ, ಪರಿಸ್ಥಿತಿ ಬದಲಾಗಿಲ್ಲ.

ಆ.20ರಂದು ಬಿಬಿಎಂಪಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದ್ದರು. ಕೆಲವೇ ದಿನಗಳಲ್ಲಿ ಮತ್ತೆ ಅದೇ ಸ್ಥಿತಿ ನಿರ್ಮಾಣವಾಗಿದೆ. ಅಂಗಡಿಗಳು ಪಾದಚಾರಿ ಮಾರ್ಗಕ್ಕೆ ಚಾಚಿಕೊಂಡಿವೆ. ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ವ್ಯಾಪಾರಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದರಿಂದ ಸಮಸ್ಯೆ ಹೆಚ್ಚಾಗಿದೆ ಎಂದು ಸ್ಥಳೀಯರು ಆರೋಪಿಸುತ್ತಾರೆ.



ಥಣಿಸಂದ್ರ ರಸ್ತೆಯಲ್ಲಿ ಸಾರ್ವಜನಿಕ ಸಂಚಾರವೇ ದುಸ್ತರವಾಗಿದೆ. ಕಳೆದ ವಾರ ಕಾಟಾಚಾರಕ್ಕೆ ಕೆಲವೇ ಅಂಗಡಿಗಳ ಒತ್ತುವರಿ ತೆರವುಗೊಳಿಸಿ ಹೋದ ಬಿಬಿಎಂಪಿ ಅಧಿಕಾರಿಗಳು ಮತ್ತೆ ತಿರುಗಿ ನೋಡಿಲ್ಲ.

ಆರ್.ನಾಗೇಶ್
ಬಿಎಸ್‌ಪಿ ಬೆಂಗಳೂರು ಉತ್ತರ ಪ್ರಧಾನ ಕಾರ್ಯದರ್ಶಿ

ಮೂಲಸೌಕರ್ಯ: ಎರಡು ವರ್ಷ ಹೋರಾಡಿ ಗೆದ್ದ ನಾಗರಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷಗಳ ಹೋರಾಟದ ನಂತರ ಎಲ್ಲ ಸೌಲಭ್ಯ ದೊರೆತು ರಸ್ತೆಗೆ ಡಾಂಬರು ಹಾಕಿದ ಸಂತೋಷಕ್ಕಾಗಿ ಉತ್ತರ ತಾಲ್ಲೂಕಿನ ಥಣಿಸಂದ್ರ ಸಮೀಪದ ಕುವೆಂಪು ಬಡಾವಣೆ ನಿವಾಸಿಗಳು ಕುಣಿದು–ಕುಪ್ಪಳಿಸಿ ಮೆರವಣಿಗೆ ಮಾಡಿದರು.

ಬಡಾವಣೆಯ ಎರಡು ಮುಖ್ಯರಸ್ತೆಗಳು ಹಾಗೂ ನಾಲ್ಕು ಅಡ್ಡರಸ್ತೆಗಳ ಡಾಂಬರು ಕಾಮಗಾರಿ ಭಾನುವಾರ ಮುಗಿದ ಮೇಲೆ ನಿವಾಸಿಗಳು ಸಂತಸ ವ್ಯಕ್ತಪಡಿಸಿದರು. 2020ರ ಜೂನ್‌ನಿಂದ ಬಡಾವಣೆಗೆ ಸೌಕರ್ಯ ಒದಗಿಸಲು ನಿವಾಸಿಗಳು ಅಭಿಯಾನವನ್ನು ನಡೆಸುತ್ತಿದ್ದರು. ಕುವೆಂಪು ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್ ರಚಿಸಿಕೊಂಡು, ಕಾವೇರಿ ನೀರು ಪೂರೈಕೆ, ಒಳಚರಂಡಿ ವ್ಯವಸ್ಥೆ, ಪೈಪ್ಡ್ ಗ್ಯಾಸ್, ಬೀದಿ ದೀಪ ಮತ್ತು ಉತ್ತಮ ರಸ್ತೆಗಳಿಗಾಗಿ ಬೇಡಿಕೆ ಸಲ್ಲಿಸುತ್ತಿದ್ದರು.

‘ರಸ್ತೆಗಳು ಸರಿ ಇರಲಿಲ್ಲ. ಒಳಚರಂಡಿ ವ್ಯವಸ್ಥೆಯೂ ಸೂಕ್ತವಾಗಿರಲಿಲ್ಲ. ಕೆಲವೇ ಬೀದಿದೀಪಗಳಿದ್ದವು. ನೀರು ಪೂರೈಕೆ ಕಷ್ಟಕರವಾಗಿತ್ತು. ಬಡಾವಣೆಯಲ್ಲಿ ಸುಮಾರು 253 ಕುಟುಂಬಗಳಿವೆ. ಬಹುತೇಕರು 2000ರಲ್ಲಿ ಇಲ್ಲಿಗೆ ಬಂದಿದ್ದಾರೆ. ನಮ್ಮ ನಾಗರಿಕರ ಅಭಿಯಾನಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿ, ಸೌಲಭ್ಯಗಳು ದೊರೆತವು’ ಎಂದು ಅಸೋಸಿಯೇಷನ್ ಕಾರ್ಯದರ್ಶಿ ಡಾ. ಎಂ.ಆರ್. ಶ್ರೀವತ್ಸನ್ ತಿಳಿಸಿದರು.

‘ಅಸೋಸಿಯೇಷನ್ ಸದಸ್ಯರು ಶಾಸಕ ಕೃಷ್ಣ ಬೈರೇಗೌಡ ಅವರನ್ನು ಭೇಟಿ ಮಾಡಿದಾಗ ಅವರು ಜಲಮಂಡಳಿ, ಬಿಬಿಎಂಪಿ, ಬೆಸ್ಕಾಂ ಮತ್ತು ಜಿಎಐಎಲ್ (ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್) ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ನಂತರ ನಾವೆಲ್ಲ ನಿವಾಸಿಗಳು ಇಲಾಖೆಗಳಿಗೆ ಅಗತ್ಯ ಶುಲ್ಕವನ್ನು ಪಾವತಿಸಲು ನಿರ್ಧರಿಸಿದೆವು. ಅದೆಲ್ಲ ಪಾವತಿಸಿ, ನಿಗಾವಹಿಸಿದ ಸುಮಾರು ಎರಡು ವರ್ಷಗಳಲ್ಲಿ ನಮಗೆ ಎಲ್ಲ ರೀತಿಯ ಸೌಲಭ್ಯಗಳು ಸಿಕ್ಕಿವೆ. ಸುತ್ತಲಿನ ಬಡಾವಣೆಗಳಲ್ಲಿ ಇನ್ನೂ ಸೌಲಭ್ಯಗಳಿಲ್ಲ. ಆದರೆ ನಮ್ಮೆಲ್ಲ ಸಂಘಟಿತ ಹೋರಾಟ ನಾಗರಿಕ ಸೌಲಭ್ಯಗಳನ್ನು ಕಲ್ಪಿಸಿದೆ’ ಎಂದು ಅಸೋಸಿಯೇಷನ್ ಅಧ್ಯಕ್ಷ ಗಂಗಾಧರ ಹಿರೇಮಠ ಹೇಳಿದರು.

‘ಬಡಾವಣೆಯಲ್ಲಿ 100 ಕೆ.ಜಿಯಷ್ಟು ಹಸಿ ತ್ಯಾಜ್ಯದಿಂದ ಸಂಸ್ಕರಣೆ ಮಾಡುವ ವ್ಯವಸ್ಥೆ ಇದೆ. 75ರಿಂದ 80 ಕೆ.ಜಿ ಒಣ ತ್ಯಾಜ್ಯವನ್ನೂ ಸಂಸ್ಕರಿಸುತ್ತಿದ್ದೇವೆ. ಪೈಪ್ಡ್ ಗ್ಯಾಸ್ ಸೇರಿ ಸಮಸ್ಯೆಗಳ ನಿರ್ವಹಣೆಗೆ 148 ಮಹಿಳೆಯರು ಸೇರಿಕೊಂಡು ತ್ರಿವೇಣಿ ಮಹಿಳಾ ಕ್ಲಬ್ ರಚಿಸಿಕೊಂಡಿದ್ದಾರೆ’ ಎಂದರು.

‘ನಮ್ಮ ಒಮ್ಮತದ ಬೇಡಿಕೆಗೆ ಸ್ಥಳೀಯ ಸಂಸ್ಥೆಗಳು ಮಣಿಸಿ ಸೌಲಭ್ಯಗಳನ್ನು ಕಲ್ಪಿಸಿವೆ. ಕೊನೆಯದಾಗಿ ಆ.21ರಂದು ರಸ್ತೆ ಡಾಂಬರು ಕಾರ್ಯ ಆರಂಭವಾದಾಗ ಬಡಾವಣೆಯಲ್ಲಿ ಹಬ್ಬದ ರೀತಿ ಆಚರಣೆ ಮಾಡಿ, ಎಲ್ಲರೂ ಊಟ ಮಾಡಿದೆವು. ಇದೀಗ ಡಾಂಬರು ಕೆಲಸವೂ ಮುಗಿದಿದೆ’ ಎಂದು ತಿಳಿಸಿದರು.



ರಸ್ತೆಗೆ ಡಾಂಬರು ಹಾಕುವ ಕಾಮಗಾರಿ ಆರಂಭವಾದ ಸಂದರ್ಭದಲ್ಲಿ ಕುವೆಂಪು ಬಡಾವಣೆ ನಿವಾಸಿಗಳು ಸಂತಸಗೊಂಡು ಮೆರವಣಿಗೆ ನಡೆಸಿದರು

ಸುದ್ದಿ 2 ನಿಮಿಷ

ಬೈಕ್ ಸವಾರ ಸಾವು: ಬಿಬಿಎಂಪಿ ವಿರುದ್ಧ ದೂರು

ಬೆಂಗಳೂರು: ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಸುಂಕದಕಟ್ಟೆಯಲ್ಲಿ ರಸ್ತೆಯಲ್ಲಿನ ಗುಂಡಿಯಿಂದ ಆಯತಪ್ಪಿ ಬಿದ್ದು ಬೈಕ್ ಸವಾರ ಸುಪ್ರೀತ್‌ರಾಜ್ (39) ಮೃತಪಟ್ಟಿದ್ದಾರೆ. ರಸ್ತೆಯಲ್ಲಿನ ಗುಂಡಿ ಮುಚ್ಚದ ಬಿಬಿಎಂಪಿ ವಿರುದ್ಧ ಸಾರ್ವಜನಿಕರು ಆಕ್ರೋಶ ಹೊರಹಾಕಿದ್ದಾರೆ.

ಹೇರೋಹಳ್ಳಿಯಲ್ಲಿ ನೆಲೆಸಿದ್ದ ಸುಪ್ರೀತ್ ಬೈಕ್‌ನಲ್ಲಿ ಕಚೇರಿಗೆ ತೆರಳುವಾಗ ಗುಂಡಿಯಿಂದ ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದರು. ಬಸವೇಶ್ವರ ನಗರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟಿದ್ದಾರೆ.

ಬಿಬಿಎಂಪಿ ವಿರುದ್ಧ ದೂರು: ಗುಂಡಿ ಮುಚ್ಚದಿರುವ ಕಾರಣಕ್ಕೆ ಈ ಅನಾಹುತ ಸಂಭವಿಸಿದೆ. ಅನಾಹುತಕ್ಕೆ ಬಿಬಿಎಂಪಿಯೇ ಹೊಣೆ ಎಂದು ದೂರಿ ಸುಪ್ರೀತ್ ಸಹೋದರ ಸುಮಂತ್ ಬಿಬಿಎಂಪಿ ವಿರುದ್ಧ ದೂರು ದಾಖಲಿಸಿದ್ದಾರೆ.

‘ಬಿಬಿಎಂಪಿ ನಿರ್ಲಕ್ಷ್ಯದಿಂದ ಅಮಾಯಕ ಯುವಕನ ಜೀವ ಹೋಗಿದೆ. ಬೆಂಗಳೂರಿನಲ್ಲಿ ಮೂಲಸೌಲಭ್ಯಗಳ ಕೊರತೆಯಿದೆ. ಇದೊಂದು ದುರದೃಷ್ಟ ಘಟನೆ. ಮುಖ್ಯಮಂತ್ರಿಯೇ ದುರ್ಬಲವಾಗಿದ್ದಾರೆ. ಹೈಕೋರ್ಟ್ ಪದೇ ಪದೇ ಚಾಟಿ ಬೀಸಿದರೂ ಎಚ್ಚೆತ್ತುಕೊಂಡಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟ್ವೀಟರ್‌ನಲ್ಲಿ ಆಕ್ರೋಶ ಹೊರಹಾಕಿದ್ದಾರೆ.

‘ಈ ಸರ್ಕಾರದಲ್ಲಿ ಜನರು ಇದ್ದರೆಷ್ಟು, ಬಿಟ್ಟರೆಷ್ಟು. ಇವರಿಗೆ ಶೇ 40ರಷ್ಟು ಕಮಿಷನ್ ಬೇಕು. ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಅಧಿಕಾರಿಗಳಿಗೆ ಲಂಚ ಕೊಡದಿದ್ದರೆ ಕೆಲಸ ಮಾಡುವುದಿಲ್ಲ. ಸೋತರೂ ಆಪರೇಷನ್ ಕಮಲದ ಮೂಲಕ ಅಧಿಕಾರ ಹಿಡಿದು ಜನರ ಜೀವಕ್ಕೆ ಕೊಳ್ಳಿ ಇಡುತ್ತಿದ್ದಾರೆ’ ಎಂದು ಪ್ರಭಾಕರ್ ಎಂಬಾತ ಟ್ವೀಟ್ ಮೂಲಕ ಆಕ್ರೋಶ ಹೊರಹಾಕಿದ್ದಾರೆ.

ಸಾಕಷ್ಟು ಮಂದಿ ಸರ್ಕಾರದ ವಿರುದ್ಧ ಕಿಡಿಕಾರಿದ್ದು, ರಸ್ತೆ ದುರಸ್ತಿಗೆ ಆಗ್ರಹಿಸಿದ್ದಾರೆ.



ರೌಡಿಗಳ ಮನೆ ಮೇಲೆ ಪೊಲೀಸರ ದಾಳಿ

ಬೆಂಗಳೂರು: ಗಣೇಶ ಹಬ್ಬದ ಹಿನ್ನೆಲೆಯಲ್ಲಿ ನಗರದಲ್ಲಿ ಪೊಲೀಸರು ಕಟ್ಟೆಚ್ಚರ ವಹಿಸಿದ್ದು, ರೌಡಿಗಳ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದಾರೆ.

ಪಶ್ಚಿಮ ವಿಭಾಗದ ವಿವಿಧ ಠಾಣೆ ಪೊಲೀಸರು ಮಂಗಳವಾರ ರಾತ್ರಿ ಹಾಗೂ ಬುಧವಾರ ಬೆಳಿಗ್ಗೆ ರೌಡಿಗಳ ಮನೆಗಳ ದಾಳಿ ನಡೆಸಿ ರೌಡಿ ಚಟುವಟಿಕೆ ನಡೆಸುತ್ತಿದ್ದವರಿಗೆ ಬಿಸಿಮುಟ್ಟಿಸಿದ್ದಾರೆ.

ಮೂರೂ ಉಪ ವಿಭಾಗಗಳಲ್ಲಿ 160 ರೌಡಿಶೀಟರ್ ಮನೆಗಳ ದಾಳಿ ನಡೆಸಿ ಮಾರಕಾಸ್ತ್ರಗಳಿಗೆ ಶೋಧ ನಡೆಸಲಾಯಿತು. ಅದರಲ್ಲಿ 100 ಮಂದಿ ರೌಡಿಗಳು ಪತ್ತೆಯಾಗಿದ್ದು, 60 ಮಂದಿ ತಲೆಮರೆಸಿಕೊಂಡಿದ್ದಾರೆ. ಈಗಲೂ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುವ 32 ಮಂದಿಯನ್ನು ಪೊಲೀಸ್ ಠಾಣೆಗೆ ಕರೆಸಿ ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆ ನೀಡಿ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜೈಲಿನಿಂದ ಹೊರಬಂದಿದ್ದ ಜಿಬ್ರಾನ್ ಎಂಬುವನ ಮನೆಯಲ್ಲಿ ಡ್ರ್ಯಾಗರ್ ಸಿಕ್ಕಿದ್ದು, ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಉಚಿತ ತರಬೇತಿ

ಬೆಂಗಳೂರು: ಉದಯಭಾನು ಕಲಾಸಂಘದ ವತಿಯಿಂದ 2022–23ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪಾಠ, ಪ್ರವಚನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳ ಉಚಿತ ತರಬೇತಿ ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ–080–26609343, 9880892180ಗೆ ಸಂಪರ್ಕಿಸಿ.

₹25 ಲಕ್ಷ ಸುಲಿಗೆ ಮಾಡಿದ್ದ ಪುಷ್ಪಾ, ಸಹಚರರು– ಬಂಧನ

ಉದ್ಯಮಿ ಪುತ್ರ ಅಪಹರಣ: ₹4 ಕೋಟಿಗೆ ಬೇಡಿಕೆ

ಬೆಂಗಳೂರು: ಗುತ್ತಿಗೆದಾರ ಹಾಗೂ ಉದ್ಯಮಿ ರವಿ ಅವರ ಪುತ್ರ ಸೂರಜ್ ಎಂಬಾತನನ್ನು ಅಪಹರಿಸಿ ₹ 25 ಲಕ್ಷ ಸುಲಿಗೆ ಮಾಡಿದ್ದ ಪ್ರಕರಣದಲ್ಲಿ ಮೈಸೂರು ರಸ್ತೆಯ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಬಳಿಯ (ಸ್ಯಾಟಲೈಟ್ ಬಸ್ ನಿಲ್ದಾಣ) ಎ.ಪಿ.ಜೆ ಅಬ್ದುಲ್ ಕಲಾಂ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷೆ ಪುಷ್ಪಾ (30) ಹಾಗೂ ಕೃತ್ಯಕ್ಕೆ ಸಹಕಾರ ನೀಡಿದ ಆಕೆಯ ಸಂಬಂಧಿ, ಮೈಸೂರು ರಸ್ತೆಯ ಶಾರದಾ ಶಾಲೆ ಬಳಿ ನಿವಾಸಿ ರಾಕೇಶ್‌ನನ್ನು (27) ಬ್ಯಾಟರಾಯನಪುರ ಪೊಲೀಸರು ಬುಧವಾರ ಬಂಧಿಸಿದ್ದಾರೆ.



ಪುಷ್ಪಾ



ರಾಕೇಶ್

‘ಬಂಧಿತರಿಂದ ₹ 20 ಲಕ್ಷ ನಗದು, ಏರಗನ್ ವಶಕ್ಕೆ ಪಡೆಯಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿದ್ದ ಅರ್ಜುನ್ ಹಾಗೂ ಸಂತೋಷ್ ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಶೋಧ ಮುಂದುವರಿದಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ಬ. ನಿಂಬರಗಿ ತಿಳಿಸಿದ್ದಾರೆ.

‘ಐಎಎಸ್ ಅಧಿಕಾರಿಗಳ ಪರಿಚಯವಿದ್ದು, ಸರ್ಕಾರದಿಂದ ಕಾಮಗಾರಿಯ ಗುತ್ತಿಗೆ ಕೊಡಿಸುವುದಾಗಿ ಸೂರಜ್‌ನನ್ನು ಕಚೇರಿಗೆ ಕರೆಸಿಕೊಂಡು ಮೊಬೈಲ್ ಕಸಿದು, ಬಾಯಿಗೆ ಬಟ್ಟೆ ತುರುಕಿ ಅಪಹರಣ ಮಾಡಲಾಗಿತ್ತು. ಆರಂಭದಲ್ಲಿ ಅಪಹರಣಕಾರರು ₹ 4 ಕೋಟಿಗೆ ಬೇಡಿಕೆ ಇಟ್ಟಿದ್ದರು. ಅಷ್ಟೊಂದು ಹಣ ಇಲ್ಲ ಎಂದಾಗ, ನಕಲಿ ರಿವಾಲ್ವರ್ (ಏರ್‌ಗನ್) ತೋರಿಸಿ ಹಣ ನೀಡದಿದ್ದರೆ ಜೀವಂತವಾಗಿ ವಾಪಸ್ ಕಳುಹಿಸುವುದಿಲ್ಲ ಎಂದು ಬೆದರಿಕೆ ಹಾಕಿದ್ದರು. ಅದಾದ ಮೇಲೆ ಬೇಡಿಕೆಯ ಮೊತ್ತ ಕಡಿಮೆಗೊಳಿಸಿದ್ದ ಆರೋಪಿಗಳು, ಸೂರಜ್ ಸ್ನೇಹಿತನಿಂದ ₹ 25 ಲಕ್ಷ ಪಡೆದು ಬಿಟ್ಟು ಕಳುಹಿಸಿದ್ದರು’ ಎಂದು ಡಿಸಿಪಿ ತಿಳಿಸಿದರು.

‘ಪೊಲೀಸರಿಗೆ ದೂರು ನೀಡಿದರೆ ಕುಟುಂಬವನ್ನು ಜೀವಂತವಾಗಿ ಬಿಡುವುದಿಲ್ಲ. ಅತ್ಯಾಚಾರ ಪ್ರಕರಣ ದಾಖಲಿಸುವುದಾಗಿ ಬೆದರಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಿ.ಕಾಂ ತನಕ ವ್ಯಾಸಂಗ ಮಾಡಿದ್ದ ಪುಷ್ಪಾ ಕೆಲಸ ಸಿಗದಿದ್ದಾಗ ಹನುಮಂತಯ್ಯ ಕಟ್ಟಡದಲ್ಲಿ ಸೋಷಿಯಲ್ ವೆಲ್‌ಫೇರ್ ಹೆಸರಿನ ಸಂಸ್ಥೆ ಆರಂಭಿಸಿದ್ದಳು. ಕೇಂದ್ರ, ರಾಜ್ಯ ಸರ್ಕಾರದ ಟೆಂಡರ್ ಕೊಡಿಸುವುದಾಗಿ ನಂಬಿಸಿ ಜನರಿಗೆ ಮೋಸ ಮಾಡುತ್ತಿದ್ದಳು. ಕಪ್ಪು ಹಣವನ್ನು ಬಿಳಿ ಹಣವನ್ನಾಗಿ ಪರಿವರ್ತಿಸುವ ದಂಧೆಯಲ್ಲಿ ತೊಡಗಿದ್ದಳು. ಇದರಿಂದ ಹೆಚ್ಚಿನ ಹಣ ಸಂಪಾದನೆ ಆಗದಿದ್ದಾಗ ಉದ್ಯಮಿ ಪುತ್ರನ ಅಪಹರಿಸಿ ಕೋಟ್ಯಂತರ ರೂಪಾಯಿ ಹಣ ಗಳಿಸಲು ಮುಂದಾಗಿದ್ದಳು’ ಎಂದು ಮೂಲಗಳು ಹೇಳಿವೆ.

ತಲೆಮರೆಸಿಕೊಂಡಿರುವ ಅರ್ಜುನ್ ‘ಎ’ ದರ್ಜೆಯ ರೌಡಿ ಆಗಿದ್ದು, ಆತನ ವಿರುದ್ಧ ಒಂದು ಕೊಲೆ, ಎರಡು ಕೊಲೆ ಯತ್ನ ಪ್ರಕರಣಗಳು ದಾಖಲಾಗಿವೆ.

ಎಸಿಪಿ ಟಿ.ಕೋದಂಡರಾಮ, ಇನ್‌ಸ್ಪೆಕ್ಟರ್ ಶಂಕರನಾಯ್ಕ, ಪಿಎಸ್‌ಐ ವೀರಭದ್ರಪ್ಪ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿತ್ತು.

ಚಿನ್ನಾಭರಣ ಕಳವು ಆರೋಪಿ ಬಂಧನ

ಬೆಂಗಳೂರು: ವಿವೇಕನಗರ, ಎಚ್.ಎಸ್.ಆರ್.ಲೇಔಟ್ ವ್ಯಾಪ್ತಿಯ ಮನೆಗಳಲ್ಲಿ ಚಿನ್ನಾಭರಣ ಹಾಗೂ ನಗದು ಕಳವು ಮಾಡುತ್ತಿದ್ದ ಪಿಳ್ಳಣ್ಣ ಗಾರ್ಡನ್ ನಿವಾಸಿ ಇಸ್ರಾರ್ ಅಹ್ಮದ್ (32) ಎಂಬಾತನನ್ನು ವಿವೇಕನಗರ ಪೊಲೀಸರು ಬುಧವಾರ ಬಂಧಿಸಿದ್ದಾರೆ. ಬಂಧಿತನಿಂದ ₹ 11 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೈಕ್ ವಶಕ್ಕೆ ಪಡೆಯಲಾಗಿದೆ.

ಬೈಕ್ ವಶ: ಮಡಿವಾಳ ಪೊಲೀಸರು ಕಾರ್ಯಾಚರಣೆ ನಡೆಸಿ, ಪರಪ್ಪನ ಅಗ್ರಹಾರ, ಬೊಮ್ಮನಹಳ್ಳಿ, ಮಡಿವಾಳ, ಹೊಸೂರು, ಅತ್ತಿಬೆಲೆ ವ್ಯಾಪ್ತಿಯಲ್ಲಿ ಬೈಕ್ ಕಳವು ಮಾಡುತ್ತಿದ್ದ ಸಮೀರ್ ಪಾಷಾ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನ್ನು ಬಂಧಿಸಿದ್ದು, ₹ 12 ಲಕ್ಷ ಮೌಲ್ಯದ 16 ಬೈಕ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ವ್ಯಕ್ತಿ ಕೊಲೆ: ಮೂವರ ಬಂಧನ

ಬೆಂಗಳೂರು: ಹಳೆ ದ್ವೇಷದಿಂದ ಹೆಗ್ಗನಹಳ್ಳಿಯ ಅಜೀಂಉಲ್ಲಾ ಖಾನ್ (43) ಎಂಬುವವರ ಕೊಲೆ ಮಾಡಿದ್ದ ಮೂವರು ಆರೋಪಿಗಳನ್ನು ರಾಜಗೋಪಾಲನಗರ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಹೆಗ್ಗನಹಳ್ಳಿಯ ಮಾರುತಿ ನಗರದ ನಿವಾಸಿ ಹನೀಫ್, ಸಲ್ಮಾನ್, ಸೈಯದ್ ಅಕ್ಮಲ್ ಬಂಧಿತರು.

ಮೂವರೂ ಆರೋಪಿಗಳು ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿ ಅಣ್ಣಮ್ಮ ಫ್ಯಾಷನ್ ಟೈಲರ್‌ಶಾಪ್ ಬಳಿ ಹಳೆ ದ್ವೇಷದಿಂದ ಮಾರಕಾಸ್ತ್ರಗಳಿಂದ ತಿವಿದು ಕೊಲೆ ಮಾಡಿದ್ದರು. ಕೊಲೆಯಾದ ವ್ಯಕ್ತಿಯು ಮಾರುತಿನಗರದಲ್ಲಿ ಹಳೆ ವಸ್ತುಗಳ ವ್ಯಾಪಾರ ನಡೆಸುತ್ತಿದ್ದರು. ಪರಸ್ಪರ ಗಲಾಟೆ ನಡೆದದ್ದರಿಂದ ಆರೋಪಿಗಳು ಕೊಲೆ ಮಾಡಿ ಪರಾರಿಯಾಗಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಸಿಬ್ಬಂದಿಯಿಂದಲೇ ಸೋನಾಲಿ ಹತ್ಯೆ: ಆರೋಪ

ಪಣಜಿ (ಪಿಟಿಐ): ‘ನನ್ನ ಸಹೋದರಿಯನ್ನು ಆಕೆಯ ಇಬ್ಬರು ಸಿಬ್ಬಂದಿಯೇ ಕೊಲೆ ಮಾಡಿದ್ದಾರೆ’ ಎಂದು ಸೋನಾಲಿ ಪೋಗಾಟ್ ಅವರ ಸಹೋದರ ಗೋವಾ ಪೊಲೀಸರಿಗೆ ದೂರು ನೀಡಿದ್ದಾರೆ. ಹರಿಯಾಣದ ಬಿಜೆಪಿ ನಾಯಕಿ, ನಟಿ ಸೋನಾಲಿ ಅವರು ಹೃದಯಾಘಾತದಿಂದ ಮಂಗಳವಾರ ಗೋವಾದಲ್ಲಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿತ್ತು.

‘ಸಾಯುವ ಕೆಲ ಹೊತ್ತಿನ ಮುನ್ನಾ ಸೋನಾಲಿ, ನಮ್ಮ ತಾಯಿ, ಸಹೋದರಿ ಮತ್ತು ಸಹೋದರಿಯ ಪತಿಯೊಂದಿಗೆ ಫೋನಿನಲ್ಲಿ ಮಾತನಾಡಿದ್ದಾರೆ. ಆಕೆ ಯಾವುದೋ ತೊಂದರೆಯಲ್ಲಿ ಸಿಲುಕಿದ್ದಾಳೆ ಎಂಬುದು ಆಕೆಯ ಧ್ವನಿಯಲ್ಲಿ ಗೊತ್ತಾಗುತ್ತಿತ್ತು. ಜತೆಗೆ, ತನ್ನ ಇಬ್ಬರು ಸಿಬ್ಬಂದಿಯ ಬಗ್ಗೆಯೂ ನಮ್ಮ ಬಳಿ ಆಕೆ ದೂರಿದ್ದಳು’ ಎಂದು ಸೋನಾಲಿ ಅವರ ಸಹೋದರ ರಿಂಕು ಧಾಕ ಬುಧವಾರ ಆರೋಪಿಸಿದರು.

ವಿದೇಶದಲ್ಲಿ ಉದ್ಯೋಗಕ್ಕಾಗಿ ನಕಲಿ ಅಂಕಪಟ್ಟಿ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಕ್ಕೆ ಉದ್ಯೋಗಕ್ಕಾಗಿ ತೆರಳುವವರಿಗೆ ನಕಲಿ ಅಂಕಪಟ್ಟಿ ತಯಾರಿಸಿಕೊಡುತ್ತಿದ್ದ ಬೆಂಗಳೂರಿನ ಆಯೂಬ್ ಷಾಷಾ (52) ಹಾಗೂ ಚಿಕ್ಕಬಳ್ಳಾಪುರದ ಖಲೀಲ್ ವುಲ್ಲಾ (52) ಎಂಬ ಆರೋಪಿಗಳನ್ನು ಶೇಷಾದ್ರಿಪುರಂ ಪೊಲೀಸರು ಬುಧವಾರ ಬಂಧಿಸಿದ್ದಾರೆ.

38 ನಕಲಿ ಅಂಕಪಟ್ಟಿ, ಲ್ಯಾಪ್‌ಟಾಪ್, ಮುದ್ರಣ ಯಂತ್ರ ಹಾಗೂ ಎರಡು ಮೊಬೈಲ್ ವಶಕ್ಕೆ ಪಡೆಯಲಾಗಿದೆ.

‘ಸೌದಿ ಅರೇಬಿಯಾ, ದುಬೈ ಸೇರಿ ವಿವಿಧ ರಾಷ್ಟ್ರಗಳಲ್ಲಿ ಉದ್ಯೋಗಕ್ಕೆ ತೆರಳುವವರಿಂದ ಆರೋಪಿಗಳು ಹಣ ಪಡೆದು ಬಿಕಾಂ, ಬಿಬಿಎಂ, ಬಿಇ ಹಾಗೂ ದ್ವಿತೀಯ ಪಿಯುಸಿ ತೇರ್ಗಡೆಯಾದಂತೆ ನಕಲಿ ಅಂಕಪಟ್ಟಿ ತಯಾರಿಸಿ ಕೊಡುತ್ತಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಈ ಹಿಂದೆಯೂ ಇದೇ ದಂಧೆಯಲ್ಲಿ ಇಬ್ಬರನ್ನು ಬಂಧಿಸಲಾಗಿತ್ತು. ಬಿಡುಗಡೆಯಾದ ಮೇಲೆ ಮತ್ತೆ ಇದೇ ದಂಧೆ ನಡೆಸುತ್ತಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಆಯೂಬ್ ಷಾಷಾ



ಖಲೀಲ್‌ವುಲ್ಲಾ ಬೇಗ್

ಕನ್ನಡ ಸಾಹಿತ್ಯ ಪರಿಷತ್ತಿನಿಂದ ₹1.95 ಕೋಟಿ ವೆಚ್ಚದಲ್ಲಿ ಕಟ್ಟಡ ನವೀಕರಣ

ಸಾಂಪ್ರದಾಯಿಕ ‘ಮಂದಿರ’ಕ್ಕೆ ಆಧುನಿಕ ಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂಬತ್ತು ದಶಕಗಳಿಂದ ವಿವಿಧ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವೇದಿಕೆ ಒದಗಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರವು ಸಾಂಪ್ರದಾಯಿಕತೆ ಉಳಿಸಿಕೊಂಡೇ ಆಧುನಿಕ ಸ್ಪರ್ಶಕ್ಕೆ ತೆರೆದುಕೊಂಡಿದೆ.

ನೆಲಹಾಸು, ಧ್ವನಿ–ಬೆಳಕಿನ ವ್ಯವಸ್ಥೆ, ಆಸನಗಳು, ಹವಾನಿಯಂತ್ರಿತ ವ್ಯವಸ್ಥೆ ಸೇರಿ ಸಭಾಂಗಣದಲ್ಲಿ ಎಲ್ಲವನ್ನೂ ಹೊಸದಾಗಿ ಅಳವಡಿಸಲಾಗಿದೆ.

ಸಭಾಂಗಣದ ಗೋಡೆ ಗಳನ್ನು ಪ್ಲೈವುಡ್‌ನಿಂದ ಅಂದಗೊಳಿಸಲಾಗಿದೆ. ಐದು ತಿಂಗಳಲ್ಲಿ ನವೀಕರಣ ಕಾರ್ಯ ನಡೆಸಲಾಗಿದ್ದು, ಈಗ ಅಂತಿಮ ಸ್ಪರ್ಶ ನೀಡಲಾಗುತ್ತಿದೆ. ಹೊರಾಂಗಣದ ಬಣ್ಣವೂ ಬದಲಾಗಿದ್ದು, ಈ ಮೊದ ಲಿನ ಹಳದಿ ಬಣ್ಣದ ಬದಲು ಪಾರಂ ಪರಿಕ ಕಟ್ಟಡಗಳಂತೆ ಕೆಂಪು ಬಣ್ಣ ಬಳಿಯಲಾಗಿದೆ. ₹ 1.95 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗಿದೆ.

ಪರಿಷತ್ತಿನಲ್ಲಿ ಮೂರು ಸಭಾಂಗಣಗಳಿದ್ದು, ಶ್ರೀ ಕೃಷ್ಣರಾಜ ಪರಿಷನ್ಮಂದಿರವು ನಗರದ ಅತ್ಯಂತ ಹಳೆಯ ಸಭಾಂಗಣಗಳಲ್ಲಿ ಒಂದಾಗಿದೆ. ಇದು 1938ರಿಂದ ಕಾರ್ಯನಿರ್ವಹಿಸುತ್ತಿದೆ. ಕಾಲ ಕಾಲಕ್ಕೆ ಈ ಸಭಾಂಗಣವನ್ನು ನವೀಕರಣ ಮಾಡುತ್ತಾ ಬರಲಾಗಿತ್ತು. ಹತ್ತು ವರ್ಷಗಳ ಹಿಂದೆ ಪ್ಲೈವುಡ್‌ನಿಂದ ಸಭಾಂಗಣದ ಗೋಡೆಗಳನ್ನು ಅಂದಗೊಳಿಸಲಾಗಿತ್ತು.

ಸೀಲಿಂಗ್ ಅನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಬಳಸಿ ಅಂದಗೊಳಿಸಲಾಗಿತ್ತು. ಆದರೆ, ಸಭಾಂಗಣದ ಪ್ಲೈವುಡ್‌ಗಳು ಹಾಳಾಗಿ, ಕೆಲವೆಡೆ ಕಿತ್ತು ಹೋಗಿತ್ತು.

128 ಸ್ಥಿರಾಸನ: ವೇದಿಕೆಯ ನೆಲ ಹಾಸು ಕೂಡ ಹಾಳಾಗಿತ್ತು. ಸಭಾಂಗಣದಲ್ಲಿ ಜೋಡಿಸಿದ ಸ್ಥಿರ ಆಸನಗಳು ಇಲ್ಲದಿರುವುದ ರಿಂದ ಪ್ರೇಕ್ಷಕರ ಸಂಖ್ಯೆಗೆ ಅನುಗುಣವಾಗಿ 160ರಿಂದ 180 ಆಸನಗಳನ್ನು ಅಳವಡಿಸಲಾಗುತ್ತಿತ್ತು. ಈಗ 128 ಸ್ಥಿರಾಸನಗಳು ಸಭಾಂಗಣದಲ್ಲಿ ಇರಲಿದ್ದು, ಹೆಚ್ಚುವರಿಯಾಗಿ ಆಸನ ಇರಿಸಲು ಅವಕಾಶವಿದೆ.

ನವೀಕರಣದ ವೆಚ್ಚವನ್ನು ಪರಿಷತ್ತು, ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಹಾಗೂ ಸರ್ಕಾರದಿಂದಲೂ ಪಡೆಯಲು ನಿರ್ಧರಿಸಿದೆ.

ಸಭಾಂಗಣದ ಮುಂಭಾಗ ಇಂಟರ್‌ಲಾಕ್ ಟೈಲ್ಸ್, ಪರಿಷತ್ತಿನ ವಜ್ರಮಹೋತ್ಸವ ಕಟ್ಟಡಕ್ಕೆ ಹೊಸದಾಗಿ ಲಿಫ್ಟ್ ಅಳವಡಿಸಲಾಗಿದೆ. ಕುವೆಂಪು ಅವರು ರಚಿಸಿದ ‘ಎಲ್ಲಾದರೂ ಇರು ಎಂತಾದರು ಇರು...’ ಗೀತೆಯು ಲಿಫ್ಟ್ ಪ್ರವೇಶಿಸಿದ ಬಳಿಕ ಕೇಳಿಸಲಿದೆ.



ಕೃಷ್ಣರಾಜ ಪರಿಷನ್ಮಂದಿರದ ನವೀಕೃತ ಸಭಾಂಗಣದಲ್ಲಿ ಸ್ಥಿರಾಸನಗಳನ್ನು ಅಳವಡಿಸುತ್ತಿರುವುದು – ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಕನ್ನಡಿಗರ ಅಸ್ಮಿತೆಯ ಪ್ರತೀಕವಾಗಿರುವ ಪರಿಷತ್ತಿನ ಪುರಾತನ ಕಟ್ಟಡಗಳು ಹೊಸ ರೂಪ ಪಡೆದುಕೊಂಡಿವೆ. ಕೆಲವೇ ದಿನಗಳಲ್ಲಿ ಸಾರ್ವಜನಿಕರಿಗೆ ಬಾಡಿಗೆಗೆ ನೀಡಲಾಗುವುದು.

ಮಹೇಶ ಜೋಶಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

ಸಭಾಂಗಣದ ಬಾಡಿಗೆ ಹೆಚ್ಚಳ

ಕೃಷ್ಣರಾಜ ಪರಿಷನ್ಮಂದಿರದ ಸಭಾಂಗಣಕ್ಕೆ ದಿನವೊಂದಕ್ಕೆ ₹ 5 ಸಾವಿರ, ಅರ್ಧ ದಿನಕ್ಕೆ ₹ 3 ಸಾವಿರ ಬಾಡಿಗೆಯನ್ನು ಈ ಹಿಂದೆ ಪರಿಷತ್ತು ನಿಗದಿ ಮಾಡಿತ್ತು. ₹ 2 ಸಾವಿರ ಠೇವಣಿ ಕಟ್ಟಬೇಕಿತ್ತು. ಈಗ ಹವಾನಿಯಂತ್ರಿತ ವ್ಯವಸ್ಥೆ ಅಳವಡಿಸಿ, ನವೀಕರಣ ಮಾಡಿರುವುದರಿಂದ ಬಾಡಿಗೆ ಮೊತ್ತ ಹೆಚ್ಚಳಕ್ಕೆ ಪರಿಷತ್ತು ನಿರ್ಧರಿಸಿದೆ. ಆದರೆ, ಎಷ್ಟು ಪ್ರಮಾಣ ಎನ್ನುವುದು ಇನ್ನೂ ಅಂತಿಮವಾಗಿಲ್ಲ.

‘ಬಾಡಿಗೆ ನಿಗದಿಗೆ ಸಂಬಂಧಿಸಿದಂತೆ ಸಮಿತಿ ರಚಿಸಲಾಗುತ್ತದೆ. ಆ ಸಮಿತಿಯು ನಗರದಲ್ಲಿರುವ ವಿವಿಧ ಸಭಾಂಗಣಗಳ ಬಾಡಿಗೆ ಬಗ್ಗೆಯೂ ಚರ್ಚಿಸಿ, ದರ ನಿಗದಿ ಮಾಡುತ್ತದೆ’ ಎಂದು ಮಹೇಶ ಜೋಶಿ ತಿಳಿಸಿದರು.

ಕಟ್ಟಡ ನಾಳೆ ಉದ್ಘಾಟನೆ

ಶ್ರೀ ಕೃಷ್ಣರಾಜ ಪರಿಷನ್ಮಂದಿರದ ನವೀಕೃತ ಕಟ್ಟಡ ಶುಕ್ರವಾರ ಸಂಜೆ 5 ಗಂಟೆಗೆ ಉದ್ಘಾಟನೆಯಾಗಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ಸಾಹಿತಿಗಳಾದ ಚಂದ್ರಶೇಖರ ಕಂಬಾರ, ಕಮಲಾ ಹಂಪನಾ ಹಾಗೂ ದೊಡ್ಡರಂಗೇಗೌಡ ಭಾಗವಹಿಸಲಿದ್ದಾರೆ.

‘ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಸಾಂಪ್ರದಾಯಿಕತೆ ಉಳಿಸಿಕೊಂಡು ಆಧುನಿಕ ಸ್ಪರ್ಶ ನೀಡಲಾಗಿದೆ. ಆಧುನಿಕ ಕಾಲಘಟ್ಟಕ್ಕೆ ತಕ್ಕಂತೆ ನವೀಕರಣ ಮಾಡಲಾಗಿದೆ. ನಿನ್ನೆ ಮತ್ತು ನಾಳೆಗಳ ನಡುವಿನ ಸೇತುವೆಯಂತಿರುವ ಕಟ್ಟಡ, ಬೆಂಗಳೂರಿನ ಪ್ರಮುಖ ಸಾಂಸ್ಕೃತಿಕ ಹೆಗ್ಗುರುತು ಎಂಬಂತೆ ರೂಪುಗೊಂಡಿದೆ’ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ವಿಶ್ವನಾಥ್ ವಿರುದ್ಧದ ಅರ್ಜಿ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಲಾಭದಾಯಕ ಹುದ್ದೆ ಆಕ್ಷೇಪಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಹುದ್ದೆ ಎಸ್. ಆರ್. ವಿಶ್ವನಾಥ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿ ವಿಚಾರಣೆಯನ್ನು ಪೂರ್ಣಗೊಳಿಸಿರುವ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ವಕೀಲ ಎ.ಎಸ್. ಹರೀಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ಪೂರ್ಣ ಗೊಳಿಸಿದ ಹಂಗಾಮಿ ಮುಖ್ಯ ನ್ಯಾಯ ಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ತೀರ್ಪು ಕಾಯ್ದಿರಿಸಿರುವುದಾಗಿ ತಿಳಿಸಿತು.

ಅರ್ಜಿಯೇನು?: ‘ಕಾನೂನು ಪ್ರಕಾರ ಶಾಸಕರು ಸರ್ಕಾರದ ಅಧೀನ ಸಂಸ್ಥೆಗೆ ಸಂಬಂಧಿಸಿದ ಸಮಿತಿಯಲ್ಲಿ ಸದಸ್ಯರಾಗಿರಬಹುದು. ಬಿಡಿಎ ಸಮಿತಿ ಅಲ್, ಶಾಸನಾತ್ಮಕವಾಗಿ ರಚಿಸಲಾಗಿರುವ ಪ್ರಾಧಿಕಾರ. ಇದರ ಅಧ್ಯಕ್ಷ ಹುದ್ದೆಗೆ ವಿಶ್ವನಾಥ್ ವೇತನ, ಭತ್ಯೆ ಪಡೆಯುತ್ತಿದ್ದರೆ. ಲಾಭದಾಯಕ ಹುದ್ದೆ ಹೊಂದಿರುವ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ. ಎಸ್.ಆರ್.ವಿಶ್ವನಾಥ್ 2018ರ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನ ಯಲಹಂಕ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಅರ್ಜಿದಾರರ ಪರ ಸುಪ್ರೀಂ ಕೋರ್ಟ್ ಹಿರಿಯ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿದ್ದರು.

ವಿವಾಹ: ಅತ್ಯಾಚಾರದ ಆರೋಪ ರದ್ದು

ಬೆಂಗಳೂರು: ಬಾಲಕಿ ಅಪಹರಿಸಿ ಅತ್ಯಾಚಾರ ನಡೆಸಿದ ಆರೋಪ ಎದುರಿಸುತ್ತಿದ್ದ 23ರ ತರುಣನೊಬ್ಬ, ಸಂತ್ರಸ್ತೆಯನ್ನು ಮದುವೆಯಾಗಿ ಮಗುವನ್ನೂ ಹೊಂದಿರುವ ಕಾರಣಕ್ಕೆ ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ತರುಣ ಸಲ್ಲಿಸಿದ್ದ ಮನವಿಯನ್ನು ನ್ಯಾಯಮೂರ್ತಿ ಅವರಿದ್ದ ಎಂ.ನಾಗಪ್ರಸನ್ನ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, ‘ಇಂತಹ ಸಂದರ್ಭದಲ್ಲಿ ಆರೋಪಿ ವಿರುದ್ಧದ ಪ್ರಕರಣ ಮುಂದುವರಿಸುವುದು ನ್ಯಾಯ ಸಮ್ಮತವಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

‘ನನ್ನ 17 ವರ್ಷದ ಪುತ್ರಿ ನಾಪತ್ತೆಯಾಗಿದ್ದಾಳೆ’ ಎಂದು ಸಂತ್ರಸ್ತೆ ತಂದೆ 2019ರ ಮಾರ್ಚ್‌ನಲ್ಲಿ ಬನ್ನೇರು ಘಟ್ಟ ಠಾಣಾ ಪೊಲೀಸರಿಗೆ ದೂರು ನೀಡಿದ್ದರು. ಅರ್ಜಿದಾರ ತರುಣನ ವಿರುದ್ಧ ಅಪಹರಣ, ಅತ್ಯಾಚಾರ ಮತ್ತು ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಡಿ ಪೋಕ್ಸೊ ಕಾಯ್ದೆ ಅನ್ವಯ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.



ಹೆಗ್ಗನಹಳ್ಳಿ ವಾಟರ್ ಟ್ಯಾಂಕ್ ಬಳಿ ಖಾಲಿ ಕೊಡದೊಂದಿಗೆ ಜೆಡಿಎಸ್ ಕಾರ್ಯಕರ್ತರು ಮತ್ತು ಸ್ಥಳೀಯರು ಪ್ರತಿಭಟನೆ ನಡೆಸಿದರು

ನೀರು ಪೂರೈಕೆ ಘಟಕಕ್ಕೆ ಮುತ್ತಿಗೆ

ಬೆಂಗಳೂರು: ಕಾವೇರಿ ನೀರು ಅಸಮರ್ಪಕ ಸರಬರಾಜು ವಿರೋಧಿಸಿ ಹೆಗ್ಗನಹಳ್ಳಿ ಬಳಿಯ ನೀರು ಸರಬರಾಜು ಘಟಕಕ್ಕೆ ಜೆಡಿಎಸ್ ನೇತೃತ್ವದಲ್ಲಿ ಸ್ಥಳೀಯರು ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಶಾಸಕ ಆರ್.ಮಂಜುನಾಥ್ ನೇತೃತ್ವದಲ್ಲಿ ಜಿ.ಎಲ್.ಆರ್. ವಾಟರ್ ಟ್ಯಾಂಕ್ ಬಳಿ ಜಮಾಯಿಸಿದ ಸ್ಥಳೀಯ ಮಹಿಳೆಯರು ಖಾಲಿ ಕೊಡಗಳೊಂದಿಗೆ ರಸ್ತೆಗಿಳಿದು ಆಕ್ರೋಶ ವ್ಯಕ್ತಪಡಿಸಿದರು.

ಆರ್.ಮಂಜುನಾಥ್, ‘ ವಾರಕ್ಕೆ 2 ಗಂಟೆ ಮಾತ್ರ ನೀರು ಪೂರೈಸುತ್ತಿದ್ದಾರೆ. 15 ದಿನಗಳ ಒಳಗಾಗಿ ಸಮಸ್ಯೆ ಇತ್ಯರ್ಥ ಆಗಲೇಬೇಕು. ಸೆ. 10ರ ತನಕ ಕಾಲಾವಕಾಶ ನೀಡುತ್ತಿದ್ದೇವೆ. ನೀರಿನ ಸಮಸ್ಯೆ ಜೊತೆಗೆ ಜಲಮಂಡಳಿ ಕಾಮಗಾರಿಯಿಂದ ಹಾಳಾಗಿರುವ ರಸ್ತೆ ದುರಸ್ತಿಪಡಿಸಬೇಕು’ ಎಂದು ಒತ್ತಾಯಿಸಿದರು.

‘ಸಮಸ್ಯೆ ಬಗೆಹರಿಯದಿದ್ದರೆ ಸೆ. 11ರ ನಂತರ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು’ ಎಂದರು.

ಪ್ರತಿಭಟನೆಯಲ್ಲಿ ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಮುನಿಸ್ವಾಮಿ, ರಾಜ್ಯ ಕಾರ್ಯಕಾರಿ ಸದಸ್ಯ ಅಂದನಪ್ಪ, ದಾಸರಹಳ್ಳಿ ಬ್ಲಾಕ್ ಅಧ್ಯಕ್ಷ ಕೆ.ಸಿ. ವೆಂಕಟೇಶ್, ವಾರ್ಡ್ ಅಧ್ಯಕ್ಷ ಎಚ್. ಆರ್. ಪ್ರಕಾಶ್, ಸಿ.ಜೆ.ರಮೇಶ್, ರುದ್ರೇಗೌಡ ಭಾಗವಹಿಸಿದ್ದರು.

ಗಣೇಶೋತ್ಸವ: ಕಟ್ಟೆಚ್ಚರಕ್ಕೆ ಸಚಿವರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶೋತ್ಸವದ ಹಿನ್ನೆಲೆಯಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು

ಸೂಕ್ಷ್ಮಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಬೇಕು. ಭದ್ರತೆಯಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳೂ ನಡೆಯಬಾರದು ಎಂದು ಸಚಿವರು ಸೂಚಿಸಿದರು.

ಇದೇ ವೇಳೆ ಸೂಕ್ಷ್ಮ ಪ್ರದೇಶಗಳಲ್ಲಿ ಕೈಗೊಂಡಿರುವ ಭದ್ರತಾ ಕ್ರಮಗಳ ಮಾಹಿತಿ ಪಡೆದುಕೊಂಡರು. ಚಾಮರಾಜಪೇಟೆ ಮೈದಾನ ಸುತ್ತಮುತ್ತ ಭದ್ರತೆ ಹೆಚ್ಚಿಸಬೇಕು ಎಂದು ಸೂಚಿಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, ವಿವಿಧ ವಿಭಾಗಗಳ ಉಪ ಪೊಲೀಸ್ ಆಯುಕ್ತರು ಹಾಗೂ ಇನ್‌ಸ್ಪೆಕ್ಟರ್‌ಗಳು ಸಭೆಯಲ್ಲಿ ಹಾಜರಿದ್ದರು.

ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ಬೆಂಗಳೂರು: ಅಗತ್ಯ ವಸ್ತುಗಳ ಬೆಲೆ ಏರಿಕೆ, ಕೋಮುವಾದ ಖಂಡಿಸಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಒಕ್ಕೂಟದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ಸಿಪಿಐ(ಎಂ), ಸಿಪಿಐ, ಎಸ್‌ಯುಸಿಐ (ಸಿ), ಸಿಪಿಐ(ಎಂಎಲ್), ಎಐ ಎಫ್‌ಬಿ, ಆರ್‌ಪಿಐ ಹಾಗೂ ಸ್ವರಾಜ್ ಇಂಡಿಯಾದ ನೇತೃತ್ವದಲ್ಲಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದಾರೆ. ಕೇಂದ್ರ, ರಾಜ್ಯ ಸರ್ಕಾರಗಳು ಜನರ ಗಮನ ಬೇರೆಡೆ ಸೆಳೆಯುವ ಕಾರ್ಯತಂತ್ರ ರೂಪಿಸುತ್ತಿವೆ. ಅದಕ್ಕೆ ಹಿಂದುತ್ವವನ್ನು ಬಳಸಿಕೊಳ್ಳುತ್ತಿವೆ ಎಂದು ಮುಖಂಡರು ಕಿಡಿಕಾರಿದರು.

‘ಪೆಟ್ರೋಲ್, ಡೀಸೆಲ್, ಗೃಹ ಬಳಕೆ ಅನಿಲ ಮತ್ತು ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗಿದೆ’ ಎಂದು ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿ ಯು.ಬಸವರಾಜ್ ಆಕ್ರೋಶ ಹೊರ ಹಾಕಿದರು.

ಪ್ರತಿಭಟನೆಯಲ್ಲಿ ಜಿ.ಬಾಬು, ಅಪ್ಪಣ್ಣ, ಶ್ರೀರಾಮ ಹಾಜರಿದ್ದರು.



ಬೆಲೆ ಏರಿಕೆ ಖಂಡಿಸಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಒಕ್ಕೂಟದಿಂದ ಬುಧವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು

ಆಸ್ಪತ್ರೆಗಳ ತಪಾಸಣೆ ಆರಂಭಿಸಿದ ಲೋಕಾಯುಕ್ತ

ಬೆಂಗಳೂರು: ನಗರದ ಸರ್ಕಾರಿ ಆಸ್ಪತ್ರೆಗಳಲ್ಲಿನ ಸಮಸ್ಯೆಗಳು, ದುರಾಡಳಿತ ಕುರಿತು ಲೋಕಾಯುಕ್ತ ತಪಾಸಣೆ ಆರಂಭಿಸಿದೆ. ಲೋಕಾಯುಕ್ತದ ನ್ಯಾಯಾಂಗ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳು ಬುಧವಾರ 11 ಆಸ್ಪತ್ರೆಗಳಲ್ಲಿ ತಪಾಸಣೆ ನಡೆಸಿದರು.

ಇತ್ತೀಚೆಗೆ ಹುನಗುಂದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದ್ದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಅಲ್ಲಿನ ದುರವಸ್ಥೆ ಕಂಡು ಕ್ರಮಕ್ಕೆ ಆದೇಶಿಸಿದ್ದರು. ಬಳಿಕ ಸಂಸ್ಥೆಯ ಹಿರಿಯ ಅಧಿಕಾರಿಗಳ ಸಭೆ ನಡೆಸಿ, ನಗರದಲ್ಲಿನ ಆಸ್ಪತ್ರೆಗಳಲ್ಲಿ ದಿಢೀರ್ ಪರಿಶೀಲನೆ ನಡೆಸುವ ತೀರ್ಮಾನ ಕೈಗೊಂಡಿದ್ದರು.

ಲೋಕಾಯುಕ್ತ ಎಸ್‌ಪಿಗಳಾದ ಅಂಜಲಿ ಕೆ.ಪಿ., ಅಶೋಕ್ ಕೆ.ವಿ. ಮತ್ತು ಶ್ರೀನಾಥ್ ಜೋಶಿ ನೇತೃತ್ವದಲ್ಲಿ ಹತ್ತು ತಂಡಗಳು 11 ಆಸ್ಪತ್ರೆಗಳಿಗೆ ಬುಧವಾರ ದಿಢೀರ್ ಭೇಟಿ ನೀಡಿ ತಪಾಸಣೆ ನಡೆಸಿವೆ. ‘ಕೆಲ ಆಸ್ಪತ್ರೆಗಳಲ್ಲಿ ಲೋಪಗಳು ಕಂಡು ಬಂದಿವೆ. ಈ ಕುರಿತು ವರದಿ ಸಲ್ಲಿಕೆ ಬಳಿಕ ಕ್ರಮ ಕೈಗೊಳ್ಳಲಾಗುವುದು ’ ಎಂದು ಮೂಲಗಳು ತಿಳಿಸಿವೆ.

ಸಿಎಪಿಎಫ್– ಎಸ್ಐ, ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ


ಸಾಂದರ್ಭಿಕ ಚಿತ್ರ

ಕೇಂದ್ರದ ಸಿಬ್ಬಂದಿ ನೇಮಕಾತಿ ಆಯೋಗ (ಕರ್ನಾಟಕ , ಕೇರಳ ಪ್ರದೇಶ)– ಎಸ್ಎಸ್‌ಸಿ, ದೆಹಲಿ ಪೊಲೀಸ್ ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಸಬ್‌ಇನ್‌ಸ್ಪೆಕ್ಟರ್ (ಸಿಎಪಿಎಫ್-ಎಸ್ಐ) ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ.

ಆನ್‌ಲೈನ್‌ನಲ್ಲಿ ನಡೆಯಲಿರುವ ಈ ಸ್ಪರ್ಧಾತ್ಮಕ ಪರೀಕ್ಷೆ, ಇದೇ ವರ್ಷದ ನವೆಂಬರ್ ತಿಂಗಳಲ್ಲಿ ನಿಗದಿಯಾಗಿದೆ ಎಂದು ಆಯೋಗದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಪರೀಕ್ಷೆ ನಡೆಯಲಿರುವ ನಿಖರ ದಿನಾಂಕವನ್ನು ಆಯೋಗದ ವೆಬ್‌ಸೈಟ್ ಮೂಲಕ ತಿಳಿಸುವು ದಾಗಿ ಹೇಳಿದೆ.

ಹುದ್ದೆಗಳ ಸಂಖ್ಯೆ : 4300 (ಪುರುಷ ಅಭ್ಯರ್ಥಿಗಳು – 4019, ಮಹಿಳಾ ಅಭ್ಯರ್ಥಿಗಳು – 281)

ವಿದ್ಯಾರ್ಹತೆ : ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

ವಯೋಮಿತಿ : ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಕನಿಷ್ಠ 20 ಮತ್ತು ಗರಿಷ್ಠ 25 ವರ್ಷಗಳು. ಪರಿಶಿಷ್ಟ ಜಾತಿ(ಎಸ್.ಸಿ), ಪರಿಶಿಷ್ಟ ವರ್ಗ(ಎಸ್.ಟಿ) ವರ್ಗಕ್ಕೆ 5 ವರ್ಷಗಳು, ಇತರೆ ಹಿಂದುಳಿದ ವರ್ಗ(ಒಬಿಸಿ)ದ ಅಭ್ಯರ್ಥಿಗಳಿಗೆ 3 ವರ್ಷಗಳು ಮತ್ತು ಮಾಜಿ ಸೈನಿಕರಿಗೆ (ಇಎಸ್ಎಂ) 3 ವರ್ಷಗಳ ವಯೋಮಿತಿ ಸಡಿಲಿಕೆ ಇದೆ. ಈ ಕುರಿತ ಹೆಚ್ಚಿನ ವಿವರಕ್ಕೆ ಅಧಿಸೂಚನೆಯ ಪ್ಯಾರಾ 5.2 ಅನ್ನು ನೋಡಬಹುದು.

ನೇಮಕಾತಿ ವಿಧಾನ :

ಎರಡು ಹಂತಗಳಲ್ಲಿ ಪರೀಕ್ಷೆ ನಡೆಯುತ್ತದೆ. ಮೊದಲ ಹಂತದಲ್ಲಿ ಅಭ್ಯರ್ಥಿಗಳ ದೈಹಿಕ ಗುಣಮಟ್ಟದ ಪರೀಕ್ಷೆ/ ದೈಹಿಕ ಸಹಿಷ್ಣುತೆ ಪರೀಕ್ಷೆ((Physical Standard Test (PST)/Physical Endurance Test (PET) ನಡೆಸಲಾಗುತ್ತದೆ. ನಂತರ ವೈದ್ಯಕೀಯ ಪರೀಕ್ಷೆಗಳೂ ಇರುತ್ತವೆ. ಇದರ ಜೊತೆಗೆ, ಆನ್‌ಲೈನ್ ಮೂಲಕ ಪರೀಕ್ಷೆ ಪರೀಕ್ಷೆಗಳು ನಡೆಯಲಿವೆ. ಈ ಪರೀಕ್ಷೆಯಲ್ಲಿ ಎರಡು ಪತ್ರಿಕೆಗಳಿರುತ್ತವೆ.

ಎರಡೂ ಪತ್ರಿಕೆಗಳಲ್ಲಿನ ಪ್ರಶ್ನೆಗಳು ಬಹುಆಯ್ಕೆ (ಆಬ್ಜೆಕ್ಟಿವ್) ಮಾದರಿಯಲ್ಲಿರುತ್ತವೆ. ಪೇಪರ್-I ರ ಭಾಗ I,II ಮತ್ತು III ರಲ್ಲಿ ಪ್ರಶ್ನೆಗಳು ಇಂಗ್ಲಿಷ್ ಹಾಗೂ ಹಿಂದಿಯಲ್ಲಿರುತ್ತವೆ. ಎರಡೂ ಪತ್ರಿಕೆಗಳಲ್ಲೂ ಪ್ರತಿ ತಪ್ಪು ಉತ್ತರಕ್ಕೆ 0.25 ಅಂಕಗಳನ್ನು ಕಳೆಯಲಾಗುತ್ತದೆ(ನೆಗೆಟಿವ್ ಕರೆಕ್ಷನ್).

ಪತ್ರಿಕೆ -I

ವಿಭಾಗ	ವಿಷಯ	ಪ್ರಶ್ನೆಗಳು	ಅಂಕಗಳು	ಅವಧಿ
I	ಜನರಲ್ ಇಂಟೆಲಿಜೆನ್ಸ್ ಮತ್ತು ರೀಸನಿಂಗ್	50	50	2 ಗಂಟೆ
II	ಸಾಮಾನ್ಯ ಜ್ಞಾನ ಮತ್ತು ಸಾಮಾನ್ಯ ಅರಿವು(ಜನರಲ್ ಅವೇರ್‌ನೆಸ್)	50	50	
III	ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್	50	50	
IV	ಇಂಗ್ಲಿಷ್ ಕಾಂಪ್ರಹೆನ್ಷನ್	50	50	

ಪತ್ರಿಕೆ -II

ವಿಷಯ	ಪ್ರಶ್ನೆಗಳು	ಅಂಕಗಳು	ಅವಧಿ
ಇಂಗ್ಲಿಷ್ ಭಾಷೆ ಮತ್ತು ಕಾಂಪ್ರಹೆನ್ಷನ್	200	200	2 ಗಂಟೆ

ಗಮನಿಸಿ: ಎನ್‌ಸಿಸಿ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳಿಗೆ ಹೆಚ್ಚುವರಿ ಅಂಕಗಳನ್ನು ನೀಡಲಾಗುತ್ತದೆ. ಅದರಲ್ಲಿ ಎನ್‌ಸಿಸಿ 'ಸಿ' ಪ್ರಮಾಣ ಪತ್ರ ಹೊಂದಿರುವವರಿಗೆ 10 ಅಂಕಗಳು, 'ಬಿ' ಪ್ರಮಾಣ ಪತ್ರ ಹೊಂದಿದವರಿಗೆ 6 ಮತ್ತು 'ಎ' ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳಿಗೆ 4 ಅಂಕಗಳನ್ನು ಹೆಚ್ಚುವರಿಯಾಗಿ ನೀಡಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೆ ದಿನ : ಆಗಸ್ಟ್ 30, 2022.

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು. https://ssc.nic.in(ಎಸ್ಎಸ್‌ಸಿ ನೇಮಕಾತಿ ಪ್ರಕಟಣೆ ದಿನಾಂಕ ಆ.10, 2022) ಈ ಜಾಲತಾಣದ ಮೂಲಕ ಅರ್ಜಿ ಸಲ್ಲಿಸಬೇಕು. ಆನ್‌ಲೈನ್‌ನಲ್ಲಿ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುತ್ತದೆ.

ಅರ್ಜಿ ಸಲ್ಲಿಸುವ ವಿಧಾನ ಕುರಿತು www.ssckkr.kar.nic.in ಮತ್ತು https://ssc.nic.in ಜಾಲತಾಣಗಳಿಗೆ ಭೇಟಿ ನೀಡಿ.

ಅಧಿಸೂಚನೆಗಾಗಿ: https://ssc.nic.in/SSCFileServer/PortalManagement/UploadedFiles/notice_SICPO_10082022.pdf ಜಾಲತಾಣ ನೋಡಿ. ❖

ಜೂನಿಯರ್ ಎಂಜಿನಿಯರ್ ಹುದ್ದೆಗೆ ಪರೀಕ್ಷೆ

ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗವು ಜೂನಿಯರ್ ಎಂಜಿನಿಯರ್ (ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಮತ್ತು ಕ್ವಾಂಟಿಟಿ ಸರ್ವೇಯಿಂಗ್ ಮತ್ತು ಒಪ್ಪಂದಗಳು) ಹುದ್ದೆಗಳ ನೇಮಕಾತಿಗಾಗಿ ಆನ್‌ಲೈನ್ ಆಧಾರಿತ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ.

ಪರೀಕ್ಷೆಯು ಇದೇ ನವೆಂಬರ್‌ನಲ್ಲಿ ನಡೆಯಲಿದೆ. ಪರೀಕ್ಷೆಯ ನಿಗದಿತ ದಿನಾಂಕದ ಬಗ್ಗೆ www.ssckkr.kar.nic.in ನಲ್ಲಿ ತಿಳಿಸಲಾಗುವುದು.

- **ವಿದ್ಯಾರ್ಹತೆ:** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ಮತ್ತು ಅನುಭವ ಪಡೆದಿರಬೇಕು.
- **ವಯೋಮಿತಿ:** ಸಾಮಾನ್ಯ ವರ್ಗದವರಿಗೆ 30 ವರ್ಷ, ಒಬಿಸಿ/ಎಸ್‌ಸಿ/ಎಸ್ಟಿ/ಇಎಸ್ಎಂ ಹಾಗೂ ಇತರೆ ನಿರ್ದಿಷ್ಟ ವರ್ಗಗಳಿಗೆ ವಯೋಮಿತಿ ಸಡಿಲಿಕೆ ಕುರಿತ ಮಾಹಿತಿಗಾಗಿ ಅಧಿಸೂಚನೆಯ 7.2ನೇ ಪ್ಯಾರಾ ನೋಡಿ.

ನೇಮಕಾತಿ ವಿಧಾನ: ಆನ್‌ಲೈನ್ ಮತ್ತು ಲಿಖಿತ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಪೇಪರ್ I - (ಆನ್‌ಲೈನ್ ಪರೀಕ್ಷೆ- ವಿಷಯಗಳು)

- ಜನರಲ್ ಇಂಟೆಲಿಜೆನ್ಸ್ ಮತ್ತು ರೀಸನಿಂಗ್,
- ಸಾಮಾನ್ಯ ಅರಿವು,
- ಜನರಲ್ ಎಂಜಿನಿಯರಿಂಗ್ (ಸಿವಿಲ್-ನಿರ್ಮಾಣ) ಅಥವಾ ಸಾಮಾನ್ಯ ಎಂಜಿನಿಯರಿಂಗ್ (ಎಲೆಕ್ಟ್ರಿಕಲ್) ಅಥವಾ ಸಾಮಾನ್ಯ ಎಂಜಿನಿಯರಿಂಗ್ (ಮೆಕ್ಯಾನಿಕಲ್)

ಪೇಪರ್ II (ಲಿಖಿತ ಪರೀಕ್ಷೆ)

ಜನರಲ್ ಎಂಜಿನಿಯರಿಂಗ್ (ಸಿವಿಲ್-ನಿರ್ಮಾಣ) ಅಥವಾ ಸಾಮಾನ್ಯ ಎಂಜಿನಿಯರಿಂಗ್ (ಎಲೆಕ್ಟ್ರಿಕಲ್) ಅಥವಾ ಸಾಮಾನ್ಯ ಎಂಜಿನಿಯರಿಂಗ್ (ಮೆಕ್ಯಾನಿಕಲ್)

ಅರ್ಜಿ ಸಲ್ಲಿಕೆ: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಸೆ.2 ಅರ್ಜಿ ಸಲ್ಲಿಕೆಗೆ ಕೊನೆ ದಿನ.

ಶುಲ್ಕ: ₹100 (ಮಹಿಳೆ/ಎಸ್‌ಸಿ/ಎಸ್‌ಟಿ/ಇಎಸ್ಎಂ ವರ್ಗಗಳಿಗೆ ಶುಲ್ಕವಿಲ್ಲ)

ಹೆಚ್ಚಿನ ಮಾಹಿತಿಗೆ: https://ssc.nic.in, https://www.ssckkr.kar.nic.in/ ಸಂಪರ್ಕಿಸಬಹುದು.

ಸುಸ್ಥಿರ ಅಭಿವೃದ್ಧಿಗೆ ಜೈವಿಕ ಇಂಧನ





ಸಾಂದರ್ಭಿಕ ಚಿತ್ರಗಳು

ಯು.ಟಿ. ಆಯಿಶ ಫರ್ಝಾನ

ಆಗಸ್ಟ್ 10 - ವಿಶ್ವ ಜೈವಿಕ ಇಂಧನ ದಿನವಾಗಿದ್ದು, ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಹರಿಯಾಣಾದ ಪಾಣಿಪತ್‌ನಲ್ಲಿ ನಿರ್ಮಾಣವಾಗಿರುವ 2ನೇ ತಲೆಮಾರಿನ (2ಜಿ) ಎಥೆನಾಲ್ ಸ್ಥಾವರವನ್ನು ಉದ್ಘಾಟಿಸಿದರು.

> ಯುಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3 ಸೇರಿದಂತೆ ಇತರೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನವೊಂದರ ಕುರಿತಮಾಹಿತಿ ಇಲ್ಲಿದೆ.

ವಿಶ್ವ ಜೈವಿಕ ಇಂಧನ ದಿನದ ಹಿನ್ನೆಲೆ

ಸಾಂಪ್ರದಾಯಿಕ ಪಳಿಯುಳಿಕೆ ಇಂಧನಗಳಿಗೆ ಪರ್ಯಾಯವಾಗಿ ನವೀಕರಣಗೊಳ್ಳಬಲ್ಲ (ಪಳಯುಳಿಕೆಯೇತರ–Nonfossil fuels) ಇಂಧನಗಳ ಅಗತ್ಯ ಕುರಿತು ಜಾಗೃತಿ ಮತ್ತು ಜೈವಿಕ ಇಂಧನ ಕ್ಷೇತ್ರದಲ್ಲಿ ಸರ್ಕಾರ ಕೈಗೊಂಡಿರುವ ಪ್ರಯತ್ನಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಪ್ರತಿ ವರ್ಷ ಆಗಸ್ಟ್ 10ರಂದು ವಿಶ್ವ ಜೈವಿಕ ಇಂಧನ ದಿನವನ್ನಾಗಿ ಆಚರಿಸಲಾಗುತ್ತಿದೆ. ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು 2015ರಿಂದ ಈ ಆಚರಣೆಗೆ ಚಾಲನೆ ನೀಡಿದೆ.

1893ರ ಇದೇ ದಿನಂದು ನೆಲಗಡಲೆ(ಶೇಂಗಾ ಎಣ್ಣೆ) ಎಣ್ಣೆಯಿಂದ ಎಂಜಿನ್ ಓಡಿಸಿದ ಸರ್ ರುಡಾಲ್ಫ್ ಡೀಸೆಲ್ ಅವರ ಸಂಶೋಧನಾ ಪ್ರಯೋಗಗಳನ್ನು ಸ್ಮರಿಸಲಾಗುತ್ತದೆ. ರುಡಾಲ್ಫ್ ಅವರ ಈ ಪ್ರಯತ್ನದಿಂದ ಸಸ್ಯಜನ್ಯ ಎಣ್ಣೆಯು ವಿವಿಧ ಯಾಂತ್ರಿಕ ಎಂಜಿನ್‌ಗಳಿಗೆ ಇಂಧನವಾಗಿ ಪಳೆಯುಳಿಕೆ ಇಂಧನಗಳಿಗೆ ಪರ್ಯಾಯವಾಗಲಿದೆ ಎಂಬ ಕಲ್ಪನೆಗೆ ಪುಷ್ಟಿ ಸಿಕ್ಕಿತ್ತು.

ಭಾರತದಲ್ಲಿ ಜೈವಿಕ ಇಂಧನಗಳು

ದೇಶದ ಆರ್ಥಿಕ ಬೆಳವಣಿಗೆ ಮತ್ತು ಸ್ವಚ್ಛ ಪರಿಸರ ನಿರ್ಮಾಣದ ದೃಷ್ಟಿಯಿಂದ ಜೈವಿಕ ಇಂಧನಗಳು ಬಹಳ ಪ್ರಾಮುಖ್ಯ ಪಡೆದಿವೆ. ಇದು ಸರ್ಕಾರ ಪ್ರಸ್ತುತ ಜಾರಿಗೊಳಿಸಿರುವ 'ಮೇಕ್ ಇನ್ ಇಂಡಿಯಾ', 'ಸ್ವಚ್ಛ ಭಾರತ್' ಮತ್ತು 'ಕೌಶಲಾಭಿವೃದ್ಧಿ ಯೋಜನೆ'ಗಳ ಕಾರ್ಯೋದ್ದೇಶಗಳಿಗೆ ಪೂರಕವಾಗಿದೆ. ಜತೆಗೆ ರೈತರ ಆದಾಯ ದ್ವಿಗುಣಗೊಳಿಸುವುದು, ಉದ್ಯೋಗ ಸೃಷ್ಟಿ, ತ್ಯಾಜ್ಯದಿಂದ ಸಂಪತ್ತು ಸೃಷ್ಟಿ ಮುಂತಾದ ಮಹತ್ವಾಕಾಂಕ್ಷೆಯ ಗುರಿಗಳನ್ನು ಸಾಧಿಸಲೂ ಪೂರಕವಾಗಿದೆ.

ಜೈವಿಕ ಇಂಧನ ಕಾರ್ಯಕ್ರಮ ಸ್ಥಳೀಯ(ದೇಶೀಯ) ಕಚ್ಚಾ ವಸ್ತುಗಳು ನಿರಂತರ ಪೂರೈಕೆಯಿಲ್ಲದ ಕಾರಣ ಜೈವಿಕ ಇಂಧನ ಉತ್ಪಾದನೆಗೆ ಹೆಚ್ಚಿನ ಅಡಚಣೆ ಉಂಟಾಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕಾಗಿದೆ.

ನಿರೀಕ್ಷಿತ ಲಾಭಗಳು

ಆಮದು ಅವಲಂಬನೆಯಲ್ಲಿ ಕಡಿತ : ಒಂದು ಕೋಟಿ ಲೀಟರ್ E10 (ಎಥೆನಾಲ್ ಮಿಶ್ರಿತ ತೈಲ) ತೈಲದಿಂದ ಪ್ರಸ್ತುತ ದರದಲ್ಲಿ ಸರಿಸುಮಾರು ₹ 28 ಕೋಟಿಗಳಷ್ಟು ವಿದೇಶಿ ವಿನಿಮಯವನ್ನು ಉಳಿಸುತ್ತದೆ. (E10 ಎಂಬುದು ವಾಹನ ಬಳಕೆಯ ಇಂಧನವಾಗಿದ್ದು, ಶೇ 90ರಷ್ಟು ಸಾಮಾನ್ಯ ಸೀಸರಹಿತವಾದ ಪೆಟ್ರೋಲ್‌ನಿಂದ ತಯಾರಿಸಲಾಗಿದೆ. ಇದರಲ್ಲಿ ಶೇ 10ರಷ್ಟು ಎಥೆನಾಲ್ ಇರುತ್ತದೆ. ಆದ್ದರಿಂದಲೇ ಅದನ್ನು E10 ಎನ್ನಲಾಗುತ್ತದೆ)

ಇದು ವಿದೇಶಿ ವಿನಿಮಯ ನಿಕ್ಷೇಪಗಳನ್ನು ಬಲಪಡಿಸುತ್ತದೆ ಮತ್ತು ನಮ್ಮ ದೇಶ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಆಮದು ಅವಲಂಬನೆಯನ್ನು ಕಡಿಮೆ ಮಾಡುತ್ತದೆ.

ಸ್ವಚ್ಛ ಪರಿಸರ: ಒಂದು ಕೋಟಿ ಲೀಟರ್ E-10 ಇಂಧನ, ಸುಮಾರು 20,000 ಟನ್ ಇಂಗಾಲದ ಡೈ ಆಕ್ಸೈಡ್ ಹೊರಸೂಸುವಿಕೆಯನ್ನು ತಡೆಯುತ್ತದೆ. ಕೃಷಿ ತ್ಯಾಜ್ಯಗಳನ್ನು ಜೈವಿಕ ಇಂಧನವಾಗಿ ಪರಿವರ್ತಿಸುವುದರಿಂದ ಆ ತ್ಯಾಜ್ಯ ಸುಡುವುದು ಕಡಿಮೆಯಾಗುತ್ತದೆ. ಇದರಿಂದ ಹಸಿರು ಮನೆ ಅನಿಲ ಹೊರಸೂಸುವಿಕೆ ಪರಿಣಾಮ(ಗ್ರೀನ್ ಗ್ಯಾಸ್ ಎಫೆಕ್ಟ್) ಮತ್ತಷ್ಟು ಕಡಿತವಾಗುತ್ತದೆ.

ಆರೋಗ್ಯ ಪ್ರಯೋಜನಗಳು : ಆಹಾರ ತಯಾರಿಸಲು, ವಿಶೇಷವಾಗಿ ಕರಿದ ಆಹಾರಗಳನ್ನು ತಯಾರಿಸಲು ಹೆಚ್ಚಾಗಿ ಅಡುಗೆ ಎಣ್ಣೆಯನ್ನು ಬಳಸಲಾಗುತ್ತದೆ. ದೀರ್ಘಾವಧಿಯಲ್ಲಿ ಈ ಎಣ್ಣೆಯನ್ನು ಮರುಬಳಕೆ ಮಾಡುವುದರಿಂದ ಅನಾರೋಗ್ಯ ತಂದೊಡ್ಡಬಹುದು. ಅನೇಕ ರೋಗಗಳ ಸೃಷ್ಟಿಗೂ ಕಾರಣವಾಗಬಹುದು.

ಇಂಥ ಬಳಸಿದ ಅಡುಗೆ ಎಣ್ಣೆಯು ಜೈವಿಕ ಡೀಸೆಲ್ ತಯಾರಿಕೆಗೆ ಸಂಭಾವ್ಯ ಕಚ್ಚಾವಸ್ತುವಾಗಿದೆ. ಇದರಿಂದ ಆಹಾರೋದ್ಯಮ ಕ್ಷೇತ್ರದಲ್ಲಿ ಬಳಸಿದ ಅಡುಗೆ ಎಣ್ಣೆಯ ಮರುಬಳಕೆ ತಪ್ಪಿಸಬಹುದು.

ಘನತ್ಯಾಜ್ಯ ನಿರ್ವಹಣೆ: ಭಾರತದಲ್ಲಿ ವಾರ್ಷಿಕವಾಗಿ 62 MMT (ಮಿಲಿಯನ್ ಮೆಟ್ರಿಕ್ ಟನ್) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಉತ್ಪತ್ತಿಯಾಗುವುದಾಗಿ ಅಂದಾಜಿಸಲಾಗಿದೆ(ಮುನಿಸಿಪಲ್ ಸಾಲಿಡ್ ವೇಸ್ಟ್). ಜೈವಿಕ ತ್ಯಾಜ್ಯ , ಪ್ಲಾಸ್ಟಿಕ್ ತ್ಯಾಜ್ಯ ಮತ್ತು ಘನತ್ಯಾಜ್ಯಗಳನ್ನು ಜೈವಿಕ ಇಂಧನವನ್ನಾಗಿ ಪರಿವರ್ತಿಸಲು ಸಂಶೋಧನೆಗಳು ನಡೆಯುತ್ತಿವೆ.

ಗ್ರಾಮೀಣ ಪ್ರದೇಶದಲ್ಲಿ ಮೂಲಸೌಕರ್ಯ ಹೂಡಿಕೆ: ಒಂದು ದಿನಕ್ಕೆ 100 klpd (Kilo liters per day) ಜೈವಿಕ ಸಂಸ್ಕರಣಾಗಾರಕ್ಕೆ ಸುಮಾರು ₹800 ಕೋಟಿ ಬಂಡವಾಳ ಹೂಡಿಕೆಯ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಪ್ರಸ್ತುತ ತೈಲ ಮಾರುಕಟ್ಟೆ ಕಂಪನಿಗಳು ಸುಮಾರು ₹10,000 ಕೋಟಿ ಹೂಡಿಕೆಯೊಂದಿಗೆ ಹನ್ನೆರಡು 2G ಜೈವಿಕ ಸಂಸ್ಕರಣಾಗಾರಗಳನ್ನು ಸ್ಥಾಪಿಸಲು ಮುಂದಾಗಿವೆ. ಇದು ಗ್ರಾಮೀಣ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಯ ಮೇಲಿನ ಹೂಡಿಕೆಯನ್ನು ಉತ್ತೇಜಿಸುತ್ತದೆ.

ಉದ್ಯೋಗ ಸೃಷ್ಟಿ: ಗ್ರಾಮೀಣ ಪ್ರದೇಶಗಳಲ್ಲಿ 100klpd - (Kiloleters per day) ಸಾಮರ್ಥ್ಯದ 2G ಜೈವಿಕ ಸಂಸ್ಕರಣಾಗಾರ ಸ್ಥಾಪನೆಯಿಂದ ಸುಮಾರು 1,200ರಷ್ಟು ಉದ್ಯೋಗಗಳು ಸೃಷ್ಟಿಯಾಗಬಹುದು (ಉದ್ಯಮಿಗಳು ಮತ್ತು ಪೂರೈಕೆದಾರ ಸರಪಳಿಯಲ್ಲಿ) ಎಂದು ಅಂದಾಜಿಲಾಗಿದೆ.

ರೈತರಿಗೆ ಹೆಚ್ಚುವರಿ ಆದಾಯ: ರೈತರು ಕೃಷಿ ತ್ಯಾಜ್ಯಗಳನ್ನು ಸುಡುವ ಬದಲು, 2ಜಿ ತಂತ್ರಜ್ಞಾನದೊಂದಿಗೆ ಅದೇ ತಾಜ್ಯವನ್ನು ಎಥೆನಾಲ್ ಆಗಿ ಪರಿವರ್ತಿಸಬಹುದು. ಈ ಉತ್ಪನ್ನಕ್ಕೆ ಸರಿಯಾದ ಮಾರುಕಟ್ಟೆ ಲಭ್ಯವಾದರೆ, ಕೃಷಿ ತ್ಯಾಜ್ಯಕ್ಕೆ ಉತ್ತಮ ಬೆಲೆಯೂ ಸಿಗಬಹುದು. ಮಾತ್ರವಲ್ಲ, ಹೆಚ್ಚುವರಿ ಬೆಳೆ ಬೆಳೆದು, ಆ ಉತ್ಪನ್ನಗಳಿಗೆ ಬೆಲೆ ಸಿಗದಂತಹ ಪರಿಸ್ಥಿತಿ ನಿರ್ಮಾಣವಾದಾಗ, ಹೆಚ್ಚುವರಿ ಧಾನ್ಯಗಳು ಮತ್ತು ಕೃಷಿ ತ್ಯಾಜ್ಯಗಳನ್ನು ಎಥೆನಾಲ್ ಆಗಿ ಪರಿವರ್ತಿಸಬಹುದು. ❖

ಮಾದರಿ ಪ್ರಶ್ನೋತ್ತರ

ಕೆಪಿಎಸ್‌ಸಿ, ಕೆಎಸ್‌ಐಎಸ್‌ಎಫ್ ಸೇರಿದಂತೆ ಮುಂದೆ ನಡೆಯಲಿರುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳು ಇಲ್ಲಿವೆ.

ಸಾಮಾನ್ಯ ಜ್ಞಾನ

1. 2022ರ ಆಗಸ್ಟ್ 13ರಂದು 30ಕ್ಕೂ ಅಧಿಕ ರಾಷ್ಟ್ರಗಳ 2200ಕ್ಕೂ ಅಧಿಕ ಮಂದಿ ಭಗವದ್ಗೀತೆಯ ಎಲ್ಲಾ 700 ಶ್ಲೋಕಗಳನ್ನು ಕಂಠಪಾಠ ಮಾಡಿ, ಒಕ್ಕೊರಲಿನಿಂದ ಹಾಡಿದರು. ಇದು ಗಿನ್ನಿಸ್ ದಾಖಲೆ ಪುಸ್ತಕದಲ್ಲಿ ಸೇರ್ಪಡೆಯಾಯಿತು. ಕರ್ನಾಟಕದ ಸಂತರೊಬ್ಬರು ಇದಕ್ಕೆ ಮಾರ್ಗದರ್ಶಕರಾಗಿದ್ದರು. ಹಾಗಾದರೆ ಈ ಕಾರ್ಯಕ್ರಮ ಎಲ್ಲಿ ನಡೆಯಿತು?

ಎ) ಅಮೆರಿಕದ ಟೆಕ್ಸಾಸ್ ರಾಜ್ಯದ ಡೆಲ್ಲಾಸ್ ನಗರ
ಬಿ) ಇಂಗ್ಲೆಂಡಿನ ಲಂಡನ್ ನಗರ
ಸಿ) ರಷ್ಯದ ಮಾಸ್ಕೊ ನಗರ
ಡಿ) ಪಾಕಿಸ್ತಾನದ ಕರಾಚಿ ನಗರ

ಉತ್ತರ: ಎ

2. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ದೇಶದಲ್ಲಿರುವ ಹಣದುಬ್ಬರ ನಿಯಂತ್ರಿಸಲು ಮತ್ತು ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸಲು ಆರ್‌ಬಿಐ ತನ್ನ ರೆಪೊದರ (ಬಡ್ಡಿ ದರ) ಹೆಚ್ಚಿಸುತ್ತದೆ. ಆರ್‌ಬಿಐ `ರೆಪೊ ದರ' ಹೆಚ್ಚಿಸಿದರೆ ಗೃಹ, ವಾಹನ, ಚಿನ್ನ ಮತ್ತು ಕಾರ್ಪೊರೇಟ್ ಮತ್ತಿತರ ಸಾಲಗಳ ಇಎಂಐಗಳು ಸಹಜವಾಗಿಯೇ ಏರಿಕೆಯಾಗುತ್ತದೆ.
2) ಬ್ಯಾಂಕುಗಳು ಆರ್‌ಬಿಐನಿಂದ ಪಡೆಯುವ ಹಣಕ್ಕೆ ವಿಧಿಸುವ ಬಡ್ಡಿದರವೇ ರೆಪೊ ದರವಾಗಿದೆ. ಕಳೆದ ಮೇ ತಿಂಗಳಲ್ಲಿ ಆರ್‌ಬಿಐ ರೆಪೊದರವನ್ನು ಶೇ 0.4ರಷ್ಟು ಏರಿಸಿತ್ತು. ನಂತರ ಜೂನ್ ತಿಂಗಳಲ್ಲಿ ಶೇ 0.5 ಏರಿಕೆ ಮಾಡಿತ್ತು ಈಗ ಶೇ 0.5ರಷ್ಟು ಏರಿಕೆ ಮಾಡಿದೆ. ಒಟ್ಟಾರೆ ಪ್ರಸ್ತುತ ರೆಪೊ ದರ ಶೇ 5.40ಕ್ಕೆ ತಲುಪಿದೆ.
3) ಆರ್‌ಬಿಐ ಗವರ್ನರ್ ನೇತೃತ್ವದ ಹಣಕಾಸು ನೀತಿ ಸಮಿತಿಯ ಸದಸ್ಯರು ರೆಪೊದರವನ್ನು ನಿರ್ಧರಿಸುತ್ತಾರೆ.

ಉತ್ತರ ಸಂಕೇತಗಳು:
ಎ) 1 ಮತ್ತು 3 ಮಾತ್ರ ಸರಿಯಾಗಿದೆ
ಬಿ) 1 ಮತ್ತು 2 ಮಾತ್ರ ಸರಿಯಾಗಿದೆ
ಸಿ) 1 ರಿಂದ 3ರತನಕ ಎಲ್ಲವೂ ಸರಿಯಾಗಿದೆ
ಡಿ) ಎಲ್ಲವೂ ತಪ್ಪಾಗಿವೆ.

ಉತ್ತರ: ಸಿ

3) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) 1983ರಲ್ಲಿ ಭಾರತವು ಅಂಟಾರ್ಟಿಕ ಒಪ್ಪಂದದ ಭಾಗವಾಯಿತು. ಆರಂಭದಲ್ಲಿ 12 ದೇಶಗಳು ಈ ಒಪ್ಪಂದ ಮಾಡಿಕೊಂಡಿದ್ದವು. ಪ್ರಸ್ತುತ 54 ದೇಶಗಳು ಈ ಒಪ್ಪಂದದ ಭಾಗವಾಗಿವೆ.
2) ಅಂಟಾರ್ಟಿಕದಲ್ಲಿ ನ್ಯೂಕ್ಲಿಯರ್ ಸ್ಫೋಟ ಮಾಡುವಂತಿಲ್ಲ. ನ್ಯೂಕ್ಲಿಯರ್ ತ್ಯಾಜ್ಯ ಸುರಿಯುವಂತಿಲ್ಲ. ಸೇನಾ ನೆಲೆ ನಿರ್ಮಾಣಕ್ಕೆ ಸದಸ್ಯ ರಾಷ್ಟ್ರಗಳಿಗೆ ಅವಕಾಶ ನೀಡುವುದಿಲ್ಲ. ವೈಜ್ಞಾನಿಕ ಸಂಶೋಧನೆ ನಡೆಸಲು ಅವಕಾಶಗಳಿವೆ. ಸಂಶೋಧನಾ ಕೇಂದ್ರ ಸ್ಥಾಪಿಸಿದ ಮಾತ್ರಕ್ಕೆ ಅಲ್ಲಿ ತಮ್ಮ ದೇಶದ ಸಾರ್ವಭೌಮ ಪ್ರದೇಶ ಎಂದು ಘೋಷಿಸುವಂತೆ ಇಲ್ಲ. ಈ ಮೊದಲಾದ ಅಂಶಗಳು ಅಂಟಾರ್ಟಿಕ ಒಪ್ಪಂದದಲ್ಲಿ ಇವೆ.

ಉತ್ತರ ಸಂಕೇತಗಳು:
ಎ) 2 ಮಾತ್ರ ಸರಿಯಾಗಿದೆ
ಬಿ) 1 ಮಾತ್ರ ಸರಿಯಾಗಿದೆ
ಸಿ) 1 ಮತ್ತು 2 ಎರಡೂ ಸರಿಯಾಗಿವೆ.
ಡಿ) ಯಾವ ಹೇಳಿಕೆಗಳು ಸರಿಯಾಗಿಲ್ಲ

ಉತ್ತರ: ಸಿ

4) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಮಧ್ಯ ಅಮೆರಿಕದಲ್ಲಿರುವ ಪ್ರಾಕೃತಿಕವಾಗಿ ಶ್ರೀಮಂತವಾಗಿರುವ ದೇಶ ನಿಕಾರಾಗುವ. ಕೋಸ್ಟರಿಕಾ ಮತ್ತು ಹೊಂಡುರಾಸ್ ದೇಶಗಳು ಇದರ ಗಡಿಯನ್ನು ಹಂಚಿಕೊಂಡಿವೆ. ನಿಕಾರಾಗುವ ದೇಶದಲ್ಲಿರುವ ಲಿಯೊಮಿಜೊ ಮಧ್ಯ ಅಮೆರಿಕದಲ್ಲಿಯೇ ದೊಡ್ಡನಗರವಾಗಿದೆ.
2) ನಿಕಾರಾಗುವ ದೇಶದಲ್ಲಿ 430ಕ್ಕೂ ಹೆಚ್ಚು ಜ್ವಾಲಾಮುಖಿ ದ್ವೀಪಗಳಿವೆ. ಈ ದೇಶ ಭೂಶಾಖದ ಶಕ್ತಿಯನ್ನು ಬಳಕೆ ಮಾಡಿಕೊಳ್ಳುತ್ತದೆ.
3) ಸಿಹಿ ನೀರಿನ ಶಾರ್ಕ್ ಮೀನು ನಿಕಾರಾಗುವ ದೇಶದಲ್ಲಿ ಮಾತ್ರ ನೋಡಲು ಸಾಧ್ಯ. ಪಾಲೊಡೆಮಯೊ ಜನಪದ ಶೈಲಿಯ ನೃತ್ಯ ಇಲ್ಲಿ ತುಂಬಾ ಪ್ರಸಿದ್ಧ. ಬೇಸಬಾಲ್ ಇಲ್ಲಿನ ರಾಷ್ಟ್ರೀಯ ಕ್ರೀಡೆ.
4) 1856ರಲ್ಲಿ ನಿಕಾರಾಗುವ ದೇಶವನ್ನು ಅಮೆರಿಕ ತನ್ನ ಕಾಲೊನಿ ಮಾಡಿಕೊಳ್ಳುವ ಯೋಜನೆ ರೂಪಿಸಿತ್ತು ಆದರೆ ಜನರು ದಂಗೆ ಎದ್ದು ಪ್ರತಿಭಟಿಸಿದರು

ಉತ್ತರ ಸಂಕೇತಗಳು:
ಎ) 1, 2 ಮತ್ತು 3 ಮಾತ್ರ ಸರಿಯಾಗಿವೆ
ಬಿ) 1, 2 ಮತ್ತು 4 ಮಾತ್ರ ಸರಿಯಾಗಿವೆ
ಸಿ) 1 ರಿಂದ 4ರ ತನಕ ಎಲ್ಲವೂ ಸರಿಯಾಗಿವೆ
ಡಿ) 1, 3 ಮತ್ತು 4 ಮಾತ್ರ ಸರಿಯಾಗಿವೆ.

ಉತ್ತರ: ಸಿ

'ನಿಮಗಿದು ಗೊತ್ತೇ' ಮಾಹಿತಿಗಾಗಿ www.prajavani.net ಜಾಲತಾಣಕ್ಕೆ ಭೇಟಿ ನೀಡಿ.
(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಉದ್ಯೋಗ ವಾರ್ತೆ

ಹೈಕೋರ್ಟ್: ಗ್ರೂಪ್ ಡಿ ಹುದ್ದೆಗಳು

ಕರ್ನಾಟಕ ಹೈಕೋರ್ಟ್‌ನಲ್ಲಿ ಖಾಲಿ ಇರುವ 150 ಗ್ರೂಪ್ ಡಿ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಈ ಸಂಬಂಧ ಆಗಸ್ಟ್ ಅಧಿಸೂಚನೆ ಹೊರಡಿಸಿದೆ.

ಈಗಾಗಲೇ ಆಗಸ್ಟ್ 17ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ.

ಶೈಕ್ಷಣಿಕ ಅರ್ಹತೆ: ಹತ್ತನೇ ತರಗತಿ ಪಾಸಾಗಿರಬೇಕು.

ವಯೋಮಿತಿ : ಕರ್ನಾಟಕ ನೇಮಕಾತಿ ಅಧಿಸೂಚನೆಯ ಪ್ರಕಾರ ಕನಿಷ್ಠ 18 ವರ್ಷ ಮತ್ತು ಗರಿಷ್ಠ 35 ವರ್ಷ. ಎಸ್‌ಸಿ/ಎಸ್‌ಟಿ ವರ್ಗದ ಅಭ್ಯರ್ಥಿಗಳಿಗೆ 5 ವರ್ಷಗಳ ವಯೋಮಿತಿ ಸಡಿಲಿಕೆ ಇದೆ.

ಆಯ್ಕೆ ಪ್ರಕ್ರಿಯೆ: ಮೆರಿಟ್ ಪಟ್ಟಿ ಮತ್ತು ಸಂದರ್ಶನ

ಅರ್ಜಿ ಸಲ್ಲಿಕೆ ವಿಧಾನ : ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು ಕೊನೆ ದಿನ : 17 ಸೆಪ್ಟೆಂಬರ್ 2022.

ಶುಲ್ಕ ಪಾವತಿಗೆ ಕೊನೆ ದಿನ : 21 ಸೆ. 2022

ಹೆಚ್ಚಿನ ಮಾಹಿತಿಗಾಗಿ ಅಧಿಸೂಚನೆ ಲಿಂಕ್ ನೋಡಿ : https://pettige.in/en/tWLfCmjTB6l95iB/preview

ಕಂಪ್ಯೂಟರ್ ಪ್ರೋಗ್ರಾಮರ್, ಜೂನಿಯರ್ ಪ್ರೋಗ್ರಾಮರ್

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಪ್ರೋಗ್ರಾಮರ್ ಮತ್ತು ಜೂನಿಯರ್ ಪ್ರೋಗ್ರಾಮರ್ ಒಂಬತ್ತು ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಈ ಸಂಬಂಧ ಆಗಸ್ಟ್ 8ರಂದು ಅಧಿಸೂಚನೆ ಹೊರಡಿಸಲಾಗಿದೆ.

ಎಷ್ಟೆಷ್ಟು ಹುದ್ದೆಗಳು: ಪ್ರೋಗ್ರಾಮರ್ ಹುದ್ದೆ 2, ಜೂನಿಯರ್ ಪ್ರೋಗ್ರಾಮರ್ ಹುದ್ದೆ 7. ಎರಡೂ ಹುದ್ದೆಗಳೂ ಮೂರು ವರ್ಷಗಳ ಗುತ್ತಿಗೆ ಆಧಾರಿತವಾಗಿವೆ ಎಂದು ಅಧಿಸೂಚನೆಯಲ್ಲಿ ತಿಳಿಸಿದೆ.

ಶೈಕ್ಷಣಿಕ ಅರ್ಹತೆ : ಯಾವುದೇ ಮಾನ್ಯತೆ ಪಡೆದ ಬೋರ್ಡ್ ಅಥವಾ ವಿಶ್ವವಿದ್ಯಾಲಯಗಳಿಂದ ಎಲೆಕ್ಟ್ರಾನಿಕ್ಸ್/ಕಂಪ್ಯೂಟರ್ ಸೈನ್ಸ್, ಎಂಸಿಎ ಪದವಿ ಪೂರ್ಣಗೊಳಿಸಿರಬೇಕು.

ಅರ್ಜಿ ಸಲ್ಲಿಕೆ ವಿಧಾನ: ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವ ವಿವರಗಳನ್ನು registrar@rguhs.ac.in ಈ ಇ–ಮೇಲ್‌ಗೆ ಕಳುಹಿಸಬೇಕು.

ಅರ್ಜಿ ಸಲ್ಲಿಸಲು ಕೊನೆ ದಿನ: 25 ಆಗಸ್ಟ್ 2022

ವಿದ್ಯಾರ್ಹತೆ, ಅನುಭವ, ವಯೋಮಿತಿ ಕುರಿತ ಹೆಚ್ಚಿನ ಮಾಹಿತಿಗೆ : http://wrruw.rsuhs.ac.in ❖

ಪಂಚಮಸಾಲಿಗೆ 2ಎ: ಸಮಿತಿಗೆ ನೋಟಿಸ್

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಉಪ ಪಂಗಡವನ್ನು ಪ್ರವರ್ಗ 3-ಬಿ ಇಂದ 2-ಎ ವ್ಯಾಪ್ತಿಗೆ ಸೇರ್ಪಡೆ ಮಾಡಬೇಕೆಂಬ ಬೇಡಿಕೆ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ರಾಜ್ಯ ಸರ್ಕಾರದ ಕ್ರಮ ವನ್ನು ಪ್ರಶ್ನಿಸಿ ಅರ್ಜಿಗೆ ಸಂಬಂಧಿಸಿ ದಂತೆ, ಸಮಿತಿಗೆ ತುರ್ತು ನೋಟಿಸ್ ಜಾರಿ ಗೊಳಿಸಲು ಹೈಕೋರ್ಟ್ ಆದೇಶಿಸಿದೆ.


ಸರ್ಕಾರದ ಆದೇಶ ಪ್ರಶ್ನಿಸಿ, 'ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ'ದ ಪ್ರಧಾನ ಕಾರ್ಯದರ್ಶಿ ವೆಂಕಟರಾಮಯ್ಯ ಸಲ್ಲಿಸಿರುವ ಅರ್ಜಿ ಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಉನ್ನತ ಮಟ್ಟದ ಸಮಿತಿಗೆ ತುರ್ತು ನೋಟಿಸ್ ಹಾಗೂ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, 'ಅದ್ಯಕ್ಷರ ಹೆಸರಿನಲ್ಲಿ ಸಮಿತಿಯನ್ನು ಪ್ರತಿವಾದಿ ಮಾಡಿ' ಎಂದು ಅರ್ಜಿದಾರರಿಗೆ ಸೂಚಿಸಿ ವಿಚಾರಣೆ ಮುಂದೂಡಿತು.

'ಟಿಟ ಅರ್ಜಿಯ ಮುಂದಿನ ಆದೇಶದವರೆಗೆ ಮುಂದುವರಿಯಬಾರದು' ಎಂದು ಸಮಿತಿಗೆ ಸೂಚಿಸಿ ಇದೇ 12ರಂದು ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಮುಂದಿನ ವಿಚಾರಣೆವ ರೆಗೂ ವಿಸ್ತರಿಸಲಾಗಿದೆ. ಪಂಚಮಸಾಲಿ ಉಪ ಪಂಗಡವನ್ನು 3-ಬಿ ಪ್ರವರ್ಗದಿಂದ 2-ಎ ವ್ಯಾಪ್ತಿಗೆ ಸೇರ್ಪಡೆ ಮಾಡುವುದೂ ಸೇರಿದಂತೆ ಇತರೆ ಸಮುದಾಯಗಳ ಮೀಸಲಾತಿ ಬೇಡಿಕೆ ಪರಿಶೀಲಿಸಿ ವರದಿ ಸಲ್ಲಿಸಲು ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ ಅವರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಿ ರಾಜ್ಯ ಸರ್ಕಾರವು 2021ರ ಜುಲೈ 1ರಂದು ಆದೇಶ ಹೊರಡಿಸಿತ್ತು.

ಕೆಪಿಟಿಸಿಎಲ್ ಪರೀಕ್ಷೆ ಅಕ್ರಮ: ಮತ್ತೆ ಮೂವರ ಸೆರೆ

ಪ್ರಜಾವಾಣಿ ವಾರ್ತೆ



ಶಂಕರ ಉಣಚಲ್



ಆದೇಶ ನಾಗನೂರಿ



ಮಡಿವಾಳಪ್ಪ ತೋರಣಗಟ್ಟಿ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮಕ್ಕೆ ಸಂಬಂಧಿಸಿದಂತೆ, ಮಂಗಳವಾರ ವಿಚಾರಣೆಗೆ ಕರೆದಿದ್ದ ಮೂವರನ್ನು ಬುಧವಾರ ಬಂಧಿಸಲಾಗಿದೆ.

ಹುಕ್ಕೇರಿ ಸರ್ಕಾರಿ ಪದವಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾದ ಕಮತನೂರ ನಿವಾಸಿ ಆದೇಶ ಈರಪ್ಪ ನಾಗನೂರಿ (26), ಬೈಲಹೊಂಗಲ ತಾಲ್ಲೂಕಿನ ನಾವಲಗಟ್ಟಿ ಗ್ರಾಮದ ಮಡಿವಾಳಪ್ಪ ಬಾಳಪ್ಪ ತೋರಣಗಟ್ಟಿ (36), ಇದೇ ತಾಲ್ಲೂಕಿನ ಹೊಸಕೋಟೆಯ ಶಂಕರ ಕಲ್ಲಪ್ಪ ಉಣಚಲ್ (30) ಬಂಧಿತರು. ಇದರೊಂದಿಗೆ ಬಂಧಿತರ ಸಂಖ್ಯೆ 12ಕ್ಕೆ ಏರಿಕೆಯಾಗಿದೆ. ಅಭ್ಯರ್ಥಿಗಳಿಗೆ ಮಾಹಿತಿ ನೀಡಿದ ಇನ್ನೂ ನಾಲ್ವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಬಂಧಿತರಲ್ಲಿ ಆದೇಶ ಎಂಬುವವರು ಹುಕ್ಕೇರಿ ತಾಲ್ಲೂಕಿನ ಶಿರಹಟ್ಟಿ (ಬಿ.ಕೆ) ಗ್ರಾಮದ ತೋಟದ ಮನೆಯಲ್ಲಿ ಕುಳಿತು ಪ್ರಶ್ನೆಪತ್ರಿಕೆಗೆ ಉತ್ತರಗಳನ್ನು ಹೇಳಿದ್ದಾರೆ. ಬಾಳಪ್ಪ ಹಾಗೂ ಶಂಕರ ಇಬ್ಬರೂ ಅಭ್ಯರ್ಥಿಗಳ ಸಂಪರ್ಕ ಹೊಂದಿದ್ದರು. ತಮ್ಮನ್ನು ಸಂಪರ್ಕಿಸಿದ ಅಭ್ಯರ್ಥಿಗಳಿಗೆ ಬ್ಲೂಟೂತ್ ಉಪಕರಣಗಳನ್ನು ಖರೀದಿಸಿದ್ದರು. ಈ ಇಬ್ಬರೂ ಯಾವ ಅಭ್ಯರ್ಥಿಗಳಿಗಾಗಿ ಉಪಕರಣ ಖರೀದಿಸಿದ್ದರೋ ಅವರು ಸರಿಯಾದ ಸಮಯಕ್ಕೆ ಬಾರದ ಕಾರಣ ಪರೀಕ್ಷೆಗೆ ಹಾಜರಾಗಲಿಲ್ಲ. ಆದರೆ, ಅವರಿಗೆ ನೀಡಿದ್ದ ಬ್ಲೂಟೂತ್ ಉಪಕರಣಗಳಲ್ಲಿ ಪರೀಕ್ಷಾ ಕೇಂದ್ರದ ಹೊರಗಿದ್ದ ಸಿಬ್ಬಂದಿಯೊಬ್ಬರ ಕೈಗೆ ಕೊಟ್ಟು ಬಂದಿದ್ದರು ಎಂದು ವಿಚಾರಣೆ ವೇಳೆ ಗೊತ್ತಾಗಿದೆ.

ಹಲವು ಪಕ್ಷಗಳಿಂದ ಅಕ್ರಮದಲ್ಲಿ ಪಾಲ್ಗೊಂಡ ಇನ್ನೂ ಎರಡು ತಂಡಗಳು ಬೆಳಗಾವಿಯಲ್ಲಿ, ಒಂದು ತಂಡ ಉತ್ತರ ಕನ್ನಡ ಜಿಲ್ಲೆಯಲ್ಲಿ ಕ್ರಿಯಾಶೀಲವಾಗಿರುವ ಸುಳಿವು ಸಿಕ್ಕಿದೆ. 'ಇನ್ನೆರಡು ದಿನಗಳಲ್ಲಿ ಬೆಳಗಾವಿ ತಂಡದ ಆರೋಪಿಗಳನ್ನು ವಿಚಾರಣೆಗೆ ತೆಗೆದುಕೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಂಧಿತರಿಂದ ಕಾರು, ಎರಡು ಬ್ಲೂಟೂತ್ ಉಪಕರಣ ಹಾಗೂ ಮೂರು ಮೊಬೈಲ್‌ಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.

ಮತ್ತೊಬ್ಬನ ಬಂಧನ (ಕಾರವಾರ ವರದಿ): ಕರ್ನಾಟಕ ವಿದ್ಯುತ್ ನಿಗಮದ (ಕೆ.ಪಿ.ಟಿ.ಸಿ.ಎಲ್) ಕಿರಿಯ ದರ್ಜೆ ಸಹಾಯಕರ ಹುದ್ದೆ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿ, ಹಳಿಯಾಳದಲ್ಲಿ ಒಬ್ಬನನ್ನು ಪೊಲೀಸರು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಗೊತ್ತಾಗಿದೆ.

ವೆಂಕಟೇಶದಾಸ, ವಿಶಾಖಾ ಹರಿಗೆ ಅಚ್ಯುತಶ್ರೀ ಪ್ರಶಸ್ತಿ



ದೇ.ಸು. ವೆಂಕಟೇಶದಾಸ



ವಿಶಾಖಾ ಹರಿ

ಬೆಂಗಳೂರು: ಪದ್ಮ ಕಲಾ ಕೇಂದ್ರ ಹಾಗೂ ಭಾರತೀಯ ವಿದ್ಯಾಭವನದ ವತಿಯಿಂದ ನೀಡಲಾಗುವ 'ಅಚ್ಯುತಶ್ರೀ' ಪ್ರಶಸ್ತಿಗೆ ರಾಜ್ಯದ ದೇ.ಸು. ವೆಂಕಟೇಶದಾಸ ಹಾಗೂ ತಮಿಳುನಾಡಿನ ವಿದುಷಿ ವಿಶಾಖಾ ಹರಿ ಆಯ್ಕೆಯಾಗಿದ್ದಾರೆ.

ಪ್ರವಚನ ಹರಿಕಥಾ ಕ್ಷೇತ್ರದ ಸಾಧಕರಿಗೆ ಅಚ್ಯುತಶ್ರೀ ರಾಷ್ಟ್ರೀಯ ಪ್ರಶಸ್ತಿ ನೀಡಲಾಗುತ್ತದೆ. ಭಾರತೀಯ ವಿದ್ಯಾಭವನದಲ್ಲಿ ಸೆ.3ರಂದು ಆಯೋಜಿಸಲಾಗಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ವೆಂಕಟೇಶದಾಸ ಭಾಗವತುಸಲಿದ್ದಾರೆ ಎಂದು ಪದ್ಮ ಕಲಾ ಕೇಂದ್ರದ ವ್ಯವಸ್ಥಾಪಕ ಟ್ರಸ್ಟಿ ಡಾ. ದತ್ತಾತ್ರೇಯ ಎಲ್. ವೆಲಣಕರ್ ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ದತ್ತಾತ್ರೇಯ ಎಲ್. ವೆಲಣಕರ್ ರಚಿಸಿರುವ 'ದ ಸ್ಪೆಂಡರ್ ಆಫ್ ಕಥಾಕೀರ್ತನ್' ಗ್ರಂಥ ಬಿಡುಗಡೆ ಮಾಡಲಾಗುತ್ತದೆ. ಬೆಂಗಳೂರಿನ ರಾಮಕೃಷ್ಣ ಮಿಷನ್‌ನ ಸ್ವಾಮಿ ಮಂಗಳನಾಥಾನಂದರು ಹಾಗೂ ರಾಜ್ಯಸಭೆ ಸದಸ್ಯ ಜಗ್ಗೇಶ್ ಆಗಲಿದೆ.

ಸಚಿವ ಮುನಿರತ್ನ ವಿರುದ್ಧ ಕೇಳಿಬಂದಿರುವ ಕಮಿಷನ್ ಆರೋಪ ಹೊಸದೇನಲ್ಲ. ಇಡೀ ರಾಜ್ಯದಲ್ಲಿ ಕಮಿಷನ್ ದಂಧೆ ನಡೆಯುತ್ತಿದೆ. ಇದು ಕೋಲಾರ ಜಿಲ್ಲೆಗೆ ಸೀಮಿತವಲ್ಲ

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಯಾಕೆ ಪ್ರಕರಣ ದಾಖಲಿಸಿಲ್ಲ– ಡಿಕೆಶಿ

ಬೆಂಗಳೂರು: 'ಕೆಂಪಣ್ಣ ಅವರ ಆರೋಪದಲ್ಲಿ ಹುರುಳಿಲ್ಲ ಎಂದಾದರೆ ಅವರ ವಿರುದ್ಧ ಸರ್ಕಾರ ಯಾಕೆ ಪ್ರಕರಣ ದಾಖಲಿಸಿಲ್ಲ. ತಮ್ಮ ಬಳಿ ಎಲ್ಲ ರೀತಿಯ ಸಾಕ್ಷ್ಯಗಳಿವೆ ಎಂದು ಕೆಂಪಣ್ಣ ಹೇಳುತ್ತಿದ್ದರೂ ಯಾಕೆ ತನಿಖೆ ಮಾಡುತ್ತಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

'ಕೆಂಪಣ್ಣ ಅವರು ನಿಮಗೆ ಹಾಗೂ ಪ್ರಧಾನಿಗೆ ಪತ್ರ ಬರೆದಾಗ ಯಾಕೆ ಕ್ರಮ ಕೈಗೊಳ್ಳಲಿಲ್ಲ' ಎಂದು ಮುಖ್ಯಮಂತ್ರಿಯವರನ್ನು ಪ್ರಶ್ನಿಸಿದ ಅವರು, 'ಲೋಕಾಯುಕ್ತ ಕೈಯಲ್ಲಿ ತನಿಖೆ ಮಾಡಿಸಬೇಕಿತ್ತು. ತಪ್ಪು ಮಾಡಿಲ್ಲ ಎಂದಾದರೆ ನ್ಯಾಯಾಂಗ ತನಿಖೆ ಮಾಡಿಸಿ. ಭಯ ಯಾಕೆ' ಎಂದರು.

ಕಾಂಗ್ರೆಸ್ ಪ್ರಾಯೋಜಿತ: ಸುಧಾಕರ್

ಬೆಂಗಳೂರು: 'ಗುತ್ತಿಗೆದಾರರ ಆರೋಪ ಕಾಂಗ್ರೆಸ್ ಪ್ರಾಯೋಜಿತ. ಇದನ್ನೇ ಚುನಾವಣೆಯ ಕಾರ್ಯಸೂಚಿ ಮಾಡಿಕೊಳ್ಳಲು ಕಾಂಗ್ರೆಸ್ಸಿನವರು ಹೊರಟಿದ್ದಾರೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಆರೋಪಿಸಿದರು.

'ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಕ್ಷಣದಿಂದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಏನೇನೋ ಹೇಳಿಕೆ ನೀಡಲು ಆರಂಭಿಸಿದ್ದಾರೆ. ಭ್ರಷ್ಟಾಚಾರ ನಡೆಸಿ ಜನರಿಂದ ತಿರಸ್ಕೃತಗೊಂಡಿರುವ ಕಾಂಗ್ರೆಸ್, ಕೆಂಪಣ್ಣ ಅವರ ಆರೋಪ ವಿಚಾರವನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿದೆ' ಎಂದರು.

ಬಿಲ್‌ಗಳ ಜ್ಯೇಷ್ಠತೆಯ ಆಧಾರದಲ್ಲಿ ಬಾಕಿ ಮೊತ್ತ ಪಾವತಿ

ಪಾರದರ್ಶಕತೆ: ಹಲವು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರರು ನಿರ್ವಹಿಸಿದ ವಿವಿಧ ಕಾಮಗಾರಿಗಳ ಬಾಕಿ ಮೊತ್ತವನ್ನು ಬಿಲ್‌ಗಳ ಜ್ಯೇಷ್ಠತೆ ಆಧಾರದಲ್ಲಿ ಕಾಲಮಿತಿಯ ಒಳಗೆ ತ್ವರಿತ ಪಾವತಿ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಜತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಹಿಂದೆ ನಡೆಸಿದ ಸಭೆಯಲ್ಲಿ ಹಲವು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಅದರಂತೆ ಗುತ್ತಿಗೆದಾರರ ಬಾಕಿ ಮೊತ್ತವನ್ನು ಸಲ್ಲಿಕೆಯಾದ ಬಿಲ್‌ಗಳ ಜ್ಯೇಷ್ಠತೆ ಆಧಾರದಲ್ಲಿ ನೀಡಲು ಅನುಕೂಲವಾಗುವಂತೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಪ್ರತಿ ಕಾಮಗಾರಿಯ ಟೆಂಡರ್‌ಗಳನ್ನೂ 1999ರ ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಕಾಯ್ದೆ ಅನ್ವಯವೇ ಕೈಗೊಳ್ಳಬೇಕು. ಟೆಂಡರ್ ಮೌಲ್ಯಮಾಪನಗಳನ್ನು ನಿಯಮಾನುಸಾರ ನಿಗದಿಪಡಿಸಬೇಕು. ಸಲ್ಲಿಕೆಯಾದ ಅರ್ಜಿಗಳಲ್ಲಿ ಅತ್ಯಂತ ಕಡಿಮೆ ದರ ನಮೂದಿಸಿದ ವಾಣಿಜ್ಯ ಮತ್ತು ತಾಂತ್ರಿಕವಾಗಿ ಅರ್ಹರಾಗಿರುವ ಗುತ್ತಿಗೆದಾರರಿಗೆ ಕಾಮಗಾರಿ ನೀಡಬೇಕು.

ಗುತ್ತಿಗೆ ಪಡೆದವರು ಕಾಮಗಾರಿ ನಿರ್ವಹಿಸುವಲ್ಲಿ ವಿಫಲರಾದರೆ, ಅವರ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು. ತಾಲ್ಲೂಕು ಮಟ್ಟದಲ್ಲಿ ಟೆಂಡರ್ ಮೊತ್ತವನ್ನು ₹ 1 ಕೋಟಿಗೆ ಮಿತಿಗೊಳಿಸಬೇಕು ಎಂದು ಆರ್ಥಿಕ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಕಾರ್ಯ ಯೋಜನೆಯ ಅನುಷ್ಠಾನವನ್ನು ಗಮನದಲ್ಲಿ ಇಟ್ಟುಕೊಂಡು ಕಾಮಗಾರಿಗಳನ್ನು ನಿಗದಿಪಡಿಸಬೇಕು. ಪ್ರತಿ ಹಂತದಲ್ಲೂ ಟೆಂಡರ್ ಆಹ್ವಾನಿಸುವ, ಅಂಗೀಕರಿಸುವ ಪ್ರಾಧಿಕಾರ ನಿಯಮ ಕಡ್ಡಾಯವಾಗಿದೆ. ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ಅನುಷ್ಠಾನಗೊಳ್ಳುವ ಯೋಜನೆಗಳಿಗೆ ಟೆಂಡರ್ ಕರೆಯಲು ಗೊತ್ತುಪಡಿಸಿದ ಮೊತ್ತವನ್ನು ಮೀರದಂತೆ ಈ ಪ್ರಾಧಿಕಾರಗಳು ಎಚ್ಚರಿಕೆ ವಹಿಸಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

₹50 ಲಕ್ಷದಿಂದ ₹1 ಕೋಟಿಯವರೆಗೆ, ₹1 ಕೋಟಿ ಮೇಲ್ಪಟ್ಟು ಟೆಂಡರ್ ಪಡೆದ ಗುತ್ತಿಗೆದಾರರಿಗೆ ನಿಯಮದ ಅನ್ವಯ ನಿಗದಿಪಡಿಸಲಾಗಿದ್ದ ಯಂತ್ರೋಪಕರಣಗಳ ಸಾಮರ್ಥ್ಯವನ್ನು ನಿಗದಿಪಡಿಸಲಾಗಿತ್ತು. ಈ ನಿಯಮವನ್ನು ಸಡಿಲಿಸಿ ₹ 3 ಕೋಟಿವರೆಗಿನ ಕಾಮಗಾರಿಗಳಿಗೆ ವಿನಾಯಿತಿ ನೀಡಲಾಗಿದೆ.

₹ 1,940 ಕೋಟಿ ಬಾಕಿ ಪಾವತಿ

₹ 50 ಕೋಟಿ ಮೀರಿದ ಟೆಂಡರ್ ಹಾಗೂ ಅಂದಾಜುಗಳ ಪೂರ್ವ ಪರಿಶೀಲನೆಗೆ ನಿವೃತ್ತ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ಪರಿಣತಿ ಹೊಂದಿರುವ ಸದಸ್ಯರ ಸಮಿತಿ ರಚಿಸಲು ಜಲಸಂಪನ್ಮೂಲ ಇಲಾಖೆ ಕ್ರಮ ಕೈಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

₹ 2 ಕೋಟಿ ಒಳಗಿನ ಕಾಮಗಾರಿಗಳ ಬಾಕಿ ₹ 1,940 ಕೋಟಿ (9,800 ಬಿಲ್‌ಗಳು) ಪಾವತಿಸಲಾಗಿದ್ದು, ₹ 2 ಕೋಟಿಗೂ ಅಧಿಕ ಮೊತ್ತದ ಬಿಲ್‌ಗಳನ್ನು ತ್ವರಿತವಾಗಿ ಪಾವತಿಸಲು ಸೂಚಿಸಲಾಗಿದೆ. ಆ ಮೂಲಕ ಸಣ್ಣಗುತ್ತಿಗೆದಾರರ ಸಂಕಷ್ಟಕ್ಕೆ ಸ್ಪಂದಿಸಲಾಗಿದೆ.

2020–21ನೇ ಸಾಲಿನಲ್ಲಿ ಬಾಕಿ ಇದ್ದ ಯೋಜನಾ ಕಾಮಗಾರಿಗಳ ₹ 10 ಸಾವಿರ ಕೋಟಿ ಬಾಕಿ ಸೇರಿ, ₹ 19,974 ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿದೆ ಎಂದು ಪ್ರಕಟಣೆ ಹೇಳಿದೆ.

ಕೋಲಾರ ಗುತ್ತಿಗೆದಾರರಿಗೆ ₹180 ಕೋಟಿ ಬಾಕಿ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯಾದ್ಯಂತ ವಿವಿಧ ಇಲಾಖೆಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಸರ್ಕಾರ 2 ವರ್ಷಗಳಿಂದ ಬಾಕಿ ಉಳಿಸಿಕೊಂಡಿರುವ ಬಿಲ್ ಮೊತ್ತ ₹180 ಕೋಟಿ.

ಲೋಕೋಪಯೋಗಿ ಇಲಾಖೆಯಲ್ಲಿ ₹82 ಕೋಟಿ, ಗ್ರಾಮೀಣಾಭಿವೃದ್ಧಿ ಇಲಾಖೆಯ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದಲ್ಲಿ ನಡೆದಿರುವ ಕಾಮಗಾರಿಗೆ ಸಂಬಂಧಿಸಿ ₹38 ಕೋಟಿ ಬಿಲ್ ಇನ್ನೂ ಪಾವತಿಯಾಗಿಲ್ಲ. ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿ ಹಲವಾರು ಕಾಮಗಾರಿ ನಡೆದಿದ್ದು, ಸ್ಥಳೀಯ ಗುತ್ತಿಗೆದಾರರಿಗೆ ಇನ್ನೂ ಹಣ ಬಿಡುಗಡೆಯಾಗಿಲ್ಲ.

ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ವಿ.ಕೃಷ್ಣಪ್ಪರೆಡ್ಡಿ ನೇತೃತ್ವದಲ್ಲಿ ಸಂಘದವರು ಹಲವು ಬಾರಿ ಜಿಲ್ಲಾಧಿಕಾರಿಗೆ ಮನವಿ ನೀಡಿದ್ದಾರೆ, ಪ್ರತಿಭಟನೆ ಕೂಡ ನಡೆಸಿದ್ದಾರೆ.

'ಬಾಕಿ ಬಿಲ್ ಪಾವತಿ ಸಂಬಂಧ ಆ.25ರಂದು (ಗುರುವಾರ) ಸಭೆ ನಡೆಸಿ ಚರ್ಚಿಸುವುದಾಗಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಭರವಸೆ ನೀಡಿದ್ದಾರೆ. ಆಕಸ್ಮಾತ್ ಹಣ ಪಾವತಿಯ ಭರವಸೆ ಸಿಗದಿದ್ದರೆ ಕಾಮಗಾರಿ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತೇವೆ' ಎಂದು ಸಂಘದ ಉಪಾಧ್ಯಕ್ಷ ಬಿ.ಎಂ.ವೆಂಕಟರಮಣಗೌಡ ತಿಳಿಸಿದ್ದಾರೆ.

ಹಣ ಬಿಡುಗಡೆಗೆ ಯಾರಿಂದಲಾದರೂ ಕಮಿಷನ್ ಬೇಡಿಕೆ ಬಂದಿದೆಯೇ ಎಂಬ ಪ್ರಶ್ನೆಗೆ, 'ಸರ್ಕಾರ ಇನ್ನೂ ಹಣವನ್ನೇ ಬಿಡುಗಡೆ ಮಾಡಿಲ್ಲ. ಕಮಿಷನ್ ಬಗ್ಗೆ ನನಗೆ ಗೊತ್ತಿಲ್ಲ' ಎಂದರು.

ರಸ್ತೆ ಪರಿಶೀಲನೆ ಮುಂದೂಡಿಕೆ

ಕೋಲಾರ ಜಿಲ್ಲೆಯಲ್ಲಿ ಆ.23, 24 ಈ ಎರಡು ದಿನ ಪ್ರವಾಸ ಕೈಗೊಂಡು ಹದಗೆಟ್ಟಿರುವ ರಸ್ತೆ ಪರಿಶೀಲಿಸಿ ಗುಂಡಿ ಮುಚ್ಚಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ಹೇಳಿದ್ದರು. ಅಂಗನವಾಡಿ ಹಾಗೂ ಶಾಲಾ ಕೊಠಡಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ ವ್ಯವಸ್ಥೆ ಪರಿಶೀಲಿಸುವುದಾಗಿ ತಿಳಿಸಿದ್ದರು. ಆದರೆ, ಗುತ್ತಿಗೆದಾರರ ಪ್ರತಿಭಟನೆಯಿಂದಾಗಿ ಅವರು ತಮ್ಮ ಪ್ರವಾಸ ಮುಂದೂಡಿದ್ದಾರೆ.

ಶೇ 40 ಲಂಚ: ಮತ್ತೆ ಭುಗಿಲು

ಒಂದನೇ ಪುಟದಿಂದ...

ಬಳಿಕ ಗುತ್ತಿಗೆದಾರರ ಸಂಘದ ಕಚೇರಿಯಲ್ಲಿ ಸಭೆ ನಡೆಸಿದ ಪದಾಧಿಕಾರಿಗಳು, ಕೆಲವು ಸಚಿವರ ವಿರುದ್ಧದ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸುವ ಕುರಿತು ಚರ್ಚಿಸಿದ್ದಾರೆ. ಲಭ್ಯವಿರುವ ದಾಖಲೆಗಳನ್ನು ಮುಂದಿಟ್ಟುಕೊಂಡು ಹೋರಾಟ ಕೈಗೆತ್ತಿಕೊಳ್ಳುವ ಕುರಿತು ಚರ್ಚಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆದಾರರು ಶೇ 50ರಷ್ಟು ಲಂಚ ಕೊಡಬೇಕಿದೆ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮಂಗಳವಾರ ಲಿಖಿತ ದೂರು ಸಲ್ಲಿಸಿದೆ. ಈ ವಿಚಾರ ಬಿಜೆಪಿ-ಕಾಂಗ್ರೆಸ್ ನಡುವೆ ತೀವ್ರ ವಾಕ್ಸಮರಕ್ಕೆ ನಾಂದಿಹಾಡಿದೆ. ಬಿಬಿಎಂಪಿ ಗುತ್ತಿಗೆದಾರರ ಸಂಘದ ಆರೋಪದ ವಿಚಾರ ಸಾಮಾಜಿಕ ಮಾಧ್ಯಮಗಳಲ್ಲೂ ಚರ್ಚೆಯ ಮುನ್ನೆಲೆಗೆ ಬಂದಿದೆ.

'ಅತ್ಯಂತ ಒತ್ತಡ': 'ಕ್ರೈಸ್'ಗೆ ಸಂಬಂಧಿಸಿದಂತೆ ರಾಜ್ಯದ ವಿವಿಧೆಡೆ ಕೈಗೊಂಡಿರುವ ಕಾಮಗಾರಿಗಳ ಬಾಬ್ತು ಗುತ್ತಿಗೆದಾರರಿಗೆ ₹ 1,200 ಕೋಟಿ ಬಿಲ್ ಬಾಕಿ ಉಳಿದಿದೆ. ಕಟ್ಟಡಗಳು ಹಸ್ತಾಂತರಕ್ಕೆ ಸಿದ್ಧವಾಗಿದ್ದರೂ ಬಿಲ್ ಪಾವತಿಸುತ್ತಿಲ್ಲ. ನೂರಾರು ಗುತ್ತಿಗೆದಾರರು ನಿಮ್ಮನ್ನು ಭೇಟಿಮಾಡಿದ್ದರೂ ಕ್ರಮ ಕೈಗೊಂಡಿಲ್ಲ. ಸಾಲದ ಭಾರ ತಾಳಲಾರದೇ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ' ಎಂದು ಕ್ರೈಸ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಶಂಕರಗೌಡ ಎಸ್. ಹೊಸಮನಿ ಮತ್ತು ಪ್ರಧಾನ ಕಾರ್ಯದರ್ಶಿ ಎಂ.ಬಿ. ಶ್ರೀನಿವಾಸಗೌಡ ಮುಖ್ಯಮಂತ್ರಿಯವರಿಗೆ ಶುಕ್ರವಾರ ನೀಡಿದ ಪತ್ರದಲ್ಲಿ ದೂರಿದ್ದಾರೆ.

ಬಾಕಿ ಬಿಲ್ ಪಾವತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ತಪ್ಪಿದರೆ ಕ್ರೈಸ್ ಕಚೇರಿ ಎದುರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲಾಗುವುದು ಎಂದು ಸಂಘ ಹೇಳಿದೆ.

'ಲೋಕಾಯುಕ್ತಕ್ಕೆ ದೂರು ನೀಡಲಿ'

ಒಂದನೇ ಪುಟದಿಂದ...

'ಗುತ್ತಿಗೆದಾರರ ಸಂಘದ ಅಧ್ಯಕ್ಷರು ಹಿಂದೆ ಹೇಳಿದ್ದ ವಿಚಾರದಲ್ಲಿ ಎಲ್ಲ ಕ್ರಮಗಳನ್ನೂ ಕೈಗೊಂಡಿದ್ದೇವೆ. ಈಗ ಸಿದ್ದರಾಮಯ್ಯ ಅವರನ್ನು ಭೇಟಿಮಾಡಿದ ಬಳಿಕ ಆರೋಪ ಮಾಡುತ್ತಿದ್ದಾರೆ. ಅದನ್ನೂ ಗಮನಿಸಬೇಕು. ಕೆಂಪಣ್ಣ ಅವರ ಸಂಘದೊಂದಿಗೆ ಇಲ್ಲ. ಗುತ್ತಿಗೆದಾರರ ಹಲವು ಸಂಘಗಳಿವೆ. ಅವುಗಳಲ್ಲಿ ಕೆಂಪಣ್ಣ ಅವರ ಸಂಘವೂ ಒಂದು' ಎಂದು ಮುಖ್ಯಮಂತ್ರಿ ಹೇಳಿದರು.

ಪ್ರಧಾನಿಯವರಿಗೆ ಪತ್ರ ಬರೆಯಲು ಇದು ಪ್ರಜಾಪ್ರಭುತ್ವ ದೇಶ, ಎಲ್ಲರಿಗೂ ಅಧಿಕಾರ ಇದೆ. ಹೈಕೋರ್ಟ್ ಆದೇಶದ ಬಳಿಕ ಲೋಕಾಯುಕ್ತಕ್ಕೆ ಸಂಪೂರ್ಣ ಅಧಿಕಾರವಿದೆ. ನಿರ್ದಿಷ್ಟ ದೂರು ನೀಡಿದರೆ ತನಿಖೆಯಾಗುತ್ತದೆ. ಯಾರೇ ತಪ್ಪು ಮಾಡಿದ್ದರೂ ಸರ್ಕಾರ ಕ್ರಮ ಜರುಗಿಸುತ್ತದೆ ಎಂದರು.

ಸಿ.ಎಂ ಸೇರಿ ಎಲ್ಲರೂ ಭ್ರಷ್ಟರು: ಕೆಂಪಣ್ಣ

ಬೆಂಗಳೂರು: 'ಇದು ಅತ್ಯಂತ ಭ್ರಷ್ಟ ಸರ್ಕಾರ. ನನ್ನ ಜೀವನದಲ್ಲೇ ಇಂತಹ ಸರ್ಕಾರವನ್ನು ನೋಡಿಲ್ಲ. ಮುಖ್ಯಮಂತ್ರಿ ಸೇರಿದಂತೆ ಎಲ್ಲರೂ ಭ್ರಷ್ಟರಾಗಿದ್ದಾರೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಆರೋಪಿಸಿದರು.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿ ಮಾಡಿದ ಬಳಿಕ ಮಾತನಾಡಿದ ಅವರು, 'ಕೆಲವು ಕಡೆ ಶೇ 40 ಮಾತ್ರವಲ್ಲ ಅದಕ್ಕಿಂತಲೂ ಹೆಚ್ಚು ಕಮಿಷನ್ ಕೇಳುತ್ತಿದ್ದಾರೆ. ಈ ಬಗ್ಗೆ 15 ದಿನಗಳಲ್ಲಿ ಮತ್ತೊಮ್ಮೆ ಪ್ರಧಾನಿಗೆ ಪತ್ರ ಬರೆಯುತ್ತೇನೆ' ಎಂದರು.

'ಒಬ್ಬರು, ಇಬ್ಬರು ಎಂದಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿ ಎಲ್ಲರೂ ಭ್ರಷ್ಟರಾಗಿದ್ದಾರೆ. ಎಲ್ಲ ಸಚಿವರು, ಶಾಸಕರು ಶೇ 10ರಿಂದ 15ರಷ್ಟು ಕಮಿಷನ್ ಕೇಳುತ್ತಿದ್ದಾರೆ. ಈ ವಿಷಯದಲ್ಲಿ ಯಾರಿಗೂ ರ್‍ಯಾಂಕಿಂಗ್ ಕೊಡಲು ಆಗುವುದಿಲ್ಲ. ಕೆಲವು ಕಡೆ ಶೇ 100 ಭ್ರಷ್ಟಾಚಾರ ಇದೆ. ಕೆಲವು ಕಡೆ ಒಂದು ಪೈಸೆಯಷ್ಟೂ ಕೆಲಸ ಮಾಡದೇ ಶೇ 100 ತಿಂದಿಲ್ಲವೇ' ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

'ಭ್ರಷ್ಟಾಚಾರ ದೇಶಕ್ಕೆ ಮಾರಕವೆಂದು ಸ್ವಾತಂತ್ರ್ಯ ದಿನಾಚರಣೆ ದಿನ ಪ್ರಧಾನಿ ಭಾಷಣ ಮಾಡಿದ್ದಾರೆ. ಇದನ್ನು ನಾವು ಸ್ವಾಗತಿಸುತ್ತೇವೆ. ಆದರೆ, ನಾವು ಕೊಟ್ಟಿದ್ದ ದೂರಿನ ಬಗ್ಗೆ ಇನ್ನೂ ಯಾಕೆ ಕ್ರಮಕೈಗೊಂಡಿಲ್ಲ' ಎಂದು ಪ್ರಶ್ನಿಸಿದರು.

'ಮುಖ್ಯಮಂತ್ರಿ ಮಾತಿಗೆ ಕವಡೆ ಕಾಸಿನ ಬೆಲೆ ಇಲ್ಲ. ಅವರು ಆದೇಶ ನೀಡಿದರೂ ಹಣ ಬಿಡುಗಡೆ ಆಗುತ್ತಿಲ್ಲ. ಟೆಂಡರ್ ಕರೆಯುವ ಪ್ರಕ್ರಿಯೆ ಬದಲಾಯಿಸಲು ಮುಖ್ಯಮಂತ್ರಿ ಹೇಳಿದ್ದರು. ಆದರೆ, ಅಧಿಕಾರಿಗಳು ಅವರ ಮಾತು ಕೇಳುತ್ತಿಲ್ಲ' ಎಂದರು.

'ಜಲಸಂಪನ್ಮೂಲ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಇಲಾಖೆಗಳು ಹಾಗೂ ಬಿಬಿಎಂಪಿಯಿಂದ ಸುಮಾರು ₹ 22 ಸಾವಿರ ಕೋಟಿಗೂ ಹೆಚ್ಚು ಹಣ ಗುತ್ತಿಗೆದಾರರಿಗೆ ಬಿಡುಗಡೆ ಆಗಬೇಕಿದೆ. ಮೂರು ವರ್ಷಗಳಿಂದ ಬಿಲ್ ಬಾಕಿ ಇದೆ. ಸಿದ್ದರಾಮಯ್ಯ ಅವರಿಗೆ ಕೆಲವು ಮಾಹಿತಿಗಳನ್ನು ನೀಡಿದ್ದೇವೆ. ಸದನದಲ್ಲಿ ಈ ವಿಚಾರ ಪ್ರಸ್ತಾಪಿಸುತ್ತೇನೆ ಎಂದು ಅವರು ಹೇಳಿದ್ದಾರೆ' ಎಂದು ತಿಳಿಸಿದರು.

'ಸಿದ್ದರಾಮಯ್ಯ ಅವರಿಗೆ ನಾವು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ದಾಖಲೆ ಯಾರಿಗೆ ಕೊಟ್ಟರೂ ಯಾರು ಕೊಟ್ಟರು ಎಂಬುದು ಗೊತ್ತಾಗುತ್ತದೆ. ತನಿಖೆ ಮಾಡಿದಾಗ ದಾಖಲೆಗಳನ್ನು ಕೊಡುತ್ತೇವೆ. ನ್ಯಾಯಾಂಗ ತನಿಖೆ ನಡೆಸಲಿ' ಎಂದು ಆಗ್ರಹಿಸಿದರು.

ಒಬ್ಬ ಸಚಿವರ ವಿರುದ್ಧದ ದಾಖಲೆಗಳನ್ನು ಕಾನೂನು ತಜ್ಞರಿಗೆ ಕಳುಹಿಸಿದ್ದು, ಅಭಿಪ್ರಾಯ ಕೋರಲಾಗಿದೆ. ಅವರ ಸಲಹೆ ಆಧರಿಸಿ ಮುಂದಿನ ವಾರವೇ ಮೊಕದ್ದಮೆ ಹೂಡಲು ನಿರ್ಧರಿಸಿದ್ದೇವೆ

ಕೆಂಪಣ್ಣ, ಅಧ್ಯಕ್ಷ ರಾಜ್ಯ ಗುತ್ತಿಗೆದಾರರ ಸಂಘ

ನ್ಯಾಯಾಂಗ ತನಿಖೆಗೆ ಆಗ್ರಹ

ಬೆಂಗಳೂರು: 'ಶೇ 40 ಕಮಿಷನ್ ಆರೋಪದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು. ನಮ್ಮ ಆಗ್ರಹಕ್ಕೆ ಬೆಲೆ ಕೊಡದೆ, ಭಂಡತನ ಪ್ರದರ್ಶಿಸಿದರೆ ಜನರ ಬಳಿಗೆ ಈ ವಿಚಾರವನ್ನು ತೆಗೆದುಕೊಂಡು ಹೋಗುತ್ತೇವೆ. ಜನ ತೀರ್ಮಾನಿಸುತ್ತಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಕೆಂಪಣ್ಣ ಅವರ ಭೇಟಿಯ ನಂತರ ಮಾತನಾಡಿದ ಅವರು, 'ಸರ್ಕಾರದ ಭ್ರಷ್ಟಾಚಾರವನ್ನು ಸಾಬೀತು ಮಾಡುತ್ತೇವೆ. ಸಾಬೀತು ಮಾಡದೇ ಇದ್ದರೆ ನಮ್ಮ ಮೇಲೆ ಕಾನೂನು ಕ್ರಮ ಜರುಗಿಸಿ, ಎದುರಿಸಲು ಸಿದ್ಧರಿದ್ದೇವೆ ಎಂದು ಸಂಘದವರು ಹೇಳುತ್ತಿದ್ದಾರೆ' ಎಂದರು.

'ಸಚಿವ ಮುನಿರತ್ನ ಅವರ ಹೆಸರನ್ನು ಕೆಂಪಣ್ಣ ಪ್ರಸ್ತಾಪಿಸಿದ್ದಾರೆ. ನೀರಾವರಿ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಇಲಾಖೆ, ಬೆಂಗಳೂರು ನಗರಾಭಿವೃದ್ಧಿ ಇಲಾಖೆಗಳಲ್ಲೂ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎಂದಿದ್ದಾರೆ. ಸಿದ್ದರಾಮಯ್ಯ ಅವರದ್ದು ಶೇ 10 ಕಮಿಷನ್ ಸರ್ಕಾರ ಎಂದು ಚುನಾವಣಾ ಭಾಷಣದಲ್ಲಿ ಮೋದಿ ಆರೋಪಿಸಿದಾಗ ಎಲ್ಲರೂ ಅದಕ್ಕೆ ಪ್ರಚಾರ ನೀಡಿದರು. ಯಾರೂ ಅವರ ಬಳಿ ದಾಖಲೆ ಕೇಳಿಲ್ಲ. ಈಗ ಗುತ್ತಿಗೆದಾರರ ಸಂಘದವರು ಸರ್ಕಾರದ ಭ್ರಷ್ಟಾಚಾರವನ್ನು ಸಾಬೀತು ಮಾಡಲು ಸಿದ್ಧರಿದ್ದಾರೆ. ತನಿಖೆ ಆಗಬೇಕೋ ಬೇಡವೋ' ಎಂದರು.

'ಲಿಂಗಸುಗೂರು, ದೇವದುರ್ಗದಲ್ಲಿ ಕಾಮಗಾರಿಯನ್ನೇ ಮಾಡದೆ ಬಿಲ್ ತೆಗೆದುಕೊಂಡಿದ್ದಾರೆ ಎಂಬ ಆರೋಪ ಇದೆ. ತನಿಖೆ ನಡೆದರೆ ಈ ಎಲ್ಲ ವಿಚಾರ ಹೊರಬರಲಿದೆ' ಎಂದರು.

ಸಂಕ್ಷಿಪ್ತ ಸುದ್ದಿ

ಕೃತಿಗಳ ಆಹ್ವಾನ

ಮಂಗಳೂರು: ಕರ್ನಾಟಕ ಮುಸ್ಲಿಂ ಲೇಖಕರ ಸಂಘವು 2021ನೇ ಸಾಲಿನ ಮುಸ್ಲಿಂ ಸಾಹಿತ್ಯ ಪ್ರಶಸ್ತಿಗೆ ಕೃತಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ.

ಆಸಕ್ತ ಮುಸ್ಲಿಂ ಬರಹಗಾರರು ಕನ್ನಡದಲ್ಲಿ ಪ್ರಕಟಿತ 2021ನೇ ಸಾಲಿನ ಕೃತಿಯ ನಾಲ್ಕು ಪ್ರತಿಗಳನ್ನು ಸೆಪ್ಟೆಂಬರ್ 15ರ ಒಳಗಾಗಿ ಸಂಚಾಲಕರು, ಮುಸ್ಲಿಂ ಸಾಹಿತ್ಯ ಪ್ರಶಸ್ತಿ, ಮುಸ್ಲಿಂ ಲೇಖಕರ ಸಂಘ, ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಮಂಗಳೂರು – 575001 (9845054191) ಈ ವಿಳಾಸಕ್ಕೆ ಕಳುಹಿಸಬಹುದು.

10 ಪಾಲಿಕೆ ಮೇಯರ್, ಉಪಮೇಯರ್ ಮೀಸಲಾತಿ ಪ್ರಕಟ

ಬೆಂಗಳೂರು: ರಾಜ್ಯದ 10 ಮಹಾನಗರ ಪಾಲಿಕೆಗಳ ಮೇಯರ್ ಮತ್ತು ಉಪಮೇಯರ್ ಹುದ್ದೆಗಳಿಗೆ ಮೀಸಲಾತಿಯನ್ನು ಪ್ರಕಟಿಸಲಾಗಿದೆ.

ಬಳ್ಳಾರಿ: ಮೇಯರ್– ಹಿಂದುಳಿದ ವರ್ಗ(ಅ) ಮಹಿಳೆ, ಉಪಮೇಯರ್– ಸಾಮಾನ್ಯ ಮಹಿಳೆ, **ಬೆಳಗಾವಿ:** ಮೇಯರ್– ಸಾಮಾನ್ಯ, ಉಪಮೇಯರ್– ಎಸ್‌ಸಿ ಮಹಿಳೆ, **ದಾವಣಗೆರೆ:** ಮೇಯರ್– ಸಾಮಾನ್ಯ ಮಹಿಳೆ, ಉಪಮೇಯರ್ ಹಿಂ. ವರ್ಗ(ಅ) ಮಹಿಳೆ, **ಹುಬ್ಬಳ್ಳಿ-ಧಾರವಾಡ:** ಮೇಯರ್–ಸಾಮಾನ್ಯ ಮಹಿಳೆ, ಉಪಮೇಯರ್– ಸಾಮಾನ್ಯ, **ಕಲಬುರಗಿ:** ಮೇಯರ್–ಎಸ್‌ಸಿ, ಉಪಮೇಯರ್–ಸಾಮಾನ್ಯ, **ಮಂಗಳೂರು:** ಮೇಯರ್–ಸಾಮಾನ್ಯ, ಉಪಮೇಯರ್– ಸಾಮಾನ್ಯ ಮಹಿಳೆ, **ಮೈಸೂರು:** ಮೇಯರ್– ಸಾಮಾನ್ಯ, ಉಪಮೇಯರ್–ಹಿಂ. ವರ್ಗ(ಅ) ಮಹಿಳೆ, **ಶಿವಮೊಗ್ಗ:** ಮೇಯರ್– ಹಿಂ. ವರ್ಗ(ಅ), ಉಪಮೇಯರ್– ಸಾಮಾನ್ಯ ಮಹಿಳೆ, **ತುಮಕೂರು:** ಮೇಯರ್– ಎಸ್‌ಸಿ (ಮಹಿಳೆ), ಉಪಮೇಯರ್–ಹಿಂ. ವರ್ಗ(ಅ), **ವಿಜಯಪುರ:** ಮೇಯರ್–ಎಸ್‌ಟಿ, ಉಪಮೇಯರ್– ಹಿಂ. ವರ್ಗ (ಬ).

ಸಹಕಾರ ಮಾರಾಟ ಮಹಾಮಂಡಳ ಚುನಾವಣೆ ಸೆ.11ಕ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಚುನಾವಣೆ ವೇಳಾಪಟ್ಟಿ ಪ್ರಕಟಿಸಲಾಗಿದೆ.

ಒಟ್ಟು 20 ನಿರ್ದೇಶಕರ ಹುದ್ದೆಗಳ ಆಯ್ಕೆಗೆ ಚುನಾವಣೆ ನಡೆಯಲಿದ್ದು, ಸೆ.11ರಂದು ಮತದಾನ ನಡೆಯಲಿದೆ.

ಬೆಂಗಳೂರು, ಮೈಸೂರು, ಬೆಳಗಾವಿ ವಿಭಾಗಗಳಲ್ಲಿ ತಲಾ ಐದು ಹಾಗೂ ಕಲಬುರ್ಗಿ ವಿಭಾಗದ ನಾಲ್ಕು ಮತ್ತು 'ಬಿ' ವರ್ಗದ ಸದಸ್ಯ ಮತ ಕ್ಷೇತ್ರದ ಒಂದು ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಇದೇ 29ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದ್ದು, ಸೆ.3 ಕೊನೆಯ ದಿನ. ಸೆ.4ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ವಾಪಸ್ ಪಡೆಯಲು ಸೆ.5 ಕೊನೆಯ ದಿನವಾಗಿದೆ.

ಮಾಹಿತಿ: www.kscmfltd.com

ಚಾಮರಾಜನಗರ ಎಸ್‌ಪಿಗೆ ವಿಚಾರಣೆ ಹೊಣೆ

ಮಡಿಕೇರಿ: 'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕೋಳಿಮೊಟ್ಟೆ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಚಾಮರಾಜನಗರ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್ ಅವರನ್ನು ನೇಮಕ ಮಾಡಲಾಗಿದೆ.

ನಿಧನ ವಾರ್ತೆ

ಜ್ಯೋತ್ಸ್ನಾ ಕಾಮತ್



ಬೆಂಗಳೂರು: ಸಂಶೋಧಕಿ ಹಾಗೂ ಲೇಖಕಿ ಜ್ಯೋತ್ಸ್ನಾ ಕಾಮತ್ (86) ಅವರು ಇಲ್ಲಿನ ಮಲ್ಲೇಶ್ವರದ ನಿವಾಸದಲ್ಲಿ ಮಧ್ಯಾಹ್ನ ಬುಧವಾರ 3 ಗಂಟೆಗೆ ನಿಧನರಾಗಿದ್ದಾರೆ.

ಅವರು ಕ್ಯಾನ್ಸರ್ ಪೀಡಿತರಾಗಿದ್ದರು. ಅವರಿಗೆ ಮಗ ವಿಕಾಸ್ ಕಾಮತ್, ಸೊಸೆ ಕಿಮ್ ಕಾಮತ್ ಹಾಗೂ ಮೊಮ್ಮಗಳು ಮೀನಾ ಕಾಮತ್ ಇದ್ದಾರೆ. ಗುರುವಾರ ಬೆಳಿಗ್ಗೆ 10 ಗಂಟೆಗೆ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ.

ಜ್ಯೋತ್ಸ್ನಾ ಅವರು ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಜನಿಸಿದ್ದರು. ಬಿ.ಎ. ಪದವಿ ಬಳಿಕ ಅವರು, ಧಾರವಾಡದ ವನಿತಾ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿ ವೃತ್ತಿ ಆರಂಭಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇತಿಹಾಸ ವಿಷಯದಲ್ಲಿ ಎಂ.ಎ. ಪದವಿ ಪಡೆದಿದ್ದರು.

1964ರಲ್ಲಿ ಧಾರವಾಡ ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕಿಯಾಗಿ ಸೇರಿದರು. ವಿವಿಧೆಡೆ ಸೇವೆ ಸಲ್ಲಿಸಿ, ಕೊನೆಗೆ ಬೆಂಗಳೂರು ಆಕಾಶವಾಣಿಯಲ್ಲಿ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸಿ, 1994ರಲ್ಲಿ ನಿವೃತ್ತಿ ಹೊಂದಿದರು. ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಶೇಷ ಪುರಸ್ಕಾರ, 'ಕಿಟ್ಟೆಲ್ ಪುರಸ್ಕಾರ' ಸೇರಿ ಹಲವು ಪ್ರಶಸ್ತಿಗಳು ಇವರಿಗೆ ಸಂದಿವೆ.

ದಕ್ಷಿಣ ಕನ್ನಡ ಸಂಸದ ಕಟೀಲ್ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ

ಮೋದಿ ಸ್ವಾಗತ ತಯಾರಿ; ನಳಿನ್ ವಿರುದ್ಧ ಅಭಿಯಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 2ರಂದು ಮಂಗಳೂರಿಗೆ ಭೇಟಿ ನೀಡಲಿದ್ದು, ಅದ್ದೂರಿ ಸ್ವಾಗತಕ್ಕೆ ಬಿಜೆಪಿ ಭರದ ಸಿದ್ಧತೆ ನಡೆಸಿದೆ. ಇನ್ನೊಂದೆಡೆ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಇನ್ನೊಂದು ಅವಧಿಗೆ ಸಂಸದರಾಗಿ ಮುಂದುವರಿಯುವ ಅವಕಾಶ ಕಲ್ಪಿಸಬಾರದು ಎಂದು ಸಾಮಾಜಿಕ ಜಾಲತಾಣಗಳಲ್ಲಿ 'ಹಿಂದುತ್ವ' ಕಾರ್ಯಕರ್ತರು ಅಭಿಯಾನ ನಡೆಸುತ್ತಿದ್ದಾರೆ.

'ನಾವು ಮಂಗಳೂರಿಗರು, ದೇಶದಲ್ಲೇ ಹಿಂದುತ್ವದ ಭದ್ರಕೋಟೆಯಾಗಿ ಕರಾವಳಿಯನ್ನು ಕಟ್ಟಿಕೊಂಡವರು. ನಮಗೆ ಹಿಂದುತ್ವದ ಜೊತೆಗೆ ಮಂಗಳೂರಿನ ಅಭಿವೃದ್ಧಿಯ ದೃಷ್ಟಿಕೋನ ಹೊಂದಿರುವ ನಾಯಕನ ಅಗತ್ಯವಿದೆ. ಸೆ. 2ರಂದು ಮೋದಿಜಿಯನ್ನು ಅದ್ದೂರಿಯಾಗಿ ಸ್ವಾಗತಿಸುವ ಮೊದಲು ನಮ್ಮ ಜಿಲ್ಲೆಯ ಸಂಸದರ ಬದಲಾವಣೆಯ ಕೂಗು ಕೇಳಿ ಬರಲಿ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿರುವ 'ಪೋಸ್ಟ್ ಕಾರ್ಡ್' ಸಂದೇಶವೊಂದನ್ನು ಹರಿಯಬಿಟ್ಟಿದೆ. ಈ ಸಂದೇಶವನ್ನು 'ವಾಟ್ಸ್‌ಆ್ಯಪ್ ಸ್ಟೇಟಸ್' ಆಗಿ ಹಾಕಿಕೊಂಡು ಅನೇಕರು ಬೆಂಬಲ ಸೂಚಿಸಿದ್ದಾರೆ.



ನಳಿನ್

ಮಂಗಳೂರು–ಹಾಸನ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಚತುಷ್ಪಥ ಕಾಮಗಾರಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಂಟುತ್ತಾ ಸಾಗಿದೆ. ಕಾಮಗಾರಿ ನಡೆಯುವಲ್ಲಿ ಹೆದ್ದಾರಿ ಕಂಬಳದ ಗದ್ದೆಯಂತಾಗಿದ್ದು, ವಾಹನ ಸವಾರರು ಹೈರಾಣಾಗಿದ್ದಾರೆ. ಸುರತ್ಕಲ್ ಟೋಲ್ ಪ್ಲಾಜಾ ರದ್ದತಿ ಭರವಸೆ ಇನ್ನೂ ಈಡೇರಿಲ್ಲ. ಜಿಲ್ಲೆಯಲ್ಲಿ ಟೋಲ್ ನೀಡಿ ಬಳಸುವ ಹೆದ್ದಾರಿಗಳೆಲ್ಲವೂ ಹೊಂಡಮಯವಾಗಿವೆ. ಇವೆಲ್ಲವೂ ಜಿಲ್ಲೆಯ ಕಟ್ಟರ್ ಹಿಂದುತ್ವವಾದಿಗಳ ಕೆಂಗಣ್ಣಿಗೂ ಗುರಿಯಾಗಿವೆ.

ಹತ್ಯೆಗೊಳಗಾದ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಯುವ ಮೋರ್ಚಾ ಕಾರ್ಯಕಾರಿ ಸಮಿತಿ ಸದಸ್ಯ ಪ್ರವೀಣ್ ನೆಟ್ಟಾರು ಅಂತಿಮ ಯಾತ್ರೆ ವೇಳೆ ಪಕ್ಷದ ಕಾರ್ಯಕರ್ತರು ನಳಿನ್ ಕಾರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದ್ದರು. ಪ್ರವೀಣ್ ಮನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿ ವೇಳೆಯೂ ಘೋಷಣೆ ಕೂಗಿದ್ದರು. ಈ ಬೆಳವಣಿಗೆಯಿಂದ ವಿಚಲಿತಗೊಂಡ ಬಿಜೆಪಿ ಮುಖಂಡರು, ಕೇರಳದ ಕೊಚ್ಚಿಗೆ ಸೆ. 2ರಂದು ಆಗಮಿಸಲಿರುವ ಪ್ರಧಾನಿಯನ್ನು ಮಂಗಳೂರಿಗೆ ಕರೆಸಿ ಕಾರ್ಯಕರ್ತರ ಆಕ್ರೋಶ ತಣಿಸುವ ಪ್ರಯತ್ನಕ್ಕೆ ಕೈಹಾಕಿದ್ದರು.

'ಪಕ್ಷದ ಕಾರ್ಯಕರ್ತರಲ್ಲಿ ಅಂತಹ ಭಾವನೆ ಇಲ್ಲ. ಪ್ರಧಾನಿ ಕಾರ್ಯಕ್ರಮದ ಯಶಸ್ವಿಗಾಗಿ ಜಿಲ್ಲೆಯ ಎಂಟೂ ವಿಧಾನಸಭಾ ಕ್ಷೇತ್ರಗಳಲ್ಲೂ ಪಕ್ಷದ ವತಿಯಿಂದ ಸಭೆ ನಡೆಸಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ' ಎಂದು ಬಿಜೆಪಿಯ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಸುದರ್ಶನ್ ಎಂ. ತಿಳಿಸಿದರು.

ಕಾರ್ಯಕಾರಿಣಿ ಬಳಿಕ ಬಿಜೆಪಿಗೆ ಹೊಸ ಅಧ್ಯಕ್ಷ ?

ಬೆಂಗಳೂರು: ಸೆಪ್ಟೆಂಬರ್‌ನಲ್ಲಿ ನಡೆಯುವ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯ ಬಳಿಕ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಬಹುತೇಕ ಖಚಿತವಾಗಿದೆ.

ರಾಜ್ಯ ಬಿಜೆಪಿಯನ್ನು ಸಮರ್ಥವಾಗಿ ಮುನ್ನಡೆಸಬಹುದಾದ ಕೆಲವು ಹೆಸರುಗಳು ವರಿಷ್ಠರ ಪರಿಶೀಲನೆಯಲ್ಲಿವೆ. ಮುಖ್ಯವಾಗಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅಥವಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರಲ್ಲಿ ಒಬ್ಬರು ಅಧ್ಯಕ್ಷರಾಗುವುದು ಖಚಿತ ಎಂದು ಪಕ್ಷದ ಮೂಲಗಳು ಹೇಳಿವೆ.

ಈ ಮಧ್ಯೆ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಬದಲಿಸಬೇಕು ಎಂಬ ಒತ್ತಾಯ ಸಾಮಾಜಿಕ ಜಾಲತಾಣದಲ್ಲಿಯೂ ಕೇಳಿ ಬಂದಿದೆ. ಇತ್ತೀಚೆಗೆ ಸುಳ್ಯ ತಾಲ್ಲೂಕು ಬೆಳ್ಳಾರೆಯಲ್ಲಿ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಯ ಸಂದರ್ಭದಲ್ಲಿ ನಳಿನ್ ಕುಮಾರ್ ಕಟೀಲ್ ಸ್ಥಳಕ್ಕೆ ಭೇಟಿ ನೀಡಿದಾಗ ಬಿಜೆಪಿ ಮತ್ತು ಸಂಘ ಪರಿವಾರದ ಕಾರ್ಯಕರ್ತರು ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದ್ದರು. ಆ ಆಕ್ರೋಶ ಇನ್ನೂ ತಣಿದಿಲ್ಲ ಎಂದು ಮೂಲಗಳು ಹೇಳಿವೆ.

ಚುನಾವಣಾ ವರ್ಷ ಆಗಿರುವುದರಿಂದ ಪಕ್ಷವನ್ನು ಸಮರ್ಥವಾಗಿ ಮುನ್ನಡೆಸಲು ಅಧ್ಯಕ್ಷರ ಬದಲಾವಣೆ ಅತ್ಯಗತ್ಯ. ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ವಿವಿಧ ಸಮಾವೇಶಗಳ ಮೂಲಕ ಜನರನ್ನು ಆಕರ್ಷಿಸುವಲ್ಲಿ ಬಿಜೆಪಿಗಿಂತ ಸಾಕಷ್ಟು ಮುಂದಕ್ಕೆ ಸಾಗಿದೆ. ಪಕ್ಷದ ಈಗಿನ ಸ್ಥಿತಿಯಲ್ಲೇ ಚುನಾವಣೆಯಲ್ಲಿ ಎದುರಿಸುವುದು ಕಷ್ಟವಾಗಬಹುದು. ಅಧ್ಯಕ್ಷರು ಮಾತ್ರವಲ್ಲದೆ ಸಂಘಟನೆಯೂ ಆಮೂಲಾಗ್ರವಾಗಿ ಬದಲಾಗಬೇಕು ಎಂಬ ಅಭಿಪ್ರಾಯವನ್ನೂ ಕಾರ್ಯಕರ್ತರು ವ್ಯಕ್ತಪಡಿಸುತ್ತಿದ್ದಾರೆ.

ಈ ಕುರಿತು ತುಮಕೂರಿನಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಅಬಕಾರಿ ಸಚಿವ ಕೆ.ಗೋಪಾಲಯ್ಯ, 'ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಪಕ್ಷದ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಬದಲಾವಣೆ ಪಕ್ಷದ ಆಂತರಿಕ ವಿಚಾರ. ಮೂರು ವರ್ಷ ಆದ ಮೇಲೆ ಬೇರೆಯವರಿಗೆ ಅವಕಾಶ ಕೊಡುವುದು ಪಕ್ಷದ ನಿಯಮ. 'ಇದರ ಬಗ್ಗೆ ತೀರ್ಮಾನ ಕೈಗೊಳ್ಳಲು ವರಿಷ್ಠರು ಇದ್ದಾರೆ. ವರಿಷ್ಠರು ಯಾವ ತೀರ್ಮಾನ ತಗೆದುಕೊಳ್ಳುತ್ತಾರೋ ಅದಕ್ಕೆ ನಾವೆಲ್ಲರೂ ಬದ್ಧರಾಗಿರುತ್ತೇವೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.74	12,021	4,042
ಹಾರಂಗಿ	2,859	2,857.43	3,670	3,670
ಕಬಿನಿ	2284	2,283.45	8,000	3,000
ಹೇಮಾವತಿ	2,922	2,921.75	8,428	10,825
ಲಿಂಗನಮಕ್ಕಿ	1,819	1,813	18,781	4,694
ಸೂಪಾ (ಮೀ)	564	549.50	7,802	183
ಮಾಣಿ	595	588	2,163	-
ತುಂಗಭದ್ರಾ	1,633	1,632.84	18,921	29,202
ಮಲಪ್ರಭಾ	2079.5	2,078.10	2,291	694
ಘಟಪ್ರಭಾ	2175	2,175	6,447	4,997
ಭದ್ರಾ	186	185	9,380	2,233
ಆಲಮಟ್ಟಿ (ಮೀ)	519.6	519.60	60,867	57,500
ನಾರಾಯಣಪುರ (ಮೀ)	492.25	491.90	55,000	53,614

* ನೆಲಮಟ್ಟದಿಂದ

778 ಪಿಯು ಉಪನ್ಯಾಸಕರ ಹುದ್ದೆ ಭರ್ತಿಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ 778 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ.

10 ವಿವಿಧ ವಿಷಯಗಳಲ್ಲಿ ಹುದ್ದೆಗಳು ಖಾಲಿ ಇವೆ. ಕನ್ನಡ ವಿಷಯದಲ್ಲಿ 100, ಇತಿಹಾಸ, ಇಂಗ್ಲಿಷ್ ತಲಾ 120, ಅರ್ಥಶಾಸ್ತ್ರ 180, ಭೂಗೋಳ ಶಾಸ್ತ್ರ 20, ವಾಣಿಜ್ಯ ಶಾಸ್ತ್ರ 80, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ ತಲಾ 75, ಮನಃಶಾಸ್ತ್ರ 2 ಹಾಗೂ ಗಣಕ ವಿಜ್ಞಾನದಲ್ಲಿ 6 ಹುದ್ದೆಗಳು ಖಾಲಿ ಇವೆ.

ಬೇಗ್– ಮೊಗೆದಷ್ಟು ಭೂ ಅಕ್ರಮ

ಒಂದನೇ ಪುಟದಿಂದ...

ಕೆಐಎಡಿಬಿ ಲೋಪ: ಎಂ.ಎಸ್. ನಾರ್ತ್ ಮೀಡಿಯಾ ಇನ್ಫೊಟೆಕ್ ಸಂಸ್ಥೆಗೆ ಕೆಐಎಡಿಬಿ ಬೆಂಗಳೂರಿನ ಜಾಲ ಹೋಬಳಿಯ ಅರೆ ಬಿನ್ನಮಂಗಲ ಗ್ರಾಮದ ಸರ್ವೆ ಸಂಖ್ಯೆ 1ರಲ್ಲಿ 2 ಎಕರೆ ಹಂಚಿಕೆ ಮಾಡಿತ್ತು. ಆದರೆ, ಸಂಸ್ಥೆಯು ಕಟ್ಟಡ ನಕ್ಷೆ ಅನುಮೋದನೆ ಪಡೆದಿರಲಿಲ್ಲ.

ಜತೆಗೆ, ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿ 2 ಎಕರೆ ಮಂಜೂರು ಮಾಡಲಾಗಿತ್ತು. 2018ರಿಂದ 2021ರ ಅವಧಿಯಲ್ಲಿ ಕೈಗಾರಿಕೆ ಆರಂಭಿಸದೆ ಷರತ್ತು ಉಲ್ಲಂಘಿಸಲಾಗಿದೆ. ಆದರೆ, ಈ ಕಂಪನಿಯ ವಿರುದ್ಧ ಕೆಐಎಡಿಬಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದೂ ಅವರು ಬೊಟ್ಟು ಮಾಡಿದ್ದಾರೆ.

ಪ್ರತಿಕ್ರಿಯೆಗೆ ರೋಷನ್ ಬೇಗ್ ಲಭ್ಯರಾಗಲಿಲ್ಲ.

ಕಡಿಮೆ ಬೆಲೆಗೆ ₹30 ಕೋಟಿ ಜಾಗ ಹಂಚಿಕೆ!

ಬೇಗ್ ಮಾಲಿಕತ್ವದ ಡ್ಯಾನಿಷ್ ಪಬ್ಲಿಕೇಷನ್ ಸಂಸ್ಥೆಗೆ ಬೆಂಗಳೂರಿನಲ್ಲಿ ₹30 ಕೋಟಿ ಬೆಲೆ ಬಾಳುವ ಜಾಗವನ್ನು ₹1.68 ಕೋಟಿಗೆ ಹಂಚಿಕೆ ಮಾಡಲಾಗಿದೆ. ಈ ಮೂಲಕ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಲಾಗಿದೆ.

ತಿಮ್ಮಯ್ಯ ರಸ್ತೆಯಲ್ಲಿರುವ 20 ಸಾವಿರ ಚದರ ಅಡಿ ಜಾಗವನ್ನು ಮಂಜೂರು ಮಾಡುವಂತೆ ಡ್ಯಾನಿಷ್ ಸಂಸ್ಥೆಯು 2005ರ ಜುಲೈ 20ರಂದು ಮನವಿ ಸಲ್ಲಿಸಿತ್ತು. ಕರ್ನಾಟಕದ ಮುಖ್ಯಮಂತ್ರಿ ಅವರಿಗೂ ಆಗಸ್ಟ್ 2ರಂದು ಮನವಿ ನೀಡಿತ್ತು. ಈ ಜಾಗ ಮಂಜೂರು ಮಾಡುವಂತೆ ಮುಖ್ಯಮಂತ್ರಿಯಾಗಿದ್ದ ಎನ್.ಧರ್ಮಸಿಂಗ್ ಅವರು ಪಾಲಿಕೆಗೆ 2005ರ ಸೆಪ್ಟೆಂಬರ್ 27ರಂದು ನಿರ್ದೇಶನ ನೀಡಿದ್ದರು.

ಆಗಿನ ಮಾರುಕಟ್ಟೆ ಮೌಲ್ಯದ ಶೇ 50ರಷ್ಟು ದರ ವಿಧಿಸಿ 10 ಸಾವಿರ ಚದರ ಅಡಿ ಜಾಗವನ್ನು ಹಂಚಿಕೆ ಮಾಡಬಹುದು ಎಂದು ಬಿಬಿಎಂಪಿಯು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಬಳಿಕ, ಸಚಿವ ಸಂಪುಟವು ಮಾರುಕಟ್ಟೆ ಮೌಲ್ಯದ ಶೇ 20ರ ದರದಲ್ಲಿ ಈ ಜಾಗವನ್ನು ಹಂಚಿಕೆ ಮಾಡಲು ಒಪ್ಪಿಗೆ ನೀಡಿತ್ತು. ಸಂಸ್ಥೆಯು ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡಲು ಮುಂದಾಗಿರುವುದರಿಂದ ಹಂಚಿಕೆ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಪಾಲಿಕೆಯು ಸರ್ಕಾರವನ್ನು ಕೋರಿತ್ತು. ಆದರೆ, 2007ರ ಫೆಬ್ರುವರಿ 22ರಂದು ಸಂಸ್ಥೆಗೆ ₹1.68 ಕೋಟಿಗೆ ಕ್ರಯಪತ್ರ ಮಾಡಿಕೊಡಲಾಗಿತ್ತು.

1 ಎಕರೆಯಿಂದಲೇ ₹11.95 ಕೋಟಿ ಬಾಡಿಗೆ

ಬೆಂಗಳೂರಿನ ಬೇಗೂರು ಹೋಬಳಿಯ ಕೋನಪ್ಪನ ಅಗ್ರಹಾರ ಗ್ರಾಮದ ಪ್ಲಾಟ್ ನಂ. 105ರಲ್ಲಿ ರೋಷನ್ ಬೇಗ್ ಮಾಲೀಕತ್ವದ ಸುಬಿ ಎಲೆಕ್ಟ್ರಾನಿಕ್ಸ್ ಸಂಸ್ಥೆಗೆ ಕಿಯೋನಿಕ್ಸ್ ಸಂಸ್ಥೆಯು 1 ಎಕರೆ 097 ಗುಂಟೆ ಜಾಗವನ್ನು (4,464 ಮೀಟರ್) 2006ರ ಫೆಬ್ರುವರಿ 19ರಂದು ಗುತ್ತಿಗೆ ಕಂ ಮಾರಾಟ ಕರಾರು ಮಾಡಿತ್ತು. ಸುಬಿ ಎಲೆಕ್ಟ್ರಾನಿಕ್ ಪ್ರೆಸ್ಟಿಜ್ ಎಸ್ಟೇಟ್ಸ್ ಪ್ರಾಜೆಕ್ಟ್ ಜತೆಗೆ ಜಂಟಿ ಅಭಿವೃದ್ಧಿ ಒಪ್ಪಂದ ಮಾಡಿಕೊಂಡು ಈ ಜಾಗವನ್ನು ಅಭಿವೃದ್ಧಿಪಡಿಸಿದೆ. ಈ ಜಾಗದ ಬಾಡಿಗೆಯಿಂದಲೇ 2011–12ರಿಂದ 2020–21ರ ನಡುವಿನ 10 ವರ್ಷಗಳ ಅವಧಿಯಲ್ಲಿ ₹11.95 ಕೋಟಿ ಪಡೆದಿರುವುದು ಇ.ಡಿ. ತನಿಖೆ ವೇಳೆ ಪತ್ತೆಯಾಗಿದೆ.

ಈ ಜಾಗ ಹಂಚಿಕೆ ಮಾಡುವಂತೆ ಸುಬಿ ಸಂಸ್ಥೆಯು 1994ರಲ್ಲಿ ಕಿಯೋನಿಕ್ಸ್‌ಗೆ ಮನವಿ ಸಲ್ಲಿಸಿತ್ತು. 1 ಎಕರೆ 097ಗುಂಟೆ ಜಾಗವನ್ನು 1994ರ ಸೆಪ್ಟೆಂಬರ್‌ನಲ್ಲಿ ಕಿಯೋನಿಕ್ಸ್ ಹಂಚಿಕೆ ಮಾಡಿತ್ತು. ಹಣ ಪಾವತಿಸದ ಕಾರಣಕ್ಕೆ 1997ರ ಏಪ್ರಿಲ್‌ನಲ್ಲಿ ಹಂಚಿಕೆಯನ್ನು ರದ್ದು ಮಾಡಲಾಗಿತ್ತು.

ಶೇ 18ರ ಬಡ್ಡಿ ಜತೆಗೆ ಎಕರೆಗೆ ₹14 ಲಕ್ಷ ಪಾವತಿಸುವ ಷರತ್ತಿನೊಂದಿಗೆ 1998ರ ಜನವರಿಯಲ್ಲಿ ಜಾಗವನ್ನು ಎರಡನೇ ಬಾರಿ ಹಂಚಿಕೆ ಮಾಡಲಾಗಿತ್ತು. ಷರತ್ತು ಪಾಲಿಸದ ಕಾರಣಕ್ಕೆ 2003ರಲ್ಲಿ ಹಂಚಿಕೆಯನ್ನು ರದ್ದುಪಡಿಸಲಾಗಿತ್ತು. ಆ ಬಳಿಕ ಯಾವುದೇ ಪ್ರಕ್ರಿಯೆ ನಡೆಸದೆ ಕಿಯೋನಿಕ್ಸ್ ಸಂಸ್ಥೆಯು 2006ರಲ್ಲಿ ಮೂರನೇ ಸಲ ಹಂಚಿಕೆ ಮಾಡಿತ್ತು. ನಿಯಮಬಾಹಿರವಾಗಿ 2010ರಲ್ಲಿ ಕ್ರಯಪತ್ರ ಮಾಡಿಕೊಡಲಾಗಿತ್ತು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಸಾಬೂನುಗಳ ಮೇಲೆ ಕನ್ನಡ ಕಡೆಗಣನೆ: ಆಕ್ಷೇಪ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು ಉತ್ಪನ್ನಗಳ ಮೇಲೆ ಮಾಹಿತಿ ಹಾಕುವಾಗ ಕನ್ನಡ ಕಡೆಗಣಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಮುಂಬರುವ ನ.1ರೊಳಗೆ ಎಲ್ಲ ಉತ್ಪನ್ನಗಳ ಮೇಲೆ ಕನ್ನಡವನ್ನು ಪ್ರಧಾನವಾಗಿ ಬಳಸಬೇಕು ಎಂದು ಸೂಚಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ ಅವರನ್ನು ಭೇಟಿ ಮಾಡಿ, ಕನ್ನಡ ಅನುಷ್ಠಾನದ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದಾರೆ.

ಮೃತ ರಾಜೇಶ್ವರಿ ತೇಜಸ್ವಿಗೆ ಸ್ಥಾನ

ಸಾಂಸ್ಕೃತಿಕ ಟ್ರಸ್ಟ್‌ಗಳಿಗೆ ಅಧ್ಯಕ್ಷರು, ಸದಸ್ಯರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಟ್ರಸ್ಟ್, ಪ್ರತಿಷ್ಠಾನಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಕಳೆದ ವರ್ಷ ಮೃತಪಟ್ಟಿರುವ ರಾಜೇಶ್ವರಿ ಪೂರ್ಣಚಂದ್ರ ತೇಜಸ್ವಿ ಅವರನ್ನು ಚಿಕ್ಕಮಗಳೂರಿನ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದ ಸದಸ್ಯರನ್ನಾಗಿ ನೇಮಿಸಲಾಗಿದೆ.

ಹಾವೇರಿಯ ಗಳಗನಾಥ ಹಾಗೂ ನಾ.ಶ್ರೀ. ರಾಜಪುರೋಹಿತ ಟ್ರಸ್ಟ್‌ಗೆ ಚಕ್ರವರ್ತಿ ಸೂಲಿಬೆಲೆ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಆದರೆ, 'ಗಳಗನಾಥರ ಕುರಿತಂತೆ ಅಪಾರ ಗೌರವ ಹೊಂದಿರುವ ನನ್ನನ್ನು ಪ್ರತಿಷ್ಠಾನಕ್ಕೆ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದು ಅಚ್ಚರಿ ಮತ್ತು ಸಂತಸವೂ ಆಯ್ತು. ಅದಕ್ಕೆ ಸಮಯಕೊಡುವಷ್ಟು ಪುರಸೊತ್ತಿಲ್ಲದಿರುವುದರಿಂದ ಅತ್ಯಂತ ವಿನೀತನಾಗಿ ಗೌರವವನ್ನು ಮರಳಿಸುತ್ತಿದ್ದೇನೆ' ಎಂದು ಸೂಲಿಬೆಲೆ ತಮ್ಮ ಫೇಸ್‌ಬುಕ್ ಪುಟದಲ್ಲಿ ಬರೆದುಕೊಂಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದ್ದ 24 ಟ್ರಸ್ಟ್, ಪ್ರತಿಷ್ಠಾನಗಳ ಕಾರ್ಯವೈಖರಿಯ ಬಗ್ಗೆ 'ಪ್ರಜಾವಾಣಿ' ಇದೇ 14 ರಂದು 'ನಾಮಬಲವೇ ಆಸ್ತಿ: ಕಾಯಕ ನಾಸ್ತಿ' ಶೀರ್ಷಿಕೆ ಅಡಿ 'ಒಳನೋಟ' ಪ್ರಕಟಿಸಿತ್ತು. ಈಗ ಸರ್ಕಾರವು 21 ಟ್ರಸ್ಟ್, ಪ್ರತಿಷ್ಠಾನಗಳಿಗೆ ಹೊಸದಾಗಿ ಕಾರ್ಯಕಾರಿ ಸಮಿತಿ ರಚಿಸಿ, ಆದೇಶ ಹೊರಡಿಸಿದೆ. ಬಹುತೇಕ ಟ್ರಸ್ಟ್‌ಗಳಿಗೆ ಇದೇ ಮೊದಲ ಬಾರಿಗೆ ಪದಾಧಿಕಾರಿಗಳನ್ನು ಬದಲಾಯಿಸಲಾಗಿದೆ. ಶಿವಮೊಗ್ಗದ ರಾಷ್ಟ್ರ ಕವಿ ಕುವೆಂಪು ಪ್ರತಿಷ್ಠಾನ ಸೇರಿ ಮೂರು ಕೇಂದ್ರಗಳಿಗೆ ಪದಾಧಿಕಾರಿಗಳನ್ನು ಬದಲಾಯಿಸಿಲ್ಲ.

ಈ ನೇಮಕಾತಿ ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರಲಿದೆ ಎಂದು ಸರ್ಕಾರ ಹೇಳಿದೆ.

ಹೆಚ್ಚಿನ ಮಾಹಿತಿಗೆ ಲಿಂಕ್ ನೋಡಿ https://bit.ly/3Ti1bLg

ಟ್ರಸ್ಟ್‌ಗಳ ನೇಮಕಾತಿ ಇಂತಿವೆ

- ಧಾರವಾಡದ ದ.ರಾ.ಬೇಂದ್ರೆ (ಅಂಬಿಕಾತನಯದತ್ತ) ರಾಷ್ಟ್ರೀಯ ಸ್ಮಾರಕ ಟ್ರಸ್ಟ್: ಅಧ್ಯಕ್ಷ: ಮನೋಜ ಪಾಟೀಲ.
- ಬೆಂಗಳೂರಿನ ಡಾ.ಪು.ತಿ.ನ. ಟ್ರಸ್ಟ್: ಅಧ್ಯಕ್ಷ: ಎಚ್.ಎಸ್. ವೆಂಕಟೇಶಮೂರ್ತಿ.
- ಧಾರವಾಡದ ಮಲ್ಲಿಕಾರ್ಜುನ ಮನ್ಸೂರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್: ಅಧ್ಯಕ್ಷ: ನಾಗರಾಜ ಹವಾಲದಾರ.
- ಕೋಲಾರದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್: ಅಧ್ಯಕ್ಷೆ: ವತ್ಸಲಾ ಮೋಹನ್.
- ಉಡುಪಿಯ ಡಾ.ಕೆ. ಶಿವರಾಮ ಕಾರಂತ ಪ್ರತಿಷ್ಠಾನ: ಅಧ್ಯಕ್ಷ: ಆನಂದ ಸಿ. ಕುಂದರ್.
- ಹಾವೇರಿಯ ಡಾ.ವಿ.ಕೃ. ಗೋಕಾಕ್ ಪ್ರತಿಷ್ಠಾನ: ಅಧ್ಯಕ್ಷ: ಅನಿಲ್ ಗೋಕಾಕ್.
- ಧಾರವಾಡದ ಸ್ವರ ಸಾಮ್ರಾಟ್ ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್: ಅಧ್ಯಕ್ಷ: ಶ್ರೀಪಾದ ಹೆಗಡೆ.
- ಧಾರವಾಡದ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾವ್ ರಾಷ್ಟ್ರೀಯ ಸ್ಮಾರಕ ಟ್ರಸ್ಟ್: ಅಧ್ಯಕ್ಷ: ಶ್ರೀನಿವಾಸ ಪಾಡಿಗಾರ.
- ಬೆಳಗಾವಿಯ ಬೆಟಗೇರಿ ಕೃಷ್ಣಶರ್ಮ ರಾಷ್ಟ್ರೀಯ ಸ್ಮಾರಕ ಟ್ರಸ್ಟ್: ಅಧ್ಯಕ್ಷೆ: ಕವಿತಾ ಕುಸಗಲ್.
- ಹಾವೇರಿಯ ಹುತಾತ್ಮ ಮೈಲಾರ ಮಹಾದೇವಪ್ಪನವರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್: ಅಧ್ಯಕ್ಷ: ಸುಧೀರ್ ಸಿಂಹ ಘೋರ್ಪಡೆ.
- ಬೆಳಗಾವಿಯ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ: ಅಧ್ಯಕ್ಷ: ಗುರುಪಾದ ಮರಿಗುದ್ದಿ.
- ಧಾರವಾಡದ ಚಿತ್ರಕಲಾ ಶಿಲ್ಪಿ ಡಿ.ವಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್: ಅಧ್ಯಕ್ಷ: ಪಿ.ಎಸ್. ಕಡೆಮನಿ.
- ಕೋಲಾರದ ಡಾ.ಡಿ.ವಿ.ಜಿ. ಪ್ರತಿಷ್ಠಾನ: ಅಧ್ಯಕ್ಷ: ಎಸ್. ದಿವಾಕರ.
- ಬಾಗಲಕೋಟೆಯ ಪಿ.ಬಿ. ಧುತ್ತರಗಿ(ಸೂಳಿಬಾವಿ) ಪ್ರತಿಷ್ಠಾನ: ಅಧ್ಯಕ್ಷ: ಶಿವಪ್ಪ ಭರಮಪ್ಪ ಅದರಗುಂಚಿ.
- ಹಾವೇರಿಯ ಗಳಗನಾಥ ಮತ್ತು ನಾ.ಶ್ರೀ. ರಾಜಪುರೋಹಿತ ಪ್ರತಿಷ್ಠಾನ: ಅಧ್ಯಕ್ಷ: ಚಕ್ರವರ್ತಿ ಸೂಲಿಬೆಲೆ.
- ಮಂಡ್ಯದ ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್: ಅಧ್ಯಕ್ಷ: ಡಾ.ಬಿ.ವಿ. ರಾಜಾರಾಂ
- ಬೆಂಗಳೂರಿನ ಡಾ. ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನ: ಅಧ್ಯಕ್ಷ: ಡಾ. ಬಸವರಾಜ ಕಲ್ಗುಡಿ.
- ಚಿಕ್ಕಮಗಳೂರಿನ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ: ಅಧ್ಯಕ್ಷ: ನರೇಂದ್ರ ರೈ ದೇರ್ಲ
- ವಿಜಯಪುರದ ಹಲಸಂಗಿ ಗೆಳೆಯರ ಪ್ರತಿಷ್ಠಾನ. ಅಧ್ಯಕ್ಷೆ: ಸರಸ್ವತಿ ಚಿಮ್ಮಲಗಿ.
- ಬಾಗಲಕೋಟೆಯ ಕವಿ ಚಕ್ರವರ್ತಿ ರನ್ನ ಪ್ರತಿಷ್ಠಾನ: ಅಧ್ಯಕ್ಷ: ಡಾ. ನೀಲಗಿರಿ ತಳವಾರ್.
- ತುಮಕೂರಿನ ಡಾ.ಗುಬ್ಬಿ ವೀರಣ್ಣ ಟ್ರಸ್ಟ್: ಅಧ್ಯಕ್ಷ: ಡಾ.ಭೀಮಸೇನ್

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಒಳ್ಳೆಯದನ್ನು ಮಾಡಿದರೆ ಸಾಲದು, ಅದನ್ನು ಒಳ್ಳೆಯ ರೀತಿಯಿಂದ ಮಾಡಬೇಕು.

–ಚಾಣಕ್ಯ

ಗೊಂದಲಗಳಿಂದ ಹೊರಬರಲಿ ಕಾಂಗ್ರೆಸ್ ಆಂತರಿಕ ಪ್ರಜಾತಂತ್ರ ಗಟ್ಟಿಗೊಳಿಸಲಿ

ಕಾಂಗ್ರೆಸ್ ಪಕ್ಷವು ತನ್ನ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಹೊಸಬರನ್ನು ಆಯ್ಕೆ ಮಾಡಲು ಪ್ರಕ್ರಿಯೆಯನ್ನು ಶುರು ಮಾಡಿದೆ. ಆದರೆ, ಇಡೀ ಪ್ರಕ್ರಿಯೆಯ ವಿಚಾರವಾಗಿ ಪಕ್ಷದಲ್ಲಿ ಉತ್ಸಾಹದ ವಾತಾವರಣ ಇಲ್ಲ. ಪಕ್ಷದ ಪಾಲಿಗೆ ಬಹಳ ಮುಖ್ಯವಾದ ವಿದ್ಯಮಾನವೊಂದು ನಡೆಯುತ್ತಿದೆ ಎಂಬುದನ್ನು ತೋರಿಸುವ ರೀತಿಯ ಚಟುವಟಿಕೆಗಳು ಅಲ್ಲಿ ಕಾಣುತ್ತಿಲ್ಲ. ಯಾವುದೇ ಹಂತದ ಪದಾಧಿಕಾರಿಗಳ ನೇಮಕಕ್ಕೆ ಚುನಾವಣೆ ನಡೆಸುವುದು ಕಾಂಗ್ರೆಸ್ಸಿಗೆ ಈಚಿನ ವರ್ಷಗಳಲ್ಲಿ ಸಹಜ ವಿದ್ಯಮಾನ ಅಲ್ಲ. ಪಕ್ಷದ ಮುಂದಿನ ಅಧ್ಯಕ್ಷ ಯಾರಾಗಬಹುದು ಎಂಬ ವಿಚಾರದಲ್ಲಿ ಹಲವರಿಗೆ ಒಂದು ಸುಳಿವು ಸಿಕ್ಕಿರಬಹುದು ಹಾಗೂ ಅದು ಕೂಡ ಪಕ್ಷದೊಳಗೆ ತೀರಾ ಉತ್ಸಾಹದ ವಾತಾವರಣ ನಿರ್ಮಾಣವಾಗುವ ಅಗತ್ಯವನ್ನು ಇಲ್ಲವಾಗಿಸಿರಬಹುದು. ಪಕ್ಷದ ಎಲ್ಲ ಪದಾಧಿಕಾರಿಗಳನ್ನೂ ಚುನಾವಣೆಯ ಮೂಲಕ ಆಯ್ಕೆ ಮಾಡುವುದು ಸೂಕ್ತ. ಅದರಲ್ಲೂ ರಾಷ್ಟ್ರೀಯ ಅಧ್ಯಕ್ಷರ ಹುದ್ದೆಯು ಅತ್ಯಂತ ಮಹತ್ವದ್ದು. ಈಗ ಪಕ್ಷದ ಎಲ್ಲರ ಗಮನವು ನೆಹರೂ– ಗಾಂಧಿ ಕುಟುಂಬದ ಯಾರಾದರೂ ಒಬ್ಬರನ್ನು ಈ ಸ್ಥಾನ ಒಪ್ಪಿಕೊಳ್ಳುವಂತೆ ಮನವೊಲಿಸುವತ್ತ ಕೇಂದ್ರೀಕೃತ ಆಗಿರುವಂತಿದೆ. ಅಧ್ಯಕ್ಷ ಸ್ಥಾನವನ್ನು ತೊರೆದಿರುವ ರಾಹುಲ್ ಅವರು ಮತ್ತೆ ಅಧ್ಯಕ್ಷ ಯಾಕೆ ಆಗಬೇಕು, ರಾಹುಲ್ ಅವರು ಅಧ್ಯಕ್ಷ ಸ್ಥಾನ ತೊರೆದಾಗ ಇದ್ದುದಕ್ಕಿಂತ ಹೆಚ್ಚು ಸಂಕಷ್ಟದಲ್ಲಿ ಪಕ್ಷ ಈಗ ಇದೆ ಎಂಬ ವಿಚಾರವು ಪಕ್ಷದೊಳಗಿನ ಹೆಚ್ಚಿನವರಿಗೆ ಮಹತ್ವದ್ದೆನಿಸುತ್ತಿಲ್ಲ. ರಾಹುಲ್ ಅವರು ಅಧ್ಯಕ್ಷ ಸ್ಥಾನದಿಂದ ಇಳಿದ ನಂತರ ಕಾಂಗ್ರೆಸ್ ಪಕ್ಷವು ವಿಧಾನಸಭಾ ಚುನಾವಣೆಗಳಲ್ಲಿ ಸೋಲು ಕಂಡಿದೆ, ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಉರುಳಿವೆ. ಪಕ್ಷದ ನಾಯಕರು ಹಾಗೂ ಕಾರ್ಯಕರ್ತರ ಪೈಕಿ ಹಲವರು ಪಕ್ಷವನ್ನು ತೊರೆದು ಇತರ ಪಕ್ಷಗಳನ್ನು, ಅದರಲ್ಲೂ ಮುಖ್ಯವಾಗಿ ಬಿಜೆಪಿಯನ್ನು ಸೇರಿದ್ದಾರೆ.



ಭಾರತ್ ಜೋಡೊ ಯಾತ್ರೆ ಯಶಸ್ವಿಯಾಗಬೇಕಾದರೆ ಪಕ್ಷಕ್ಕೆ ಒಬ್ಬ ಗಟ್ಟಿ ನಾಯಕ, ಸಂಘಟನೆಯಲ್ಲಿ ಒಗ್ಗಟ್ಟು, ಹೊಸ ಚೈತನ್ಯ ಮತ್ತು ಹೊಸ ದಿಕ್ಕು ಅತ್ಯಗತ್ಯ

ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಲಾರೆ, ಅಧ್ಯಕ್ಷ ಸ್ಥಾನವನ್ನು ಮತ್ತೆ ಒಪ್ಪಲಾರೆ ಎಂದು ರಾಹುಲ್ ಅವರು ಮತ್ತೆ ಮತ್ತೆ ಸ್ಪಷ್ಟಪಡಿಸಿದ್ದಾರೆ. ಹೀಗಿದ್ದರೂ, ಅವರೇ ಅಧ್ಯಕ್ಷ ಆಗಬೇಕು ಎಂಬ ಆಗ್ರಹವು ಪಕ್ಷದ ಒಳಗಡೆ ವ್ಯಕ್ತವಾಗುತ್ತಲೇ ಇದೆ. ತಮ್ಮ ಕುಟುಂಬದ ಇತರ ಯಾವುದೇ ಸದಸ್ಯರು ಮುಂದಿನ ಅಧ್ಯಕ್ಷರಾಗುವ ಸಾಧ್ಯತೆಯನ್ನೂ ರಾಹುಲ್ ತಳ್ಳಿಹಾಕಿದ್ದಾರೆ. ಹೀಗಿದ್ದರೂ, ಇಲ್ಲಿ ಒಂದು ವ್ಯಂಗ್ಯವಿದೆ. ರಾಹುಲ್ ಮತ್ತು ಅವರ ಜೊತೆ ಗುರುತಿಸಿಕೊಂಡಿರುವ ನಾಯಕರು ಪಕ್ಷಕ್ಕೆ ಸಂಬಂಧಿಸಿದಂತೆ ರಾಷ್ಟ್ರ ಹಾಗೂ ರಾಜ್ಯಗಳ ಮಟ್ಟದ ಎಲ್ಲ ತೀರ್ಮಾನಗಳನ್ನು ಕೈಗೊಳ್ಳುತ್ತಾರೆ. ಹೆಚ್ಚಿನ ನಾಯಕರು ರಾಹುಲ್ ಮಾತಿಗೆ ಒಪ್ಪಿಗೆ ಸೂಚಿಸುತ್ತಾರೆ. ರಾಹುಲ್ ಅವರು ಅಧ್ಯಕ್ಷ ಆಗಲು ಒಪ್ಪದಿದ್ದರೆ, ಪ್ರಿಯಾಂಕಾ ಗಾಂಧಿ ವಾದ್ರಾ ಅವರೂ ಒಪ್ಪದಿದ್ದರೆ, 2024ರ ಲೋಕಸಭಾ ಚುನಾವಣೆಯವರೆಗೂ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯುವಂತೆ ಸೋನಿಯಾ ಗಾಂಧಿ ಅವರ ಮನವೊಲಿಸಬಹುದು ಎಂದು ಪಕ್ಷದ ನಿಷ್ಠಾವಂತರು ಭಾವಿಸಿರಬಹುದು. ಆದರೆ ಹೀಗೆ ಮಾಡುವುದು ಪ್ರಜಾತಾಂತ್ರಿಕ ಚುನಾವಣೆಗಳ ಅಣಕವಾಗಬಹುದು.

ರಾಹುಲ್ ಅವರ ಮುಂದಾಳತ್ವದಲ್ಲಿ ಕಾಂಗ್ರೆಸ್ ಪಕ್ಷವು ಭಾರತ್ ಜೋಡೊ ಯಾತ್ರೆಯನ್ನು ಶೀಘ್ರದಲ್ಲಿಯೇ ಆರಂಭಿಸಲಿದೆ. ಈ ಯಾತ್ರೆಯು ಕೆಲವು ತಿಂಗಳವರೆಗೆ ಮುಂದುವರಿಯಲಿದೆ. ಆ ವೇಳೆಗೆ ಹೊಸ ಅಧ್ಯಕ್ಷರ ಆಯ್ಕೆ ಆಗಬಹುದು. ಪಕ್ಷಕ್ಕೆ ಹೊಸ ಅಧ್ಯಕ್ಷರು ಬಂದರೆ, ಅದರ ನಂತರವೂ ರಾಹುಲ್ ಅವರೇ ಯಾತ್ರೆಯ ಮುಂದಾಳತ್ವ ವಹಿಸುವರೇ? ಅಥವಾ ಹೊಸ ಅಧ್ಯಕ್ಷರು ಯಾತ್ರೆಯ ನಾಯಕತ್ವ ವಹಿಸಿಕೊಳ್ಳುವರೇ? ಪಕ್ಷದ ತೆಕ್ಕೆಯ ಹೊರಗಿರುವ ಎಲ್ಲರನ್ನೂ ಸಂಪರ್ಕಿಸುವ ಯಾತ್ರೆಯ ಉದ್ದೇಶ ಚೆನ್ನಾಗಿದೆ. ಎಲ್ಲರನ್ನೂ ಒಳಗೊಳ್ಳುವ ಮೂಲಕ ದೇಶದ ಏಕತೆಯನ್ನು ಸಾರುವ ಉದ್ದೇಶ ಕೂಡ ಯಾತ್ರೆಗೆ ಇದೆ. ಈ ಯಾತ್ರೆಯು ಪಕ್ಷದಲ್ಲಿ ಹೊಸ ಚೈತನ್ಯವನ್ನು ತುಂಬಲಿದೆ ಎಂಬ ನಿರೀಕ್ಷೆಯು ಕಾರ್ಯಕರ್ತರಲ್ಲಿಯೂ ನಾಯಕರಲ್ಲಿಯೂ ಇದೆ. ಆದರೆ, ಪಕ್ಷಕ್ಕೆ ಒಬ್ಬ ಗಟ್ಟಿ ನಾಯಕ ಇಲ್ಲದಿದ್ದರೆ, ಸಂಘಟನೆಯಲ್ಲಿ ಒಗ್ಗಟ್ಟು ಕಾಣದಿದ್ದರೆ, ಹೊಸ ಚೈತನ್ಯ ಮತ್ತು ಹೊಸ ದಿಕ್ಕು ಇಲ್ಲದಿದ್ದರೆ ಇಡೀ ಯಾತ್ರೆಯು ಪ್ರಹಸನದಂತೆ ಆಗಬಹುದು. ಜಮ್ಮು ಮತ್ತು ಕಾಶ್ಮೀರದಲ್ಲಿ ಹಾಗೂ ಹಿಮಾಚಲ ಪ್ರದೇಶದಲ್ಲಿ ಪಕ್ಷದ ಸ್ಥಾನಗಳಿಗೆ ಕ್ರಮವಾಗಿ ಗುಲಾಂ ನಬಿ ಆಜಾದ್ ಮತ್ತು ಆನಂದ ಶರ್ಮಾ ಅವರು ಈಚೆಗೆ ರಾಜೀನಾಮೆ ನೀಡಿದ್ದಾರೆ. ಇವರಿಬ್ಬರೂ ಪಕ್ಷದ ಪ್ರಮುಖ ನಾಯಕರು. ಯಾತ್ರೆಯು ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಪಕ್ಷದೊಳಗೆ ನಡೆಯುತ್ತಿರುವ ಇಂತಹ ವಿದ್ಯಮಾನಗಳು ದೊಡ್ಡ ಭರವಸೆಯನ್ನು ಹುಟ್ಟಿಸುವಂಥವು ಅಲ್ಲ.

ದಿನದ ಟ್ವೀಟ್

ಭಾಷೆ ತೊಡಕಲ್ಲ



ಸರ್... ನನ್ನ ಮಗಳು ಈಗ ಬಹುರಾಷ್ಟ್ರೀಯ ಕಂಪನಿಯಲ್ಲಿ ಉದ್ಯೋಗದಲ್ಲಿ ಇದ್ದಾಳೆ. ಆಕೆ ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಎಂಬಿಎ ಮಾಡಿದಳು ಮತ್ತು ಅವಳು ಓದಿದ್ದು ಕನ್ನಡ ಮಾಧ್ಯಮದಲ್ಲಿ ಎಂದು ರಿಕ್ಷಾ ಚಾಲಕ ನಿನ್ನೆ ಒತ್ತಿ ಹೇಳಿದ. ನಾನು ಕೆಎಂಸಿ ಆಸ್ಪತ್ರೆಯಲ್ಲಿ ಹೃದ್ರೋಗ ತಜ್ಞನಾಗಿದ್ದೇನೆ ಮತ್ತು ನಾನು ಕೂಡ ಓದಿದ್ದು ಕನ್ನಡ ಮಾಧ್ಯಮದಲ್ಲಿಯೇ ಎಂದು ಕೆಳಗಿಳಿಯುವಾಗ ಹೇಳಿದೆ. ಆತನಿಗೆ ಅಚ್ಚರಿಯಾಯಿತು. ಭಾಷೆ ಒಂದು ತೊಡಕಾಗಲು ಸಾಧ್ಯವಿಲ್ಲ ಎಂದು ತಿಳಿಸುವುದು ಈ ಟ್ವೀಟ್‌ನ ಉದ್ದೇಶ. ಯಶಸ್ವಿಯಾಗಲು ಮತ್ತು ಸಾಧಕರಾಗಲು ಬದ್ಧತೆ ಇರಬೇಕು.

ಡಾ. ಪಿ.ಕಾಮತ್, ಹೃದ್ರೋಗ ತಜ್ಞ

ಕಿಡಿನುಡಿ



ಬಿಹಾರದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಜೆಡಿಯು- ಆರ್‌ಜೆಡಿ ನೇತೃತ್ವದ ಸರ್ಕಾರವು ವಿಶ್ವಾಸಮತ ಪರೀಕ್ಷೆ ಎದುರಿಸಿದ ದಿನವೇ ಆರ್‌ಜೆಡಿ ನಾಯಕರಿಗೆ ಸೇರಿದ ಸ್ಥಳಗಳಲ್ಲಿ ಸಿಬಿಐ ದಾಳಿ ನಡೆದಿದೆ. ಇದು ಕಾಕತಾಳೀಯವೋ ಅಥವಾ ದಾಳಿ ನಡೆದ ಸಮಯವೇ ಎಲ್ಲವನ್ನೂ ಹೇಳುವ 'ಹೊಸ' ಭಾರತದ ರಾಜಕಾರಣದಲ್ಲಿನ ಇನ್ನೊಂದು ದಿನವೋ? 'ಗಿಳಿ' ಇನ್ನೂ ಪಂಜರದಲ್ಲಿಯೇ ಇದೆಯೋ ಅಥವಾ ಈಗ ಅದು ಆಯ್ದವರ ಮೇಲೆ ಮಾತ್ರ ಆಕ್ರಮಣ ಮಾಡುವ, ಪಂಜರದ ಹೊರಗಿರುವ 'ಗಿಡುಗ' ಆಗಿದೆಯೋ?

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಸೋಮವಾರ, 25-8-1997

• ವೀರಪ್ಪನ್‌ನಿಂದ ಎಲ್ಲ ಒತ್ತೆಯಾಳುಗಳ ಬಿಡುಗಡೆ

ಚೆನ್ನೈ, ಆಗಸ್ಟ್ 24– ಕಳೆದ ಜುಲೈ 12ರಿಂದ ತನ್ನ ವಶದಲ್ಲಿ ಒತ್ತೆ ಇಟ್ಟುಕೊಂಡಿದ್ದ ಕರ್ನಾಟಕದ ಅರಣ್ಯ ಇಲಾಖೆಯ ಎಂಟು ಮಂದಿ ಸಿಬ್ಬಂದಿಯನ್ನು ದಂತಚೋರ ಹಾಗೂ ಕಾಡುಗಳ್ಳ ವೀರಪ್ಪನ್ ಇಂದು ಬಿಡುಗಡೆ ಮಾಡುವುದರೊಂದಿಗೆ, ತೀವ್ರ ಆತಂಕ ಮೂಡಿಸಿದ್ದ ಒತ್ತೆಯಾಳು ಪ್ರಕರಣ ಸುಖಾಂತ್ಯ ಕಂಡಂತಾಗಿದೆ.

ಪೆರಿಯಾರ್ ಜಿಲ್ಲೆಯ ಈರೋಡ್ ಅರಣ್ಯ ಪ್ರದೇಶದಿಂದ ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳ ಸಂಧಾನಕಾರ ಹಾಗೂ 'ನಕ್ಕೀರನ್' ಪತ್ರಿಕೆಯ ಸಂಪಾದಕ ಆರ್. ಆರ್. ಗೋಪಾಲ್ ಅವರು ಎಂಟು ಮಂದಿಯನ್ನು ತಮ್ಮೊಂದಿಗೆ ಕರೆದುಕೊಂಡು ಬಂದಿದ್ದಾರೆ.

• ರಾಜ್ಯದಲ್ಲಿ ಮೂರು ಹೊಸ ಜಿಲ್ಲೆ ಉದಯ

ಹುಬ್ಬಳ್ಳಿ, ಆಗಸ್ಟ್ 24– ಜನತೆಯ ಆಶೋತ್ತರಗಳನ್ನು ಈಡೇರಿಸುವ ಉದ್ದೇಶದಿಂದ ಸಣ್ಣ ಜಿಲ್ಲೆಗಳನ್ನು ರಚಿಸಲಾಗುತ್ತಿದೆ ಎನ್ನುವ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಘೋಷಣೆಯೊಂದಿಗೆ ರಾಜ್ಯದಲ್ಲಿ ಇನ್ನೂ ಮೂರು ಜಿಲ್ಲೆಗಳು ಇಂದು ಅಸ್ತಿತ್ವಕ್ಕೆ ಬಂದವು.

ಕೊಪ್ಪಳ, ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು ಆಯಾ ಜಿಲ್ಲಾ ಕೇಂದ್ರಗಳಲ್ಲಿ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿಯವರು, ಶ್ರೀಸಾಮಾನ್ಯರ ಸನಿಹಕ್ಕೆ ಸರ್ಕಾರವನ್ನು ಕೊಂಡೊಯ್ಯುವಲ್ಲಿ ಹಾಗೂ ಆಡಳಿತದಲ್ಲಿ ಗಣನೀಯ ಮಟ್ಟದ ಸುಧಾರಣೆ ತರುವಲ್ಲಿ ಸಣ್ಣ ಜಿಲ್ಲೆಗಳ ರಚನೆ ಅತ್ಯಗತ್ಯವಾಗಿದೆ ಎಂದರು.

50 ವರ್ಷಗಳ ಹಿಂದೆ

ಶುಕ್ರವಾರ, 25-8-1972

• ಕೆಂಗಲ್‌ರ ಹೇಳಿಕೆ ನಿರಾಧಾರ: ಇಂದಿರಾಗೆ ಅರಸು ವಿವರಣೆ

ನವದೆಹಲಿ, ಆಗಸ್ಟ್ 24– ಅನೇಕ ಮಂದಿ ಶಾಸಕರಿಗೆ ಮೈಸೂರು ಸಂಪುಟದ ವಿಷಯದಲ್ಲಿ ಅಸಮಾಧಾನವಾಗಿದೆಯೆಂಬ ಮಾಜಿ ರೈಲ್ವೆ ಸಚಿವ ಕೆ. ಹನುಮಂತಯ್ಯ ಅವರ ವಾದ ನಿರಾಧಾರವಾದುದೆಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ತಿಳಿಸಿದರು.

ನಿನ್ನೆ ರಾತ್ರಿ ಇಲ್ಲಿಗೆ ಆಗಮಿಸಿದ ಅರಸು ಅವರು ಪ್ರಧಾನಿ, ಕಾಂಗ್ರೆಸ್ ಅಧ್ಯಕ್ಷ ಶಂಕರ್ ದಯಾಳ್ ಶರ್ಮಾ ಹಾಗೂ ಕೇಂದ್ರ ವಸತಿ ಸಚಿವ ಉಮಾಶಂಕರ್ ದೀಕ್ಷಿತ್ ಅವರನ್ನೂ ಭೇಟಿ ಮಾಡಿದ್ದರು. ಅರಸು ಅವರು ಮೈಸೂರು ನಾಯಕತ್ವಕ್ಕೆ ಹನುಮಂತಯ್ಯನವರು ಹಾಕಿರುವ ಸವಾಲಿನ ಬೆಳಕಿನಲ್ಲಿ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನೂ, ಭೂಪರಿಮಿತಿ ವಿಷಯವನ್ನೂ ಪ್ರಧಾನಿಯೊಡನೆ ಚರ್ಚಿಸಿದರೆಂದು ಗೊತ್ತಾಗಿದೆ.

ಘೋರ ಕೃತ್ಯದ ಅಪರಾಧಿಗಳ ಬಿಡುಗಡೆಯು ದೇಶದ ಸಾಕ್ಷಿಪ್ರಜ್ಞೆಗೆ ಆಘಾತ ಉಂಟುಮಾಡಿದೆ

'ಸನ್ನಡತೆ'ಯ ಬಿಡುಗಡೆ: ಸನ್ನಡೆಯೇ?



ವಿಶ್ಲೇಷಣೆ

ಡಾ. ಗೀತಾ ಕೃಷ್ಣಮೂರ್ತಿ

2002ರಲ್ಲಿ ಸಾಬರಮತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಕರಸೇವಕರ ಭೀಕರ ಹತ್ಯೆಯ ಬಳಿಕ, ಗುಜರಾತ್‌ನಲ್ಲಿ ಭುಗಿಲೆದ್ದು ವ್ಯಾಪಿಸಿದ ಹಿಂಸಾಚಾರದಲ್ಲಿ ಸೇಡಿನ ರೋಷಕ್ಕೆ ಬಲಿಯಾಗಿ, ಅತ್ಯಾಚಾರಕ್ಕೆ ಒಳಗಾದವಳು ಬಿಲ್ಕಿಸ್ ಬಾನು ಎಂಬ ಹೆಣ್ಣುಮಗಳು. ಆಕೆ ಏಳು ತಿಂಗಳ ಗರ್ಭಿಣಿ ಎಂಬುದನ್ನೂ ಕಡೆಗಣಿಸಿ ಆಕೆಯ ಮೇಲೆ ಅತ್ಯಾಚಾರ ಎಸಗಲಾಯಿತು. ಆಕೆಯ ಎದುರಿಗೇ ಆಕೆಯ ಮೂರು ವರ್ಷದ ಮಗುವಿನ ತಲೆಯನ್ನು ಕಲ್ಲಿನಿಂದ ಜಜ್ಜಿ ಕೊಂದು, ಅವಳ ಕುಟುಂಬದವರನ್ನೂ ಸಾಯಿಸಲಾಯಿತು.

ಇಷ್ಟೆಲ್ಲ ಭೀಕರ ಕೃತ್ಯಗಳ ನಡುವೆ ಎದೆಗುಂದದೆ ನ್ಯಾಯಾಲಯದ ಮೆಟ್ಟಿಲೇರಿ, ನ್ಯಾಯದ ಹಾದಿಯಲ್ಲಿನ ಅನೇಕ ಎಡರುತೊಡರುಗಳನ್ನು ದಾಟಿ ನ್ಯಾಯ ದೊರಕಿಸಿಕೊಂಡವಳು ಬಿಲ್ಕಿಸ್ ಬಾನು. ಆಕೆಯ ಮೇಲೆ ಅತ್ಯಾಚಾರ ಎಸಗಿದವರಿಗೆ ಶಿಕ್ಷೆಯಾದದ್ದು 2008ರಲ್ಲಿ. ಈ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾದವರು ಹನ್ನೊಂದು ಮಂದಿ. ಇತ್ತೀಚೆಗೆ ಈ ಎಲ್ಲರನ್ನೂ 'ಸನ್ನಡತೆ'ಯ ಆಧಾರದ ಮೇಲೆ ಜೈಲಿನಿಂದ ಬಿಡುಗಡೆಗೊಳಿಸಲಾಗಿದೆ. ಗುಜರಾತ್ ಸರ್ಕಾರದ ಈ ನಡೆ ರಾಷ್ಟ್ರದಾದ್ಯಂತ ವ್ಯಾಪಕ ಟೀಕೆಗೆ ಗುರಿಯಾಗಿದೆ. ಸ್ವತಂತ್ರ ಭಾರತದ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಂಬಿಕೆ ಇಟ್ಟಿರುವ ನಾಗರಿಕರಿಗೆ, ಪ್ರಜ್ಞಾವಂತರಿಗೆ, ದೇಶದ ಸಾಕ್ಷಿಪ್ರಜ್ಞೆಗೆ, ಅತ್ಯಂತ ಘೋರ ಅಪರಾಧ ಎಸಗಿದವರ ಈ ಬಿಡುಗಡೆ ಆಘಾತ ಉಂಟುಮಾಡಿದೆ.

ಸುಪ್ರೀಂ ಕೋರ್ಟ್, ಬಾನು ಅತ್ಯಾಚಾರ ಪ್ರಕರಣದ ವಿಚಾರಣೆಯನ್ನು ಸಿಬಿಐಗೆ ವಹಿಸಿತು. ಈ ಪ್ರಕರಣದ 19 ಆರೋಪಿಗಳನ್ನು 2004ರಲ್ಲಿ ಬಂಧಿಸಲಾಯಿತು. ಅಹಮದಾಬಾದಿನಲ್ಲೇ ವಿಚಾರಣೆ ನಡೆದರೆ, ಸಿಬಿಐ ಸಂಗ್ರಹಿಸಿದ ಸಾಕ್ಷ್ಯವನ್ನು ಆರೋಪಿಗಳು ಪ್ರಭಾವ ಬಳಸಿ ನಾಶಪಡಿಸಬಹುದು ಎಂದು ಬಾನು ಅಂಜಿಕೆ ವ್ಯಕ್ತಪಡಿಸಿದ್ದರಿಂದ ಮತ್ತು ಆಕೆಗೆ ಅಲ್ಲಿ ಜೀವಬೆದರಿಕೆ ಇದ್ದುದರಿಂದ, ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮುಂಬೈಗೆ ಸ್ಥಳಾಂತರಿಸಿತು. 2008ರ ಜನವರಿ 21ರಂದು, ಅತ್ಯಾಚಾರ ಹಾಗೂ ಹತ್ಯೆ ಮತ್ತು ಕಾನೂನು ಬಾಹಿರವಾಗಿ ಗುಂಪುಗೂಡಿದ ಅಪರಾಧಕ್ಕಾಗಿ 11 ಮಂದಿಗೆ ಸಿಬಿಐ ವಿಶೇಷ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿತು. ಅಲ್ಲಿನ ಹೈಕೋರ್ಟ್ ಈ ತೀರ್ಪನ್ನು ಎತ್ತಿಹಿಡಿಯಿತು.

ಅತ್ಯಾಚಾರ ಅತ್ಯಂತ ಘೋರ, ಅದು ಮಾನವತೆಯ ಮೇಲೆ ಎಸಗಿದ ಅಪರಾಧ, ಅವರಿಗೆ ಮರಣ ದಂಡನೆಯೊಂದೇ ಸೂಕ್ತವಾದ ಶಿಕ್ಷೆ. ಇದು, 2012ರಲ್ಲಿ ನಿರ್ಭಯಾ ಪ್ರಕರಣದಲ್ಲಿ ದೇಶದಾದ್ಯಂತ ಅನುರಣಿಸಿದ ಆಕ್ರೋಶ. ಅತ್ಯಾಚಾರದಂಥ ಘೋರ ಕೃತ್ಯವನ್ನು ಎಸಗಬಲ್ಲ ವ್ಯಕ್ತಿ ಸಮಾಜಕ್ಕೆ ಕಂಟಕ ಎಂಬುದು ಇದರ ಹಿಂದಿನ ತರ್ಕ. ಆದರೆ 'ಸನ್ನಡತೆ' ಎಂಬುದೇ ಅಣಕವಾಗಿರುವ, ಅತ್ಯಾಚಾರದಂಥ 'ನಡತೆಗೆಟ್ಟ' ಪ್ರಕರಣದಲ್ಲಿ, 'ಸನ್ನಡತೆ'ಯ ಆಧಾರದ ಮೇಲೆ ಅತ್ಯಾಚಾರಿಯನ್ನು ಬಿಡುಗಡೆ ಮಾಡಿರುವುದು ನ್ಯಾಯದ ಅಣಕವೆಂದೇ ಹೇಳಬೇಕು.

'ಸನ್ನಡತೆಯ ಆಧಾರದ ಮೇಲೆ ಬಿಡುಗಡೆಗೊಳ್ಳುವುದು ಸನ್ನಡತೆಯುಳ್ಳ ಅಪರಾಧಿಯ ಹಕ್ಕಲ್ಲ. ಅದು ಕಾರ್ಯಾಂಗ ತನ್ನ ವಿವೇಚನಾನುಸಾರ, ನಿಯಮಗಳಿಗೆ ಒಳಪಟ್ಟು ಕೈಗೊಳ್ಳುವ ಕ್ರಮ' ಎಂದು ಸುಪ್ರೀಂ ಕೋರ್ಟ್ ಒಂದು ಪ್ರಕರಣದಲ್ಲಿ ಅಭಿಪ್ರಾಯಪಟ್ಟಿದೆ (ಹರಿಯಾಣ ಸರ್ಕಾರ ಮತ್ತು ಮಹೇಂದರ್ ಸಿಂಗ್ ನಡುವಿನ ಪ್ರಕರಣ). ಇದರ ಉದ್ದೇಶ, ಅಪರಾಧಿಕ ನ್ಯಾಯ ವ್ಯವಸ್ಥೆಯ ಸುಧಾರಣೆ ಮತ್ತು ಮಾನವ ಹಕ್ಕುಗಳ ರಕ್ಷಣೆ. 'ಸೆರೆಮನೆ' ವಿಷಯ ಭಾರತ ಸಂವಿಧಾನದ ಏಳನೇ ವಿಧಿಯಲ್ಲಿ 'ರಾಜ್ಯ ಪಟ್ಟಿ'ಯ ಅಡಿಯಲ್ಲಿ ಬರುವುದರಿಂದ, ಸೆರೆಮನೆಗಳ ನಿರ್ವಹಣೆ ಮತ್ತು ಆಡಳಿತವು ಆಯಾ ರಾಜ್ಯ ಸರ್ಕಾರದ ಜವಾಬ್ದಾರಿ. ಆದ್ದರಿಂದ, ಯಾವುದೇ ಅಪರಾಧಿಯ ಶಿಕ್ಷೆಯನ್ನು ಕಡಿತಗೊಳಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರವಿದ್ದರೂ ಅದು ಕೈಗೊಳ್ಳುವ ನಿರ್ಧಾರ ವಿವೇಚನೆಯಿಂದ ಕೂಡಿರಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ಈ ಅತ್ಯಾಚಾರದ ಅಪರಾಧಿಗಳ ಪೈಕಿ ಒಬ್ಬ ಅಪರಾಧಿಯು ಅವಧಿಗೆ ಮುನ್ನ ತನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ್ದ. ಈ ಮನವಿಯನ್ನು ಪರಿಶೀಲಿಸುವಂತೆ ನ್ಯಾಯಾಲಯವು ಗುಜರಾತ್ ಸರ್ಕಾರಕ್ಕೆ ನಿರ್ದೇಶಿಸಿತು. ಅದರಂತೆ ಗುಜರಾತ್ ಸರ್ಕಾರ ಒಂದು ಸಮಿತಿಯನ್ನು ರಚಿಸಿತು. ಸಮಿತಿ ಮಾಡಿದ ಸರ್ವಾನುಮತದ ನಿರ್ಣಯದಂತೆ, ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಎಲ್ಲ 11 ಅಪರಾಧಿಗಳನ್ನು ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರವು 2014ರಲ್ಲಿ ಹೊರಡಿಸಿರುವ ಪರಿಷ್ಕೃತ ಬಿಡುಗಡೆ ನೀತಿಯ ಪ್ರಕಾರ, ಅತ್ಯಾಚಾರ ಮತ್ತು ಕೊಲೆ ಕಾರಣಗಳಿಗಾಗಿ ಶಿಕ್ಷೆಗೆ ಒಳಗಾಗಿರುವ ಅಪರಾಧಿಗಳು ಅವಧಿಪೂರ್ವ ಬಿಡುಗಡೆಗೆ ಅನರ್ಹರು. ಈ ನೀತಿಯನ್ನು ಅನ್ವಯಿಸಿದ್ದರೆ, ಎಲ್ಲ ಹನ್ನೊಂದು ಮಂದಿ ಅಪರಾಧಿಗಳೂ ಬಿಡುಗಡೆಗೆ ಅನರ್ಹರಾಗುತ್ತಿದ್ದರು. ಆದರೆ, ಅದರ ಬದಲಿಗೆ, ಗುಜರಾತ್‌ನಲ್ಲಿ 1992ರಿಂದ ಜಾರಿಯಲ್ಲಿರುವ 'ಬಿಡುಗಡೆ ನೀತಿ'ಯನ್ನು ಅನುಸರಿಸಲಾಗಿದೆ ಎಂದು ವರದಿಯಾಗಿದೆ.

'ಅಪರಾಧಿಗಳು ಶಿಕ್ಷೆಗೆ ಗುರಿಯಾದಾಗ ಚಾಲ್ತಿಯಲ್ಲಿದ್ದುದು 1992ರ ನೀತಿ' ಎಂಬುದು ತನ್ನ ನಿರ್ಧಾರಕ್ಕೆ ಗುಜರಾತ್ ಸರ್ಕಾರ ನೀಡಿರುವ ಕಾರಣ.



ಪರಿಣಾಮವಾಗಿ, ಜೈಲಿನಲ್ಲಿದ್ದ ಈ ಎಲ್ಲ ಅಪರಾಧಿಗಳೂ ಸರ್ಕಾರದ ಕೃಪೆಯಿಂದ ಗೋಧ್ರಾ ಉಪ ಕಾರಾಗೃಹದಿಂದ ಹೊರಬಂದು ಸ್ವಾತಂತ್ರ್ಯೋತ್ಸವದ ದಿನದಂದು ಸ್ವಾತಂತ್ರ್ಯದ ಗಾಳಿ ಸೇವಿಸಿದರು! ಆದರೆ, ಬಿಲ್ಕಿಸ್ ಬಾನು ಪ್ರಕರಣದಲ್ಲಿಯೇ, ಬಿಡುಗಡೆಯಾದ ಅಪರಾಧಿಗಳಿಗಿಂತ ಕಡಿಮೆ ಹೇಯ ಕೃತ್ಯಕ್ಕಾಗಿ ಬಂಧಿತರಾಗಿ ಶಿಕ್ಷೆ ಅನುಭವಿಸುತ್ತಿರುವವರು ಇನ್ನೂ ಜೈಲಿನಲ್ಲಿಯೇ ಇದ್ದಾರೆ.

ಬಿಡುಗಡೆಯ ಮನವಿ ಪರಿಶೀಲನೆಗೆ ಗುಜರಾತ್ ಸರ್ಕಾರ ನೇಮಿಸಿದ್ದ ಸಮಿತಿಯಲ್ಲಿ ಇಬ್ಬರು ಬಿಜೆಪಿ ಶಾಸಕರು ಹಾಗೂ ಬಿಜೆಪಿ ಬಗ್ಗೆ ಒಲವಿರುವ ಮೂವರು ಕಾರ್ಯಕರ್ತರಿದ್ದರು ಎಂಬ ಆರೋಪ ಇಡೀ ಬಿಡುಗಡೆಯ ಪ್ರಹಸನಕ್ಕೆ ರಾಜಕೀಯ ಬಣ್ಣ ಲೇಪಿಸಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆಯ ಸಂದರ್ಭದಲ್ಲಿ, ಬೆಳಿಗ್ಗೆ ಕೆಂಪು ಕೋಟೆಯ ವೇದಿಕೆಯಲ್ಲಿ ಪ್ರಧಾನಮಂತ್ರಿಯವರು ತ್ರಿವರ್ಣ ಧ್ವಜವನ್ನು ಹಾರಿಸಿ ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ, 'ನಮ್ಮ ವರ್ತನೆಯಲ್ಲಿ, ನಮ್ಮ ಸಂಸ್ಕೃತಿಯಲ್ಲಿ ಮತ್ತು ದಿನನಿತ್ಯದ ಜೀವನದಲ್ಲಿ ಮಹಿಳೆಯರಿಗೆ ಅವಮಾನ ಉಂಟುಮಾಡುವಂಥ ಹಾಗೂ ಅವರ ಘನತೆಗೆ ಕುಂದು ತರುವಂಥ ಪ್ರತಿಯೊಂದನ್ನೂ ನಾವು ತ್ಯಜಿಸುತ್ತೇವೆ ಎಂಬ ಪ್ರತಿಜ್ಞೆಯನ್ನು ನಾವು ಮಾಡಲಾರೆವೇ' ಎಂದು ಕೇಳುವ ಮೂಲಕ ದೇಶದ ಪ್ರತೀ ಪ್ರಜೆಯ ಆತ್ಮಸಾಕ್ಷಿಯನ್ನು ತಟ್ಟಿದರು. ವಿಪರ್ಯಾಸವೆಂದರೆ, ಮಹಿಳೆಯ ಘನತೆಗೆ ಕುಂದು ತರುವಂಥ, ಮಹಿಳೆಯ ಮೇಲೆ ಎಸಗಿದ ಅತ್ಯಾಚಾರದಂಥ ಹೇಯ ಅಪರಾಧ ಮಾಡಿದುದಕ್ಕಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಈ ಅಪರಾಧಿಗಳು ಬಿಡುಗಡೆಯಾದದ್ದೂ ಅದೇ ದಿನ! ಇದನ್ನು ಹೇಗೆಂದು ಅರ್ಥೈಸಬೇಕು?

ಈ ಕ್ರಮವನ್ನು ಸಮರ್ಥಿಸಿಕೊಳ್ಳುವವರು ನೀಡುವ ಕಾರಣ, ಅವರಿಗೆ ಶಿಕ್ಷೆ ವಿಧಿಸಿದಾಗ ಜಾರಿಯಲ್ಲಿದ್ದುದು '1992ರ ಬಿಡುಗಡೆ ನೀತಿ' ಮತ್ತು ಅದರ ಪ್ರಕಾರ ಈ ಅಪರಾಧಿಗಳ ಬಿಡುಗಡೆಗೆ ಅವಕಾಶವಿತ್ತು ಎಂಬುದು. ಆದರೆ ಯಾವುದೇ ಕಾನೂನನ್ನು ಅನ್ವಯಿಸುವಾಗ, ಅದನ್ನು ಅಕ್ಷರಶಃ ಪಾಲಿಸಬೇಕೋ ಅಥವಾ ಕಾನೂನಿನ ಉದ್ದೇಶವನ್ನು ಈಡೇರಿಸುವ ದಿಸೆಯಲ್ಲಿ ಅದನ್ನು ಅರ್ಥೈಸಬೇಕೋ ಎಂಬುದನ್ನು ವಿವೇಚನೆಯಿಂದ ನಿರ್ಧರಿಸಬೇಕು. ವಿವೇಚನೆ ಬಳಕೆಯಾಗದಿದ್ದಾಗ ನ್ಯಾಯ ಸೋಲುತ್ತದೆ. ಆದರೆ ಅನ್ಯಾಯಕ್ಕೆ ಮೂಕಸಾಕ್ಷಿಗಳಾಗಿರುವುದು ಸರ್ವಥಾ ತಪ್ಪು.

ಅನೇಕ ಮಹಿಳಾ ಸಂಘಟನೆಗಳು, 6000ಕ್ಕೂ ಹೆಚ್ಚು ಮಹಿಳಾ ಕಾರ್ಯಕರ್ತರು ಇದಕ್ಕೆ ವಿರೋಧ ವ್ಯಕ್ತಪಡಿಸಿ, ಬಿಡುಗಡೆಯ ಆದೇಶವನ್ನು ಹಿಂಪಡೆಯಬೇಕೆಂದು ಆಗ್ರಹಿಸಿ ದೇಶದಾದ್ಯಂತ ಪ್ರದರ್ಶನಗಳನ್ನು ನಡೆಸಿದ್ದಾರೆ. ತೃಣಮೂಲ ಕಾಂಗ್ರೆಸ್‌ನ ಸಂಸದೆ ಮಹುವಾ ಮೊಯಿತ್ರಾ, ಸಿಪಿಎಂ ನಾಯಕಿ ಸುಭಾಷಿಣಿ ಅಲಿ, ಪತ್ರಕರ್ತೆ ಮತ್ತು ಚಿತ್ರ ನಿರ್ಮಾಪಕಿ ರೇವತಿ ಲೌಲ್ ಹಾಗೂ ಸಾಮಾಜಿಕ ಕಾರ್ಯಕರ್ತೆ ರೂಪ್ ರೇಖಾ ರಾಣಿ ಅವರು ಬಿಡುಗಡೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಹಿರಿಯ ವಕೀಲರಾದ ಕಪಿಲ್ ಸಿಬಲ್ ಹಾಗೂ ಅಪರ್ಣಾ ಭಟ್ ಪ್ರತಿನಿಧಿಸುತ್ತಿದ್ದಾರೆ. ಸಾರ್ವಜನಿಕ ಹಿತಾಸಕ್ತಿಯ ಈ ಅರ್ಜಿಯನ್ನು ವಿಚಾರಣೆಗಾಗಿ ಕೈಗೆತ್ತಿಕೊಳ್ಳಲು ನ್ಯಾಯಾಲಯ ಸಮ್ಮತಿಸಿದೆ.

ಚುರುಮುರಿ



ನೀನ್ಯಾವನಯ್ಯ?!

• ಗುರು ಪಿ.ಎಸ್.

'ನೋಡಿಲ್ಲಿ, ಬಿಹಾರದಲ್ಲಿ ರಾಷ್ಟ್ರಧ್ವಜ ಕೈಯಲ್ಲಿ ಹಿಡ್ಕೊಂಡು ಪ್ರೊಟೆಸ್ಟ್ ಮಾಡ್ತಿದ್ದವನಿಗೆ ಪೊಲೀಸರು ಹೊಡದ್ರಂತೆ...' ಪೇಪರ್ ಓದುತ್ತಾ ಹೇಳಿದೆ.

'ನ್ಯಾಷನಲ್ ಫ್ಲ್ಯಾಗ್ ಹಿಡಿದ್ರೂ ಹೊಡೆದ್ರಂತಾ! ಅಂಥದ್ದೇನ್ ಕೇಳ್ತಿದ್ದ ಆ ಯುವಕ...' ಮುಖ ಆ ಕಡೆ ತಿರುಗಿಸಿಕೊಂಡೇ ಕೇಳಿದಳು ಹೆಂಡತಿ.

'ಉದ್ಯೋಗ ಕೊಡಿ ಅಂತ...'

ಕಿಸಕ್ಕನೆ ನಕ್ಕ ಪತ್ನಿ, 'ಆ ಹುಡುಗ ಬರೀ ಕಾಲೇಜು- ವಿಶ್ವವಿದ್ಯಾಲಯದ ಪುಸ್ತಕ ಓದಿದವನು ಅಂತ ಕಾಣಿಸುತ್ತೆ, ನನ್ನಂಗೆ ವಾಟ್ಸ್ಆ್ಯಪ್ ಯೂನಿವರ್ಸಿಟಿಯಲ್ಲಿ ಓದಿದ್ರೆ ಅವನು ಬೇರೆಯದನ್ನೇ ಹಿಡ್ಕೊಂಡಿರೋನು, ಬೇರೆಯದನ್ನೇ ಹೇಳಿರೋನು'.

'ಏನು ಹಿಡ್ಕೊಂಡಿರೋನು...'

'ಮೊಟ್ಟೆ, ದೊಣ್ಣೆ'.

'ಏನ್ ಹೇಳಿರೋನು?'

'ಜಾತಿ, ಧರ್ಮ'.

'ಕೆಲಸ ಕೇಳಿದ್ರೆ ಜೀವನ ಕಟ್ಕೊಬಹುದು, ಮೊಟ್ಟೆ, ದೊಣ್ಣೆ ಹಿಡ್ಕೊಂಡು ಏನ್ ಆಗ್ತಾರೋ ಇವರೆಲ್ಲ...'

'ಉಪದೇಶ ನಿಲ್ಸಿಸ್ರೀ ಸಾಕು. ಎಂಥ ಟೇಸ್ಟ್‌ಲೆಸ್ ಲೈಫ್ ಕಣ್ರೀ ನಿಮ್ದು. ಜೀವನದಲ್ಲಿ ಸ್ವಲ್ಪನಾದರೂ ಜೋಶ್ ಇರಬೇಕ್ರೀ. ಆಡೋ ಮಾತು, ಮಾಡೋ ಕೆಲಸ ಒಂಥರಾ ಕಿಕ್ ಕೊಡಬೇಕು. ಜಾತಿ- ಧರ್ಮ, ವೆಜ್-ನಾನ್‌ವೆಜ್‌ನಂತಹ ಪದಗಳು ಕಿವಿಗೆ ಬೀಳ್ತಾನೇ ಇದ್ರೆ ಎಷ್ಟು ಕಿಕ್ ಇರುತ್ತೆ ನೋಡಿ ಬದುಕಲ್ಲಿ... ಇದೆಲ್ಲ ಬಿಟ್ಟು, ಉದ್ಯೋಗ, ಬೆಲೆ ಏರಿಕೆ, ಹಣದುಬ್ಬರ, ಹಗರಣ ಅಂತೆಲ್ಲ ಹೇಳ್ಕೊಂಡು ಒಂದೇ ಕಣ್ಣಲ್ಲಿ ಅಳ್ತಿರ್ತೀರ ಯಾವಾಗ್ಲೂ...' ಗಂಡ ಎಂದು ಒಂದಿನಿತೂ ಮರ್ಯಾದೆ ಕೊಡದೆ ಅಣಕಿಸುತ್ತಲೇ ಇದ್ದಳು ಹೆಂಡತಿ.

ನಾನು ಸಿಟ್ಟಿನಿಂದಲೇ ಹೇಳಿದೆ, 'ಸೀರಿಯಸ್ ವಿಷಯಗಳನ್ನು ಬಿಟ್ಟು, ಹೀಗೆ ಕೆಲಸಕ್ಕೆ ಬಾರದ ವಿಷಯ ಹಿಡ್ಕೊಂಡು, ನೀವು ಹೀಗಿರಿ, ಹಾಗಿರಿ, ಅದು ಮಾಡಿ, ಇದು ಮಾಡಬೇಡಿ ಅಂತ ಹೇಳೋಕೆ ಬರಬೇಕು ನಿನ್ನ ಶಿಷ್ಯಂದಿರು ನನ್ನ ಹತ್ರ, ಆಗ ಅವರಿಗೆ ಸರಿಯಾಗಿ ಹೇಳ್ತೀನಿ'.

'ಏನಂತ?'

'ನೀ ಯಾವನಯ್ಯ ಕೇಳಕ್ಕೆ ಅಂತ!'

ಸಂಗತ

ಅತಿಯಾದ ನಿರೀಕ್ಷೆಯೇ ತೊಡಕಾದೀತು

ಪೋಷಕರ ಅಸಹಜ ನಿರೀಕ್ಷೆಗಳು ಮಕ್ಕಳಲ್ಲಿ ನಾನಾ ಸಮಸ್ಯೆಗಳಿಗೆ ಕಾರಣವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ

• ಡಾ. ಎಚ್.ಬಿ.ಚಂದ್ರಶೇಖರ್

ಮಕ್ಕಳ ಪಾಲನೆ, ಪೋಷಣೆ ಕುರಿತಾಗಿ ಪೋಷಕರಿಗೆ ಮಾಹಿತಿ ನೀಡುವ ವಿಡಿಯೊವೊಂದನ್ನು ಯುಟ್ಯೂಬ್ ಚಾನೆಲ್‌ನಲ್ಲಿ ನೋಡಿದ ಪೋಷಕರೊಬ್ಬರು, ತಮ್ಮ ಮಗ ಸರಿಯಾಗಿ ಓದುತ್ತಿಲ್ಲ ಎಂದು ಅಳಲು ತೋಡಿಕೊಂಡರು. 'ಸ್ವಲ್ಪ ಹೊತ್ತು ಓದಿದ ನಂತರ ಆಟ ಆಡುವ ಕಡೆಯೇ ಅವನ ಗಮನ, ಹಿಂದೆ ತೆಗೆದಷ್ಟು ಅಂಕಗಳು ಈಗ ಬರುತ್ತಿಲ್ಲ' ಎಂದೂ ಹೇಳಿದರು.

ಈ ಕುರಿತು ಒಂದಷ್ಟು ಮಾತುಕತೆಯಾದ ಮೇಲೆ ತಿಳಿದುಬಂದ ವಿಷಯವಿಷ್ಟು. ಮಗನ ವಿದ್ಯಾಭ್ಯಾಸದ ಸಲುವಾಗಿಯೇ ಹಳ್ಳಿಯಿಂದ ಜಿಲ್ಲಾ ಕೇಂದ್ರಕ್ಕೆ ಸ್ಥಳಾಂತರಗೊಂಡು, ಖಾಸಗಿ ಶಾಲೆಯೊಂದಕ್ಕೆ ಮಗನನ್ನು ದಾಖಲಿಸಿ, ದುಬಾರಿ ಶುಲ್ಕವನ್ನು ನೀಡುತ್ತಿದ್ದಾರೆ. ಮಗನ ವಿದ್ಯಾಭ್ಯಾಸವೇ ಏಕೈಕ ಉದ್ದೇಶವಾಗಿರುವ ಕಾರಣ ಸಹಜವಾಗಿ ಮಗನ ಬಗ್ಗೆ ನಿರೀಕ್ಷೆಯೂ ಹೆಚ್ಚಿದೆ.

ಮಗ ಯಾವಾಗಲೂ ಓದಲಿ, ಹೆಚ್ಚು ಅಂಕ ಪಡೆದು ತರಗತಿಗೆ ಮೊದಲನೆಯವನಾಗಲಿ ಎಂಬ ಆಸೆ ಪೋಷಕರದು. ಕೋವಿಡ್ ಉಲ್ಬಣಿಸಿದ ಕಾಲದಲ್ಲಿ ತರಗತಿಗಳಿಗೆ ಹಾಜರಾಗದೆ ಇದ್ದ ಪರಿಣಾಮವೋ ಏನೋ ಪರೀಕ್ಷೆಗಳಲ್ಲಿ ಪಡೆದ ಅಂಕಗಳು ಅವನಿಗೆ ಕಡಿಮೆಯಾಗಿವೆ. ಇದರಿಂದ ಹತಾಶೆಗೊಂಡ ಪೋಷಕರು 'ನೀನು ಉಪಯೋಗಕ್ಕೆ ಬಾರದವನು', 'ಹೀಗಾದರೆ ನಿನ್ನ ಮುಂದಿನ ಜೀವನ ಕಷ್ಟ', 'ನಿನಗಾಗಿ ನಾವು ಎಷ್ಟು ಕಷ್ಟಪಡುತ್ತಿದ್ದೇವೆ ಗೊತ್ತಾ' ಎಂಬಂಥ ಮಾತುಗಳನ್ನು ಆಡುತ್ತಾ ಅವನನ್ನು ಒಮ್ಮೆ ಮೂದಲಿಸುತ್ತಾ, ಇನ್ನೊಮ್ಮೆ ಚೆನ್ನಾಗಿ ಓದಬೇಕು ಎಂದು ಪುಸಲಾಯಿಸುತ್ತಾ ಇದ್ದರು. ಮಗನನ್ನು ಹೇಗಾದರೂ ಮಾಡಿ ಚೆನ್ನಾಗಿ ಓದಿಸಬೇಕು ಎಂಬ ಹಟಕ್ಕೆ ಬಿದ್ದು ಮಾಹಿತಿಗಾಗಿ ತಡಕಾಡುತ್ತಿದ್ದಾಗ ಆ ವಿಡಿಯೊವನ್ನು ಗಮನಿಸಿ, ಪರಿಹಾರಕ್ಕಾಗಿ ಸಮಾಲೋಚನೆಗೆ ಕರೆ ಮಾಡಿದರು.

ಮಾತಿನ ನಂತರ ಪೋಷಕರಿಗೆ ನೀಡಿದ ಒಂದಷ್ಟು ಸಲಹೆಗಳು ಹೀಗಿವೆ: 'ಅತಿ ನಿರೀಕ್ಷೆಯ ಕಾರಣದಿಂದ ನಿಮ್ಮ ಮಗನಿಗೆ ಮನೆಯಲ್ಲಿ ಉಸಿರುಗಟ್ಟಿಸುವ ವಾತಾವರಣವನ್ನು ಸೃಷ್ಟಿ ಮಾಡಿದ್ದೀರಿ. ಇದರಿಂದ ಅವನಿಗೆ ಓದಿನಲ್ಲಿ ಆಸಕ್ತಿ ಕುಂದಿದೆ. ಪದೇ ಪದೇ ಮೂದಲಿಕೆ, ಹಂಗಿಸುವಿಕೆಯ ಮಾತುಗಳಿಂದ ಅವನಲ್ಲಿ ಕೀಳರಿಮೆಯ ಭಾವನೆ ಮೂಡಿದ್ದು, ಅವನ ಆತ್ಮವಿಶ್ವಾಸ ಪಾತಾಳ ಸೇರಿದೆ. ಅವನ ಕುರಿತಾಗಿ ಪದೇ ಪದೇ ನೀವಾಡುತ್ತಿರುವ ನಕಾರಾತ್ಮಕ ಹೇಳಿಕೆಗಳನ್ನು ತಕ್ಷಣ ನಿಲ್ಲಿಸಿ. ಅವನಲ್ಲಿನ ಒಳ್ಳೆಯ ಗುಣ, ಸ್ವಭಾವಗಳನ್ನು ಗುರುತಿಸಿ, ಸಾಂದರ್ಭಿಕವಾಗಿ ಪ್ರಶಂಸೆ ಮಾಡಿ. ಅವನ ಓದು, ಬರಹಗಳಲ್ಲಿ ಒಳ್ಳೆಯ ಅಂಶಗಳನ್ನು ಗಮನಿಸಿ. 'ನಿನ್ನ ಬರವಣಿಗೆ ಮುದ್ದಾಗಿದೆ' (ಅವನ ಬರವಣಿಗೆ ಚೆನ್ನಾಗಿರುವುದನ್ನು ಅವರು ಈ ಮೊದಲು ಗುರುತಿಸಿದ್ದರು), 'ನೀನು ಜಾಣ', 'ನಿನಗೆ ಉತ್ತಮ ಭವಿಷ್ಯವಿದೆ' ಎಂಬಂಥ ಮಾತುಗಳನ್ನು ಹೇಳಿ'.

ಮೂರು ವಾರ ಕಳೆದ ಮೇಲೆ ಅವರು ದೂರವಾಣಿ ಕರೆ ಮಾಡಿ, ತಮ್ಮ ಮಗ ಈಗ ಪರವಾಗಿಲ್ಲ ಎಂದು ತಿಳಿಸಿದರಲ್ಲದೆ, ಸ್ವಲ್ಪ ಮಟ್ಟಿಗೆ ಸಮಾಧಾನವನ್ನೂ ವ್ಯಕ್ತಪಡಿಸಿದರು. ಆದರೆ ಮಗನ ವ್ಯಥೆ ಬೇರೆಯದೇ ಆಗಿತ್ತು. 'ನನಗೆ ಆಟವಾಡಲು ಅವಕಾಶ ನೀಡುತ್ತಿಲ್ಲ. ಎಲ್ಲಾ ಸ್ನೇಹಿತರು ಆಟವಾಡುವಾಗ ನನಗೂ ಆಡಬೇಕೆನಿಸುತ್ತದೆ. ನನಗೆ ಆ ಸಮಯದಲ್ಲಿ ಓದಿನತ್ತ ಗಮನ ಕೊಡಲು ಆಗುತ್ತಿಲ್ಲ. ನಾನು ಏನು ಮಾಡಬೇಕು' ಎಂಬುದು ಅವನ ಮುಗ್ಧ ಪ್ರಶ್ನೆಯಾಗಿತ್ತು.

ಮಕ್ಕಳು ಆಟವಾಡುವ ಸಮಯದಲ್ಲೂ ಓದಬೇಕೆಂದು ಅನೇಕ ಪೋಷಕರು ಅಪೇಕ್ಷಿಸುತ್ತಾರೆ. ಆಟವಾಡಲು ಅವಕಾಶ ನೀಡಿ, ಇಂತಿಷ್ಟು ಸಮಯಕ್ಕೆ ಆಟ ಮುಗಿಸಿ ಹಿಂತಿರುಗಬೇಕು ಎಂದು ತಿಳಿಹೇಳಿದರೆ, ಅವರು ಆಟವಾಡಿ ಬಂದ ನಂತರ ಓದಿನಲ್ಲಿ ತೊಡಗಿಕೊಳ್ಳುತ್ತಾರೆ. ಇದು ತಕ್ಷಣಕ್ಕೆ ಆಗದಿದ್ದರೂ ಪದೇ ಪದೇ ತಿಳಿಹೇಳಿದರೆ ಮಕ್ಕಳು ಖಂಡಿತವಾಗಿಯೂ ಕೇಳುತ್ತಾರೆ.

ಸಂಶೋಧನೆಗಳ ಪ್ರಕಾರ, ಮಕ್ಕಳ ಕುರಿತಾದ ಪೋಷಕರ ನಿರೀಕ್ಷೆ, ಆಕಾಂಕ್ಷೆಗಳು ಮಕ್ಕಳ ಶೈಕ್ಷಣಿಕ ಸಾಧನೆಗೆ ಅನುಕೂಲ ಕಲ್ಪಿಸುತ್ತವಾದರೂ ಅವರ ಕುರಿತಾದ ಪೋಷಕರ ಅತಿ ಮತ್ತು ಅಸಹಜ ಆಕಾಂಕ್ಷೆ, ನಿರೀಕ್ಷೆಗಳು ಶೈಕ್ಷಣಿಕ ಸಾಧನೆ ಕುಂಠಿತವಾಗಲು ಕಾರಣವಾಗುತ್ತವೆ.



ಶೈಕ್ಷಣಿಕ ಸಾಧನೆ ಕುರಿತ ತಮ್ಮ ನಿರೀಕ್ಷೆಗಳು ತಲೆಕೆಳಗೆ ಆಗುವಂತಹ ಸಾಧನೆಯನ್ನು ಮಕ್ಕಳು ತೋರಿದಲ್ಲಿ ಪೋಷಕರು ಹತಾಶೆಗೊಂಡು ಅವರಿಗೆ ಬಯ್ಯುವುದು, ಹೀಯಾಳಿಸುವುದು, ದೈಹಿಕವಾಗಿ ಹಲ್ಲೆ ಮಾಡುವುದನ್ನು ಮಾಡುತ್ತಾರೆ. ಇದರಿಂದ ಮಕ್ಕಳ ಶೈಕ್ಷಣಿಕ ಸಾಧನೆಯ ಮಟ್ಟ ಇನ್ನಷ್ಟು ಕುಸಿಯುತ್ತದೆ.

ಮಕ್ಕಳನ್ನು ಇತರ ಮಕ್ಕಳೊಂದಿಗೆ ಹೋಲಿಸದೆ, ಅವರು ಉತ್ತಮ ವರ್ತನೆ ತೋರಿದಾಗ ಅಥವಾ ಸಣ್ಣಮಟ್ಟದ ಶೈಕ್ಷಣಿಕ ಸಾಧನೆ ಮಾಡಿದರೂ ಮೆಚ್ಚುಗೆ ವ್ಯಕ್ತಪಡಿಸಿ ಪ್ರೇರಣೆ ನೀಡುತ್ತಾ ಇದ್ದಲ್ಲಿ, ಅವರ ಸಾಧನೆ ನಿಧಾನವಾಗಿ ಉತ್ತಮಗೊಳ್ಳುತ್ತಾ ಹೋಗುತ್ತದೆ.

ಮಕ್ಕಳನ್ನು ಅರ್ಥಮಾಡಿಕೊಂಡು, ಅವರ ಬೆಳವಣಿಗೆಗೆ ಅನುಕೂಲ ಕಲ್ಪಿಸುವ ಕಾರ್ಯವನ್ನು ಪೋಷಕರು ಮಾಡಬೇಕು. ಪರೀಕ್ಷೆಗಳ ಅಂಕಗಳನ್ನು ಮಾತ್ರ ಆಧರಿಸಿ ಮಕ್ಕಳ ಸಾಧನೆ ಅಳೆಯುವುದು ಮತ್ತು ಅವರನ್ನು ದಡ್ಡ, ಉಪಯೋಗಕ್ಕೆ ಬಾರದವ ಎಂದು ಹಣೆಪಟ್ಟಿ ಹಚ್ಚುವುದು ಅಪಾಯಕಾರಿ. ಪೋಷಕರ ಅಸಹಜ ನಿರೀಕ್ಷೆಗಳು ಮಕ್ಕಳನ್ನು ತೀವ್ರ ಖಿನ್ನತೆಗೆ ದೂಡಿ, ಅವರಲ್ಲಿ ನಾನಾ ಸಮಸ್ಯೆಗಳಿಗೆ ಕಾರಣವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ವಾಚಕರ ವಾಣಿ

ಮಾಂಸಾಹಾರ: ತಪ್ಪುಗ್ರಹಿಕೆ ಸಲ್ಲದು

ಮಾಂಸಾಹಾರ ಸೇವಿಸಿ ದೇಗುಲ ಪ್ರವೇಶಿಸುವುದರ ಬಗ್ಗೆ ರಾಜ್ಯದಾದ್ಯಂತ ವಿಸ್ತೃತ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಕೆಲವೊಂದು ವಿಷಯಗಳನ್ನು ಮರೆಯದಿರೋಣ. ಮಾನವ ಮೂಲಭೂತವಾಗಿ ಸಸ್ಯಾಹಾರಿಯೂ ಹೌದು, ಮಾಂಸಾಹಾರಿಯೂ ಹೌದು. ಅವನಿಗೆ ಬಾಚಿಹಲ್ಲು, ಕೋರೆಹಲ್ಲು, ಅರೆಯುವ ಹಲ್ಲು ಎಲ್ಲವೂ ಇರುವುದೇ ಇದಕ್ಕೆ ಪುರಾವೆ. ಶಾಕಾಹಾರಿಗಳಿಗೆ ಚುರುಕು ಬುದ್ಧಿ ಎಂಬುದು ತಪ್ಪು ಕಲ್ಪನೆ. ಶಾಕಾಹಾರಿಗಳಾದ ಆನೆ, ಹಸು, ಒಂಟೆಯಂತಹವುಗಳಿಗಿಂತ ಮಾಂಸಾಹಾರಿಗಳಾದ ಹುಲಿ, ಚಿರತೆ, ತೋಳ ಹೆಚ್ಚು ಚುರುಕು ಬುದ್ಧಿಯುಳ್ಳವು.

ಅಹಿಂಸೆಯ ಪ್ರತಿಪಾದಕನಾದ ಬುದ್ಧ, ಯಾಗಗಳಲ್ಲಿ ಪ್ರಾಣಿಹತ್ಯೆ ಖಂಡಿಸಿ, 'ನಮ್ಮ ಪಾಪ ಪರಿಹಾರಕ್ಕಾಗಿ ಪ್ರಾಣಿಗಳ ವಧೆ ಬೇಡ' ಎಂದ. ಆದರೆ ಆಹಾರಕ್ಕಾಗಿ ಪ್ರಾಣಿವಧೆಯನ್ನು ಬಹಿಷ್ಕರಿಸಲಿಲ್ಲ. ಸನಾತನ ಧರ್ಮದ ಅನೇಕ ಗ್ರಂಥಗಳಲ್ಲಿ, ವಿಶೇಷವಾಗಿ 'ಅಷ್ಟಾಂಗ ಹೃದಯಂ' ಎಂಬ ಆಯುರ್ವೇದ ಗ್ರಂಥದಲ್ಲಿ ಯಾವ ಕಾಯಿಲೆಗೆ ಯಾವ ಪ್ರಾಣಿಯ ಮಾಂಸವು ಔಷಧದಂತೆ ಕೆಲಸ ಮಾಡುತ್ತದೆ ಎಂದು ವಿವರಿಸಲಾಗಿದೆ. ಪೂರ್ಣ ಸಸ್ಯಾಹಾರಿಗಳು ಅಂದರೆ ಪ್ರಾಣಿಜನ್ಯ ಹಾಲು, ಮೊಸರು, ತುಪ್ಪ, ಮೊಟ್ಟೆಯನ್ನು ಸಹಾ ತಿನ್ನದ 'ವೇಗನ್' ಪಂಥದವರು. ಈ ರೀತಿ ಮಾಡುವುದರಿಂದ ದೇಹದಲ್ಲಿ ಪೌಷ್ಟಿಕಾಂಶದ ಕೊರತೆ ಉಂಟಾಗಿ, ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ಅಂತಿಮವಾಗಿ ಮಾಂಸಾಹಾರ, ಸಸ್ಯಾಹಾರ ಇವೆರಡರಲ್ಲಿ ಯಾವುದೂ ಶ್ರೇಷ್ಠವಲ್ಲ, ಯಾವುದೂ ಅಧಮವಲ್ಲ.

ಡಾ. ಟಿ.ಜಯರಾಂ, ಕೋಲಾರ

ಪಾಳೆಗಾರಿಕೆ ಸಂಸ್ಕೃತಿಯ ಲಕ್ಷಣ

ಉತ್ತರಪ್ರದೇಶದ ಶಾಲೆಯೊಂದರಲ್ಲಿ ಸಮವಸ್ತ್ರ ಧರಿಸದೆ ಬಂದ ದಲಿತ ಬಾಲಕಿಯೊಬ್ಬಳ ಮೇಲೆ ಗ್ರಾಮದ ಮಾಜಿ ಪ್ರಧಾನರೊಬ್ಬರು ಹಲ್ಲೆ ಮಾಡಿ ಶಾಲೆಯಿಂದ ಹೊರಕ್ಕೆ ಕಳಿಸಿದ್ದಾರೆ ಎಂದು ವರದಿಯಾಗಿದೆ. ಇದು, ಅತ್ಯಂತ ಅಮಾನವೀಯ. ಸಮವಸ್ತ್ರ ಧರಿಸಲಿಕ್ಕಾಗದ ನಿಜ ಕಾರಣವನ್ನು ಬಾಲಕಿ ಹೇಳಿದರೂ ಕೇಳಿಸಿಕೊಳ್ಳದೆ ಇಂತಹ ಕೃತ್ಯಕ್ಕೆ ಮುಂದಾಗಿರುವುದು ತುಂಬ ಕ್ರೂರವಾದುದು. ಹಾಗೆಯೇ ಪ್ರಬಲ ಜಾತಿಗಳಲ್ಲಿ ಮಡುಗಟ್ಟಿರುವ ಜಾತಿ ಶ್ರೇಷ್ಠತೆಯ ಅಹಂಕಾರವನ್ನೂ ಅದಕ್ಕೆ ಸಂಬಂಧಿಸಿದ ಅಸಹನೆಯನ್ನೂ ಈ ಪ್ರಕರಣ ಸ್ಪಷ್ಟಪಡಿಸುತ್ತಿದೆ. ದೌರ್ಜನ್ಯ ಎಸಗಿದ ವ್ಯಕ್ತಿಯು ಆ ಶಾಲೆಗೆ ಸಂಬಂಧಿಸಿದ ವ್ಯಕ್ತಿಯಲ್ಲ ಎಂಬುದು ಇನ್ನೂ ಗಾಸಿಗೊಳಿಸುವ ಸಂಗತಿ. ಇದು ಕೂಡ ನಮ್ಮಲ್ಲಿ ಅಡಗಿರುವ ಪಾಳೆಗಾರಿಕೆ ಸಂಸ್ಕೃತಿಯ ಸ್ಪಷ್ಟ ಲಕ್ಷಣವಾಗಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಸ್ಮಾರ್ಟ್‌ಫೋನ್ ಪ್ರಮುಖ ಆದ್ಯತೆಯೇ?

ರಾಜಸ್ಥಾನ ಸರ್ಕಾರವು 1.35 ಕೋಟಿ ಮಹಿಳೆಯರಿಗೆ ಒಟ್ಟು ₹ 12,000 ಕೋಟಿ ವೆಚ್ಚದಲ್ಲಿ ಸ್ಮಾರ್ಟ್‌ಫೋನ್‌ಗಳನ್ನು ನೀಡಲು ಮುಂದಾಗಿದೆ. ಚುನಾವಣಾ ಗಿಮಿಕ್‌ಗಾಗಿ ಇಂತಹ ಯೋಜನೆಗಳನ್ನು ರೂಪಿಸುವುದಕ್ಕಿಂತ, ಜೀವನಕ್ಕೆ ಅವಶ್ಯವಾದ ನೀರು, ವಿದ್ಯುತ್ ಅನ್ನು ಸಮರ್ಪಕವಾಗಿ ಪೂರೈಸುವುದು ಸಮಂಜಸ. ಉಚಿತವಾಗಿ ದೊರೆಯುವ ಮಳೆನೀರು, ಸೌರಶಕ್ತಿಯ ಸದ್ಬಳಕೆಗೆ ಗಮನ ಹರಿಸಬೇಕು. ಮನೆ ತಾರಸಿ ಮೇಲೆ ಬೀಳುವ ಮಳೆನೀರನ್ನು ಸಂಗ್ರಹಿಸುವುದರಿಂದ, ಸೌರಫಲಕ ಅಳವಡಿಸಿ ವಿದ್ಯುತ್ ನೀಡುವುದರಿಂದ ನೀರು, ವಿದ್ಯುತ್ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸಬಹುದು. ಜನರ ಜೀವನಮಟ್ಟ ಹೆಚ್ಚಿಸಬಹುದು.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ರೈಲಿಗಾಗಿ ಕಾದಿವೆ ಆಸೆ ತುಂಬಿದ ಕಂಗಳು

ರೈಲ್ವೆ ಮಂಡಳಿಯು ಸೋಲಾಪುರ- ಮೀರಜ್ ರೈಲನ್ನು ಅತ್ತ ಕೊಲ್ಹಾಪುರದವರೆಗೆ ಇತ್ತ ಕಲಬುರಗಿಯವರೆಗೆ ವಿಸ್ತರಿಸಲು ಕೊನೆಗೂ ಅನುಮೋದನೆ ನೀಡಿರುವುದು ಸಂತಸದ ಸಂಗತಿ. ಇದರಿಂದಾಗಿ, ಕಲಬುರಗಿ ಜನತೆಗೆ ಪಂಢರಾಪುರದ ವಿಠಲ ಹಾಗೂ ಕರವೀರಪುರದ ಲಕ್ಷ್ಮಿಯ ದರ್ಶನಕ್ಕೆ ನೇರ ರೈಲು ಸೇವೆ ಲಭಿಸಿದಂತಾಗಿದೆ. ಅಲ್ಲಿನವರಿಗೆ ಗಾಣಗಾಪುರದ ದತ್ತಾತ್ರೇಯರ ದರ್ಶನಕ್ಕೆ ರೈಲು ಸಿಕ್ಕಿದೆ. ಆದರೆ, ರೈಲು ಸೇವೆಯನ್ನು ವಿಸ್ತರಿಸಲು ರೈಲ್ವೆ ಮಂಡಳಿ ಹಸಿರು ನಿಶಾನೆ ತೋರಿ ತಿಂಗಳಾದರೂ ಕೇಂದ್ರ ರೈಲ್ವೆ ಮತ್ತು ಸೋಲಾಪುರದ ವಿಭಾಗೀಯ ರೈಲ್ವೆ ಅಧಿಕಾರಿಗಳು ರೈಲು ಸೇವೆಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳದಿರುವುದು ಬೇಸರದ ಸಂಗತಿ. ಸೋಲಾಪುರ- ಗುಂತಕಲ್- ಕಲಬುರಗಿ ಡೆಮು ರೈಲಿನ ಪುನರಾರಂಭಕ್ಕೆ ಕೂಡಾ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ. ಈ ರೈಲು ಸೇವೆಯನ್ನು ತ್ವರಿತವಾಗಿ ಆರಂಭಿಸಲಿ.

ವೆಂಕಟೇಶ್ ಮುದಗಲ್, ಕಲಬುರಗಿ

ವೀರಪ್ಪನ್ ಎಂಬ ಕರಾಳ ಅಧ್ಯಾಯ

'ಪ್ರಜಾವಾಣಿ'ಯ '25 ವರ್ಷಗಳ ಹಿಂದೆ' ಅಂಕಣದಲ್ಲಿ ದಂತಚೋರ, ಕಾಡುಗಳ್ಳ ವೀರಪ್ಪನ್‌ಗೆ ಸಂಬಂಧಿಸಿದ ಸುದ್ದಿ ಕೆಲ ದಿನಗಳಿಂದ ಸತತವಾಗಿ ಪ್ರಕಟವಾಗುತ್ತಿದೆ. ಆ ಕಾಲದಲ್ಲಿ ಈ ಸಂಗತಿಯು ಪತ್ರಿಕೆಗಳ ಮುಖಪುಟದಲ್ಲಿ ಹಲವು ವಾರಗಳ ಕಾಲ ಸುದ್ದಿಯಾಗಿ ಸಂಚಲನ ಹುಟ್ಟಿಸಿತ್ತು!

ತಮಿಳುನಾಡು ಮತ್ತು ಕರ್ನಾಟಕದ ನಡುವಿನ ಅರಣ್ಯದಲ್ಲಿ ದಂತಕ್ಕಾಗಿ ಆನೆಗಳ ಹತ್ಯೆ, ಶ್ರೀಗಂಧ ಕಳ್ಳಸಾಗಣೆ ಮಾಡಿಕೊಂಡು ಕಾಡಿನಲ್ಲಿ ವಾಸವಿದ್ದ ವೀರಪ್ಪನ್, ಕರಾಳ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದ. ಅರಣ್ಯಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಸೇರಿದಂತೆ 120ಕ್ಕೂ ಹೆಚ್ಚು ಜನರನ್ನು ಅಮಾನುಷವಾಗಿ ಕೊಂದಿದ್ದ. ದೈಹಿಕವಾಗಿ ಕಡ್ಡಿ ಪೈಲ್ವಾನ್ ಆಗಿದ್ದರೂ ತನ್ನ ಹುರಿ ಮೀಸೆಯಿಂದ ಭಯ ಹುಟ್ಟಿಸುವಂತಿದ್ದ. ಆಗ ಅಂತಹ ಮೀಸೆ ಹೊಂದಿದ್ದ ಹಲವರನ್ನು ವೀರಪ್ಪನ್ ಎಂದು ಶಂಕಿಸಿ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದೂ ಇದೆ! 2004ರಲ್ಲಿ ಪೊಲೀಸ್ ಕಾರ್ಯಪಡೆಯಿಂದ ಹತನಾಗಿದ್ದು ಕಾಡುಗಳ್ಳನ ಅಧ್ಯಾಯದ ಕೊನೆ. ಆತನ ಆಗಿನ ಕರಾಳಮುಖ, ಕೃತ್ಯಗಳನ್ನು ನೆನಪಿಸಿಕೊಂಡರೆ ಈಗಲೂ ಮೈ ಜುಮ್ಮೆನ್ನುವುದು.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸಂಪತ್ತು ಇಲ್ಲದವರಿಗೆ ಸವಲತ್ತೂ ಇಲ್ಲ

ದೇಶದಲ್ಲಿ ಸಂಪತ್ತಿನ ಹಂಚಿಕೆಯಲ್ಲಿ ಅಸಮಾನತೆ ಇದೆ. ಸಂಪತ್ತಿನ ಅಸಮಾನ ಹಂಚಿಕೆಯು, ಸವಲತ್ತುಗಳ ಹಂಚಿಕೆಯಲ್ಲಿನ ಅಸಮಾನತೆಗೂ ಕಾರಣವಾಗಿದೆ. ಕಡುಬಡವರು ಗೌರವಯುತವಾಗಿ ಜೀವನ ನಡೆಸಲು ಅಗತ್ಯವಾದ ಕನಿಷ್ಠ ಮೂಲಸೌಕರ್ಯಗಳಿಂದಲೂ ವಂಚಿತರಾಗಿದ್ದಾರೆ. ಅಂತಹ ಮೂಲ ಸೌಕರ್ಯಗಳನ್ನು ಸರ್ಕಾರವು ಒದಗಿಸಿದರೂ, ಅದು ಕಡುಬಡವರ ಕೈಗೆ ಎಟುಕುವುದಿಲ್ಲ ಎನ್ನುತ್ತದೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ವರದಿ. ಸಂಪತ್ತು ಮತ್ತು ಸವಲತ್ತಿನ ಅಸಮಾನ ಹಂಚಿಕೆಯು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಭಿನ್ನವಾಗಿದೆ. ಧರ್ಮದಿಂದ ಧರ್ಮಕ್ಕೂ ಈ ವಿಚಾರದಲ್ಲಿ ಭಾರಿ ವ್ಯತ್ಯಾಸವಿದೆ ಎಂಬುದನ್ನು ಈ ವರದಿಯ ದತ್ತಾಂಶಗಳು ತೋರಿಸಿವೆ

ಪ್ರಜಾವಾಣಿ ವಾರ್ತೆ

ಸಂಪತ್ತು ಜನರ ಜೀವನ ಮಟ್ಟವನ್ನು ನಿರ್ಧರಿಸುತ್ತದೆ. ಹೆಚ್ಚು ಸಂಪತ್ತು ಹೊಂದಿರುವವರು ಎಲ್ಲಾ ಸ್ವರೂಪದ ಸವಲತ್ತುಗಳನ್ನು ಪಡೆಯುತ್ತಾರೆ. ಸಂಪತ್ತು ಇಲ್ಲದವರಿಗೆ ಸವಲತ್ತೂ ಇರುವುದಿಲ್ಲ ಎನ್ನುತ್ತದೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿಯ ದತ್ತಾಂಶಗಳು (ಎನ್‌ಎಫ್‌ಎಚ್‌ಎಸ್‌-5). ಬಡವರಿಗೆ ಸರ್ಕಾರವು ಸವಲತ್ತುಗಳನ್ನು ನೀಡಿದರೂ, ಪೂರ್ಣ ಪ್ರಮಾಣದಲ್ಲಿ ಪಡೆದುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ ಎಂದು ಈ ವರದಿಯಲ್ಲಿ ವಿಶ್ಲೇಷಿಸಲಾಗಿದೆ.


ಈ ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರನ್ನು ಸಂಪತ್ತು ಮತ್ತು ಸವಲತ್ತುಗಳ ಆಧಾರದಲ್ಲಿ ಐದು ವರ್ಗಗಳನ್ನಾಗಿ ವರ್ಗೀಕರಿಸಲಾಗಿದೆ. ಸಂಪತ್ತಿನ ಜತೆಗೆ ಸುಸಜ್ಜಿತ ಸೂರು, ಶುದ್ಧ ಕುಡಿಯುವ ನೀರು, ಎಲ್‌ಪಿಜಿ ಸೌಲಭ್ಯ, ಉತ್ತಮ ಆರೋಗ್ಯ ಸೇವೆಯ ಲಭ್ಯತೆ, ಟಿ.ವಿ, ಮೊಬೈಲ್‌–ಇಂಟರ್ನೆಟ್‌, ಓಡಾಡಲು ವಾಹನಗಳು ಇದ್ದವರು ಸಾಧಾರಣ/ಹೆಚ್ಚು/ಅತಿಹೆಚ್ಚು ಸಂಪತ್ತು ಮತ್ತು ಸವಲತ್ತು ಹೊಂದಿರುವ ವರ್ಗದಲ್ಲಿದ್ದಾರೆ. ಈ ಸವಲತ್ತುಗಳು ಐಷಾರಾಮದ ಸ್ವರೂಪ ಪಡೆದಂತೆಲ್ಲಾ ಅವರು ಈ ವರ್ಗೀಕರಣದಲ್ಲಿ ಮೇಲಿನ ಹಂತಕ್ಕೆ ಹೋಗುತ್ತಾರೆ. ಸಂಪತ್ತಿನ ಜತೆಗೆ ಈ ಸವಲತ್ತುಗಳಿಂದ ವಂಚಿತರಾದವರು ಈ ವರ್ಗದ ಕೆಳಹಂತದ ವರ್ಗಗಳಲ್ಲಿ ಬರುತ್ತಾರೆ. ಸಂಪತ್ತು ಇಲ್ಲದವರು ಅಂದರೆ ಬಡವರು ಕನಿಷ್ಠ ಮೂಲಸೌಕರ್ಯಗಳಾದ ಶುದ್ಧ ಕುಡಿಯುವ ನೀರು, ನಿರಂತರ ವಿದ್ಯುತ್‌, ಎಲ್‌ಪಿಜಿ ಸಂಪರ್ಕದಿಂದ ವಂಚಿತರಾಗಿದ್ದಾರೆ. ಉದಾಹರಣೆಗೆ, ಬಡವರಿಗೆ ಸರ್ಕಾರವು ಎಲ್‌ಪಿಜಿ ಸಂಪರ್ಕವನ್ನು ಒದಗಿಸಿದರೂ ತದನಂತರದಲ್ಲಿ ಭರ್ತಿ ಸಿಲಿಂಡರ್‌ ಖರೀದಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಹೀಗೆ ಕಡು ಬಡತನದ ಮಟ್ಟ ಹೆಚ್ಚಿದಷ್ಟೂ, ಮೂಲಸೌಕರ್ಯಗಳ ಲಭ್ಯತೆ ಕಡಿಮೆಯಾಗುತ್ತದೆ ಎಂದು ವಿಶ್ಲೇಷಿಸಲಾಗಿದೆ.

ಸರ್ಕಾರವು ಸವಲತ್ತುಗಳನ್ನು ನೀಡಿದರೂ, ಬಡವರಿಗೆ ಅವುಗಳನ್ನು ಬಳಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದಕ್ಕೆ ಕರ್ನಾಟಕದ ಒಂದು ಕಾರ್ಯಕ್ರಮ ಸಾಕ್ಷಿಯಾಗಿದೆ. ರಾಜ್ಯದ ಹುಲಿ ಅಭಯಾರಣ್ಯಗಳ ಸಮೀಪದ ಗ್ರಾಮಗಳ ಜನರು ಉರುವಲಿಗಾಗಿ ಕಾಡಿಗೆ ಹೋಗುತ್ತಿದ್ದರು. ಅದನ್ನು ತಪ್ಪಿಸುವ ಉದ್ದೇಶದಿಂದ ಉಚಿತವಾಗಿ ಎಲ್‌ಪಿಜಿ ಸಂಪರ್ಕ ಒದಗಿಸಲಾಯಿತು. ಸಿಲಿಂಡರ್‌ ಬೆಲೆ ವಿಪರೀತ ಏರಿಕೆಯಾದ ಕಾರಣ ಎಲ್‌ಪಿಜಿ ಬಳಕೆ ಬಹುತೇಕ ಸ್ಥಗಿತವಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿದ್ದವು.

ಜೈನರು, ಸಿಖ್ಖರಲ್ಲಿ ಅತಿಶ್ರೀಮಂತರು ಹೆಚ್ಚು

- ಕೆಲವು ಧರ್ಮದ ಜನರಲ್ಲಿ ಅತಿಶ್ರೀಮಂತರ ಪ್ರಮಾಣ ಹೆಚ್ಚು ಇದೆ. ಅಂತಹ ಧರ್ಮಗಳಲ್ಲಿ ಕಡುಬಡವರ ಪ್ರಮಾಣ ತೀರಾ ಕಡಿಮೆ ಇದೆ
- ಜೈನ ಧರ್ಮದ ಶೇ 80ಕ್ಕಿಂತಲೂ ಹೆಚ್ಚು ಜನರು ಅತಿ ಶ್ರೀಮಂತರ ವರ್ಗದಲ್ಲಿ ಬರುತ್ತಾರೆ. ಈ ಧರ್ಮದಲ್ಲಿ ಕಡುಬಡವರ ಪ್ರಮಾಣ ಶೇ 1.6ರಷ್ಟು ಮಾತ್ರ
- ಸಿಖ್ ಧರ್ಮದಲ್ಲೂ ಸಂಪತ್ತು ಮತ್ತು ಸವಲತ್ತು ಇದೇ ಸ್ವರೂಪದಲ್ಲಿ ಹಂಚಿಕೆಯಾಗಿದೆ. ಈ ಧರ್ಮದಲ್ಲಿ ಅತಿ ಶ್ರೀಮಂತರ ಪ್ರಮಾಣ ಶೇ 59ರಷ್ಟು ಇದ್ದರೆ, ಕಡುಬಡವರ ಪ್ರಮಾಣ ಶೇ 1.6ರಷ್ಟು ಮಾತ್ರ
- ಸಂಪತ್ತು ಮತ್ತು ಸವಲತ್ತುಗಳ ಹಂಚಿಕೆ ಹಿಂದೂ ಹಾಗೂ ಮುಸ್ಲಿಮರಲ್ಲಿ ಒಂದೇ ಸ್ವರೂಪದಲ್ಲಿ ಇದೆ

ಪರಿಶಿಷ್ಟ ಪಂಗಡಗಳಲ್ಲಿ ಕಡುಬಡವರು ಹೆಚ್ಚು



ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಲ್ಲಿ ಕಡುಬಡವರು ಹೆಚ್ಚು. ಆದರೆ ಪರಿಶಿಷ್ಟ ಪಂಗಡಗಳಲ್ಲಿ ಕಡುಬಡವರ ಪ್ರಮಾಣ ಅತಿಹೆಚ್ಚು ಎನ್ನುತ್ತವೆ ಈ ದತ್ತಾಂಶಗಳು. ಪರಿಶಿಷ್ಟ ಪಂಗಡಗಳ ಜನರಲ್ಲಿ ಶೇ 46.4ರಷ್ಟು ಕಡು ಬಡವರಿದ್ದಾರೆ. ಈ ಜನರು ಕನಿಷ್ಠ ಮೂಲಸೌಕರ್ಯಗಳಿಂದಲೂ ವಂಚಿತರಾಗಿದ್ದಾರೆ. ಪರಿಶಿಷ್ಟ ಪಂಗಡಗಳಲ್ಲಿ ಶ್ರೀಮಂತರು ಮತ್ತು ಅತಿ ಶ್ರೀಮಂತರ ಪ್ರಮಾಣ ತೀರಾ ಕಡಿಮೆ ಇದೆ. ಪರಿಶಿಷ್ಟ ಪಂಗಡಗಳ ಜನರಿಗೆ ಹೋಲಿಸಿದರೆ, ಪರಿಶಿಷ್ಟ ಜಾತಿಗಳ ಜನರಲ್ಲಿ ಸಂಪತ್ತು ಮತ್ತು ಸವಲತ್ತಿನ ಹಂಚಿಕೆಯ ಸ್ವರೂಪ ಭಿನ್ನವಾಗಿದೆ.

ಅರ್ಧದಷ್ಟು ಕುಟುಂಬಗಳಿಗಷ್ಟೇ ಜಮೀನು ಒಡೆತನ

ದೇಶದಲ್ಲಿ ಕೃಷಿಯನ್ನು ನಂಬಿಕೊಂಡಿರುವ ಕೋಟ್ಯಂತರ ಕುಟುಂಬಗಳಿವೆ. ಆದರೆ ಕೃಷಿ ಜಮೀನುಗಳ ಒಡೆತನದ ವಿಚಾರದಲ್ಲಿ ಸಾಕಷ್ಟು ಅಂತರವಿದೆ. ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಸಹ, ಗ್ರಾಮೀಣ ಪ್ರದೇಶದ ಶೇ 47.8ರಷ್ಟು ಕುಟುಂಬಗಳಿಗೆ ಇಂದಿಗೂ ಕೃಷಿ ಜಮೀನಿನ ಒಡೆತನ ಇಲ್ಲ. ಸರಿಸುಮಾರು ಅರ್ಧದಷ್ಟು ಕುಟುಂಬಗಳು ಇತರರ ಜಮೀನುಗಳ ಮೇಲೆ ಅವಲಂಬಿತರಾಗಿದ್ದಾರೆ ಎಂದು ರಾಷ್ಟ್ರೀಯ ಕುಟುಂಬ ಕಲ್ಯಾಣ ಸಮೀಕ್ಷೆ ವರದಿ ಅಭಿಪ್ರಾಯಪಟ್ಟಿದೆ.


ಕೃಷಿ ಜಮೀನುಗಳ ನೀರಾವರಿಯ ಸ್ವರೂಪದ ಆಧಾರದಲ್ಲಿ, ಅವುಗಳನ್ನು ವರ್ಗೀಕರಣ ಮಾಡಲಾಗಿದೆ. ಪೂರ್ಣ ಪ್ರಮಾಣದಲ್ಲಿ ನೀರಾವರಿಯನ್ನೇ ಅವಲಂಬಿಸಿರುವ ಕುಟುಂಬಗಳ ಪ್ರಮಾಣ ಶೇ 1.3ರಷ್ಟು ಮಾತ್ರ. ಇಷ್ಟು ಅತ್ಯಲ್ಪ ಪ್ರಮಾಣದ ಕುಟುಂಬಗಳು ಮಾತ್ರ ವರ್ಷಪೂರ್ತಿ ನೀರಾವರಿಯನ್ನು ಬಳಸಿಕೊಂಡು ಕೃಷಿ ಮಾಡುತ್ತಿವೆ.

ಕೊಳವೆ ಬಾವಿ, ಕಾಲುವೆ ಮೊದಲಾದ ಯಾವುದೇ ಸ್ವರೂಪದ ನೀರಾವರಿ ಸೌಲಭ್ಯ ಇಲ್ಲದ ಕೃಷಿ ಜಮೀನುಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆ ಶೇ 11.9ರಷ್ಟಿದೆ. ತಮ್ಮ ಜಮೀನಿನ ಸ್ವಲ್ಪ ಭಾಗವನ್ನು ನೀರಾವರಿ ಸೌಲಭ್ಯಕ್ಕೆ ಒಳಪಡಿಸಿರುವ ಹಾಗೂ ಇನ್ನೊಂದಿಷ್ಟು ಜಮೀನು ನೀರಾವರಿ ಒದಗಿಸಲು ಸಾಧ್ಯವಾಗದ ಕುಟುಂಬಗಳ ಪ್ರಮಾಣ ಶೇ 39ರಷ್ಟಿದೆ. ಈ ಕುಟುಂಬಗಳ ಬಳಿ ನೀರಾವರಿ ಹಾಗೂ ನೀರಾವರಿಯೇತರ – ಎರಡೂ ಸ್ವರೂಪದ ಕೃಷಿ ಜಮೀನುಗಳಿವೆ.

ವಾಸಕ್ಕೆ ಸೂರು ಹೊಂದಿರುವ ಕುಟುಂಬಗಳು ಎಷ್ಟಿವೆ ಎಂಬುದರ ಮೇಲೂ ಈ ವರದಿ ಬೆಳಕು ಚೆಲ್ಲಿದೆ. ದೇಶದ ಗ್ರಾಮೀಣ ಪ್ರದೇಶದ ಶೇ 76ರಷ್ಟು ಕುಟುಂಬಗಳು ಸ್ವಂತ ಸೂರು ಹೊಂದಿವೆ. ಆದರೆ, ಶೇ 24ರಷ್ಟು ಕುಟುಂಬಗಳು ಇನ್ನೂ ಸ್ವಂತ ಸೂರು ಹೊಂದಿಲ್ಲ ಎಂದು ವರದಿಯಲ್ಲಿ ವಿವರಿಸಲಾಗಿದೆ.



ನಗರಗಳಲ್ಲಿ ಸಿರಿವಂತರು, ಹಳ್ಳಿಗಳಲ್ಲಿ ಬಡವರು ಹೆಚ್ಚು



ದೇಶದ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಜನರ ನಡುವೆ ಸಂಪತ್ತು ಹಾಗೂ ಸೌಲಭ್ಯಗಳ ವಿಚಾರದಲ್ಲಿ ಅಂತರ ಇರುವುದು ಕಂಡುಬಂದಿದೆ. ನಗರ ಪ್ರದೇಶದ ಮೊದಲ ಎರಡು ವರ್ಗಗಳಲ್ಲಿ (ಶೇ 46 ಮತ್ತು ಶೇ 29) ಎಲ್ಲ ರೀತಿಯ ಸವಲತ್ತುಗಳು ಹಾಗೂ ಸಂಪತ್ತು ಕೇಂದ್ರೀಕೃತವಾಗಿವೆ. ಗ್ರಾಮೀಣ ಭಾಗದಲ್ಲಿ ಇದಕ್ಕೆ ವ್ಯತಿರಿಕ್ತವಾದ ಚಿತ್ರಣವಿದೆ. ಸಂಪತ್ತು ಮತ್ತು ಸೌಲಭ್ಯಗಳು ಕಡಿಮೆ ಪ್ರಮಾಣದಲ್ಲಿ ಇರುವ ಕೊನೆಯ ಎರಡು ವರ್ಗಗಳಲ್ಲೇ ಅರ್ಧದಷ್ಟು (ಶೇ 54) ಜನಸಂಖ್ಯೆ ಕೇಂದ್ರೀಕೃತವಾಗಿದೆ. ಇದರರ್ಥ, ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಸಂಪತ್ತೂ ಇಲ್ಲ ಹಾಗೆಯೇ ಸೌಲಭ್ಯಗಳೂ ಇಲ್ಲ. ಅತಿಹೆಚ್ಚು ಸಂಪತ್ತು ಮತ್ತು ಸವಲತ್ತು ಹೊಂದಿರುವ ಜನರ ಪ್ರಮಾಣ ಹೆಚ್ಚು ಇರುವ ಪ್ರದೇಶಗಳಲ್ಲಿ ಚಂಡೀಗಡ (ಶೇ 79), ದೆಹಲಿ (ಶೇ 68) ಮತ್ತು ಪಂಜಾಬ್ (ಶೇ 61) ಮೊದಲ ಸಾಲಿನಲ್ಲಿವೆ. ಈ ವಿಚಾರದಲ್ಲಿ ಜಾರ್ಖಂಡ್, ಬಿಹಾರ ಮತ್ತು ಅಸ್ಸಾಂ ಕೊನೆಯ ಸಾಲಿನಲ್ಲಿವೆ.

ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿ–5

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 208

ಶಿವನ ಸೇವೆ ಮಾಡಿದ ಪಾರ್ವತಿ

ಸೇವೆ ಸಲ್ಲಿಸಲು ಪಾರ್ವತಿಗೆ ಅನುಮತಿ ನೀಡಿದ ಮಹಾಶಿವ, ನಂತರ ಹಿಮವಂತನನ್ನು ಉದ್ದೇಶಿಸಿ, 'ಎಲೈ ಪರ್ವತರಾಜನೆ, ನಿನ್ನ ರಮ್ಯವಾದ ತಪ್ಪಲಲ್ಲಿ ತಪವನ್ನಾಚರಿಸುತ್ತಾ ಆನಂದಮಯವೂ ಪರಮಾರ್ಥವೂ ಆದಂತಹ ನನ್ನ ಸ್ವರೂಪವನ್ನು ಧ್ಯಾನಿಸುವೆ. ಇಲ್ಲಿ ತಪವನ್ನಾಚರಿಸಲು ನನಗೆ ಅನುಮತಿಯನ್ನು ಕೊಡು' ಎಂದ.

ಶಂಕರನ ಮಾತನ್ನು ಹಿಮವಂತ ತಲೆಬಾಗಿ ನಮಿಸುತ್ತಾ ಹೇಳಿದ, 'ಓ ಮಹಾದೇವ, ಜಗತ್ತೆಲ್ಲವೂ ನಿನ್ನದು. ದೇವತೆಗಳು ದೈತ್ಯರು, ಮಾನವರು ಎಲ್ಲರೂ ನಿನ್ನವರು. ಹೀಗಿರಲು ಸಾಮಾನ್ಯನಾದ ನಾನು ನಿನಗೆ ಅನುಮತಿ ಕೊಡುವುದು ಎಂದರೇನು? ನೀನು ಅಪ್ಪಣೆ ಕೊಡಬೇಕಷ್ಟೇ. ನಾನು ನಿನ್ನ ಚರಣದಾಸ' ಎಂದ. ಹಿಮವಂತನ ಮಾತಿಗೆ ಶಂಕರ ಮಂದಹಾಸ ಬೀರಿ, ಧ್ಯಾನಮಗ್ನನಾದ.

ಶಂಕರನ ದರ್ಶನಕ್ಕೆ ಅನುಮತಿ ಸಿಕ್ಕಿದ್ದರಿಂದ ನಿತ್ಯ ಹಿಮವಂತ ತನ್ನ ಮಗಳು ಪಾರ್ವತಿಯೊಡನೆ ಶಿವದರ್ಶನಕ್ಕೆ ಬರುತ್ತಿದ್ದ. ಪಾರ್ವತಿ ನಿತ್ಯವೂ ತಪ್ಪದೆ ತನ್ನ ಸಖಿಯರಿಬ್ಬರೊಡನೆ ಶಂಕರನ ಸೇವೆಯನ್ನು ಭಕ್ತಿಯಿಂದ ಸಲ್ಲಿಸುತ್ತಿದ್ದಳು. ಶಂಕರನ ಅಪ್ಪಣೆಯಂತೆ ಔಷಧಿಪ್ರಸ್ಥ ತಪ್ಪಲಿಗೆ ಬರುತ್ತಿದ್ದ ಗಿರಿಜೆಯನ್ನು ನಂದಿ ಮೊದಲಾದ ಗಣಗಳು ತಡೆಯುತ್ತಿರಲಿಲ್ಲ. ಪಾರ್ವತಿ ಮತ್ತು ಶಿವನ ನಡುವೆ ಸಾಂಖ್ಯ ಮತ್ತು ವೇದಾಂತಮತಗಳಲ್ಲಿ ವಾದ-ಪ್ರತಿವಾದಗಳಾಗುತ್ತಿದ್ದವು. ಹೀಗಿದ್ದರೂ, ಶಿವ ಬೇಸರಿಸದೆ ಪರ್ವತರಾಜನ ಮಾತನ್ನು ಗೌರವಿಸಿ ಗಿರಿಜೆಯೊಂದಿಗೆ ಸಂಯಮದಿಂದ ವರ್ತಿಸುತ್ತಿದ್ದ. ಶಂಕರ ಸ್ಥಿರವಾದ ಮನಸ್ಸಿನಿಂದ ಪರಮಾತ್ಮನನ್ನು ಧ್ಯಾನಿಸತೊಡಗಿದ್ದರೆ, ಗಿರಿಜೆಯು ನಿತ್ಯವೂ ಶಂಕರನನ್ನು ಭಕ್ತಿಯಿಂದ ಸೇವಿಸುತ್ತಿದ್ದಳು. ಪಾರ್ವತಿಯು ಷೋಡಶೋಪಚಾರಗಳಿಂದ ಶಂಕರನನ್ನ ಅರ್ಚಿಸುತ್ತಿದ್ದಳು. ಹೀಗೆ ಗಿರಿಜೆಯು ಧ್ಯಾನನಿಷ್ಠನಾದ ಶಂಕರನನ್ನು ಬಹಳ ಕಾಲ ಸೇವಿಸಿದಳು. ಒಮ್ಮೆ ಉಮೆಯು ಸಖಿಯರೊಡನೆ ಕಾಮೋದ್ರೇಕವಾಗುವಂತಹ ಗಾನ ಮಾಡುತ್ತಿದ್ದರೆ, ಮತ್ತೊಮ್ಮೆ ದರ್ಭೆ, ಹೂವು, ಸಮಿತ್ತುಗಳನ್ನು ತಾನೇ ತಂದೊಪ್ಪಿಸಿ ಪೂಜಾಕಾರ್ಯ ಮಾಡುತ್ತಿದ್ದಳು.

ಒಮ್ಮೆ ಪಾರ್ವತಿಯು ಚಂದ್ರಶೇಖರನ ಸುಂದರವಾದ ಮುಖವನ್ನು ಕಾಮಾಭಿಲಾಷೆಯಿಂದ ನೋಡುತ್ತಾ, ಶಂಕರನ ಆಕರ್ಷಿಸುವ ಪ್ರಯತ್ನ ಮಾಡಿದಳು. ಆದರೆ ಶಂಕರ ಮಾತ್ರ ವಿಚಲಿತನಾಗಲಿಲ್ಲ. ಪಾರ್ವತಿ ಮನೆ ಬಿಟ್ಟು ಬಂದು ನಿಷ್ಠೆಯಿಂದ ಶಿವನನ್ನೇ ಸೇವಿಸುತ್ತಿದ್ದರೂ ಶಂಕರನ ಮನಸ್ಸು ಕರಗಲಿಲ್ಲ. ಮಹಾಸುಂದರಿಯಾದ ಗಿರಿಜೆಯನ್ನು ಸ್ವೀಕರಿಸಲಿಲ್ಲ. ಬದಲಿಗೆ, ನಿತ್ಯವೂ ತನ್ನ ಸೇವೆ ಮಾಡುವ ಪಾರ್ವತಿಯನ್ನು ನೋಡಿ ಕನಿಕರವಾಯಿತು. ಅವಳ ಮನೋಭಿಲಾಷೆ ಈಡೇರಬೇಕಾದರೆ, ಆಕೆ ತಪಸ್ಸನ್ನು ಮಾಡಿ ತನ್ನ ಗರ್ಭದೋಷ ಮತ್ತು ಗರ್ವ ಮುಂತಾದ ಅವಗುಣಗಳನ್ನು ನಿವಾರಿಸಿಕೊಂಡರೆ ಅವಳನ್ನು ಪರಿಗ್ರಹಿಸಬಹುದೆಂದು ಎಂದು ಯೋಚಿಸಿದ.

ಪರಮೇಶ್ವರ ಮತ್ತೆ ತಪವನ್ನು ಆಚರಿಸತೊಡಗಿದ. ಅವನ ಮನಸ್ಸಿನಲ್ಲಿ ಪರಮಾತ್ಮಚಿಂತೆಯ ಹೊರತು ಮಿಕ್ಕಾವುದೂ ಇರಲಿಲ್ಲ. ನಿತ್ಯವೂ ಪಾರ್ವತಿಯನ್ನು ನೋಡುತ್ತಿದ್ದರೂ ಅವಳ ವಿಷಯದಲ್ಲಿ ಹೆಚ್ಚಿನ ಆಸಕ್ತಿ ತೋರಿಸಲಿಲ್ಲ. ಇದರ ಮಧ್ಯೆ ತಾರಕಾಸುರನಿಂದ ಪೀಡಿತರಾದ ಇಂದ್ರ ಮೊದಲಾದ ದೇವತೆಗಳು ಬ್ರಹ್ಮನ ಅಪ್ಪಣೆಯಂತೆ ಮನ್ಮಥನನ್ನು ಶಂಕರನ ಬಳಿಗೆ ಕಳುಹಿಸಿದರು. ಶಂಕರನ ಬಳಿಗೆ ಬಂದ ಮನ್ಮಥ ತನ್ನ ಉಪಾಯಗಳನ್ನೆಲ್ಲಾ ಪ್ರಯೋಗಿಸಿದ. ಆದರೂ ಶಂಕರನ ಮನಸ್ಸು ವಿಕಾರವಾಗದೆ, ಕೋಪದ ಕಿಡಿಯಾಯಿತು. ತನ್ನ ನೇತ್ರಾಗ್ನಿಯಿಂದ ಮನ್ಮಥನನ್ನು ಸುಟ್ಟು ಭಸ್ಮಮಾಡಿದ. ಆಗ ಶಿವನನ್ನು ಸುಲಭವಾಗಿ ಒಲಿಸಿಕೊಳ್ಳುತ್ತೇನೆಂಬ ಪಾರ್ವತಿಯ ಗರ್ವವೂ ಹೋಯಿತು. ಮುಂದೆ ಅವಳು ಶಂಕರನ ಅಪ್ಪಣೆಯಂತೆ ಘೋರ ತಪವನ್ನಾಚರಿಸಿ ಶಿವನನ್ನು ಪತಿಯಾಗಿ ಪಡೆದಳು ಎಂಬಲ್ಲಿಗೆ ಶ್ರೀಶಿವಮಹಾಪುರಾಣದ ಪಾರ್ವತೀಖಂಡದ ಹದಿಮೂರನೇ ಅಧ್ಯಾಯ ಮುಗಿಯುತ್ತದೆ. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ದೇಶದ ಪ್ರಮುಖ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನ ಸವಾರರು ಟೋಲ್‌ಗಳಲ್ಲಿ ರಸ್ತೆ ಬಳಕೆದಾರರ ಶುಲ್ಕ ಪಾವತಿಸುತ್ತಿದ್ದಾರೆ. ಆದರೆ, ರಸ್ತೆ ಬಳಕೆದಾರಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ ಎಂದು ತಿಳಿಸುವ ಸ್ಕ್ರೀನ್‌ಶಾಟ್‌ವೊಂದು ವೈರಲ್ ಆಗಿದೆ. 'ವಾಹನ ಸವಾರರು ತಾವು ಹೋದ ರಸ್ತೆಯಲ್ಲಿ 12 ಗಂಟೆಯೊಳಗೆ ವಾಪಸಾದರೆ, ಶುಲ್ಕ ಪಾವತಿಸಬೇಕಿಲ್ಲ' ಎಂದು ಅದರಲ್ಲಿ ಉಲ್ಲೇಖಿಸಲಾಗಿದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಇದನ್ನು ಪ್ರಕಟಿಸಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.



✓ ವಾಹನ ಸವಾರರು ತಾವು ಸಂಚರಿಸಿದ ರಸ್ತೆಯಲ್ಲಿ 12 ಗಂಟೆಯೊಳಗೆ ವಾಪಸಾದರೆ ಟೋಲ್ ಶುಲ್ಕ ಪಾವತಿಸಬೇಕಿಲ್ಲ ಎಂಬ ಸುದ್ದಿಯಲ್ಲಿ ಸತ್ಯಾಂಶವಿಲ್ಲ ಎಂದು ಪಿಐಬಿ ಫ್ಯಾಕ್ಟ್‌ಚೆಕ್ ವೇದಿಕೆ ಸ್ಪಷ್ಟಪಡಿಸಿದೆ. ಶುಲ್ಕ ವಿನಾಯಿತಿ ಬಗ್ಗೆ ಕೇಂದ್ರ ಸರ್ಕಾರವಾಗಲೀ, ಸಚಿವ ನಿತಿನ್ ಗಡ್ಕರಿ ಅವರಾಗಲೀ ಯಾವುದೇ ಆದೇಶ ಹೊರಡಿಸಿಲ್ಲ ಎಂದು ಪಿಐಬಿ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ವರಯೋಗ ಸೂತ್ರ

ಎರಡು ಕೋಣೆಗಳ ನೀಂ ಮಾಡು ಮನದಾಲಯದಿ |
ಹೊರಕೋಣೆಯಲಿ ಲೋಗರಾಟಗಳನಾಡು ||
ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ |
ವರಯೋಗ ಸೂತ್ರವಿದು – ಮಂಕುತಿಮ್ಮ || 701 ||

ಪದ-ಅರ್ಥ: ನೀಂ = ನೀನು, ಮನದಾಲಯದಿ = ಮನದ + ಆಲಯದಿ, ಲೋಗರಾಟಗಳನಾಡು = ಲೋಗರ(ಜನರ) + ಆಟಗಳನ್ನು + ಆಡು, ವಿರಮಿಸೊಬ್ಬನೆ = ವಿರಮಿಸು(ವಿಶ್ರಾಂತಿಪಡೆ) + ಒಬ್ಬನೆ, ಮೌನದೊಳಮನೆಯ = ಮೌನದ + ಒಳ ಮನೆಯ

ವಾಚ್ಯಾರ್ಥ: ಮನವೆಂಬ ಆಲಯದಲ್ಲಿ ಎರಡು ಕೋಣೆಗಳನ್ನು ಮಾಡು. ಹೊರಗಿನ ಕೋಣೆಯಲ್ಲಿ ಪ್ರಪಂಚದ ಆಟಗಳನ್ನು ಆಡು. ಮೌನದ ಒಳಮನೆಯನ್ನು ಸೇರಿ ಆ ಶಾಂತಿಯಲ್ಲಿ ವಿಶ್ರಾಂತಿ ಪಡೆ. ಇದೊಂದು ಶ್ರೇಷ್ಠ ಯೋಗಸೂತ್ರ.

ವಿವರಣೆ: ಒಂದೇ ಒಂದು ಕ್ಷಣ ಸಮಯವನ್ನು ವ್ಯರ್ಥಮಾಡದೆ ಸತತವಾಗಿ ದುಡಿದವರು ಮಹಾತ್ಮಾ ಗಾಂಧೀಜಿ. ಅವರ ಕಾರ್ಯದರ್ಶಿ ಮಹಾದೇವ ದೇಸಾಯಿಯವರಿಗೆ ಗಾಂಧೀಜಿಯ ದಿನಚರಿಯನ್ನು ನಿಭಾಯಿಸುವುದು ತುಂಬ ಕಷ್ಟದ ಕೆಲಸವಾಗಿತ್ತು. ಇಡೀ ದಿನ ಒಂದಾದ ಮೇಲೆ ಒಂದರಂತೆ ಕಾರ್ಯಕ್ರಮಗಳು, ಪ್ರತಿಯೊಂದಕ್ಕೂ ನಿಗದಿಯಾದ ಸಮಯ. ಮೊದಲೇ ಅತಿ ಮಿತಿಯಾದ ಊಟ ಮಾಡುವಾಗಲೂ ಜನರ ಸಂದರ್ಶನ. ಸಾಮಾನ್ಯ ಜನ ಸಮಯವನ್ನು ಹೇಗೆ ಕಳೆಯುವುದೆಂದು ಯೋಚಿಸುವಾಗ, ಗಾಂಧೀಜಿ ಸಮಯವನ್ನು ಹೇಗೆ ಕೂಡಿಸಬೇಕು ಎಂದು ನೋಡುತ್ತಿದ್ದರಂತೆ. ಅವರ ಬಳಿ ಬರುವವರು ಕೇವಲ ರಾಜಕೀಯ ವ್ಯಕ್ತಿಗಳಲ್ಲ. ಸಮಾಜದಲ್ಲಿ ತುಳಿತಕ್ಕೆ ಸಿಕ್ಕವರು, ಸಂಕಟದಲ್ಲಿ ತಳಮಳಿಸುವವರು, ವ್ಯಾಪಾರಿಗಳು, ಧರ್ಮಗುರುಗಳು, ತರುಣರು ಎಲ್ಲರೂ ಗಾಂಧೀಜಿಯ ಸಮಯವನ್ನು ಅಪೇಕ್ಷಿಸುವವರೆ. ಈ ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ಗಾಂಧೀಜಿ ತಮ್ಮನ್ನು ತಾವೇ ಉಜ್ಜೀವನಗೊಳಿಸಿಕೊಂಡದ್ದು ಮೌನದಲ್ಲಿ ವಿರಮಿಸಿದಾಗ.

ವಾರಕ್ಕೊಂದು ದಿನದ ಮೌನವನ್ನು ಅವರು ವ್ರತದಂತೆ ಪಾಲಿಸಿದರು. ಅವರಿಗೆ ಭಜನೆ, ಧ್ಯಾನ ಮುಖ್ಯವಾಗಿದ್ದವು. ಇಡೀ ದಿನದ ಚಟುವಟಿಕೆಯಲ್ಲಿ ಕಳೆದುಕೊಂಡ ಶಕ್ತಿಯನ್ನು ಬಹುಶಃ ಅವರು ಧ್ಯಾನದಲ್ಲಿ ಮತ್ತು ಮೌನದಲ್ಲಿ ಸಂಪಾದಿಸಿಕೊಳ್ಳುತ್ತಿದ್ದರು. ಸದಾ ಪಾದರಸದಂತೆ ಚಲಿಸುತ್ತ, ಒಂದೆಡೆಗೆ ನಿಲ್ಲದೆ ಜನರನ್ನು ಪ್ರೇರೇಪಿಸುತ್ತ ಹಗಲು-ರಾತ್ರಿ ಶ್ರಮಿಸಿದ ಸ್ವಾಮಿ ವಿವೇಕಾನಂದರೂ ಶಕ್ತಿಯನ್ನು ಅರ್ಜಿಸಿದ್ದು ಧ್ಯಾನದಲ್ಲಿ, ಮೌನದಲ್ಲಿ.

ಈ ಮಾತನ್ನು ಕಗ್ಗ ಹೇಳುತ್ತದೆ.

ನಮಗೆ ಪ್ರಪಂಚದಲ್ಲಿ ಕರ್ಮಗಳನ್ನು ಬಿಟ್ಟು ಹೋಗುವುದು ಸಾಧ್ಯವಿಲ್ಲ. ನಮಗೆ ಯಾವುಯಾವುದೋ ಜವಾಬ್ದಾರಿಗಳಿವೆ. ಯಾರಿಗೊ ಗಂಡ, ಯಾರಿಗೋ ಹೆಂಡತಿಯಾಗಿದ್ದೇವೆ. ಅಣ್ಣ, ತಮ್ಮ, ಮಕ್ಕಳು, ಬಂಧುಗಳು ಎಂಬ ಸಂಬಂಧಗಳ ಸುಳಿಯಲ್ಲಿ ಸಿಲುಕಿದ್ದೇವೆ. ಆ ಎಲ್ಲ ಜವಾಬ್ದಾರಿಗಳನ್ನು ನಗುನಗುತ್ತ ನಿರ್ವಹಿಸಬೇಕು. ಆದರೆ ಅಲ್ಲಿಯೇ ಇದ್ದರೆ ಶಕ್ತಿಪಾತವಾಗುತ್ತದೆ. ಅದನ್ನು ಪುನ: ವೃದ್ಧಿಸಿಕೊಳ್ಳಲು ಏಕಾಂತಕ್ಕೆ ಹೊರಡಬೇಕು. ಮನಸ್ಸು ಧ್ಯಾನಕ್ಕೆ ಎಡೆಮಾಡಬೇಕು. ಕಗ್ಗ ಅದನ್ನು ಕಾವ್ಯಮಯವಾಗಿ ಎರಡು ಕೋಣೆಗಳು ಎನ್ನುತ್ತದೆ. ಹೊರಗಿನ ಕೋಣೆಯಲ್ಲಿ ಜವಾಬ್ದಾರಿಗಳನ್ನು ಹೊರಬೇಕು, ಜವಾಬ್ದಾರಿಗೆ ತಕ್ಕುದಾದ ಪಾತ್ರಗಳನ್ನು ವಹಿಸಿ ನಟಿಸಬೇಕು. ಅಲ್ಲಿಯೇ ಕೂಡ್ರುವುದು ಬೇಡ. ಮೌನದಲ್ಲಿ, ಶಾಂತಿಯನ್ನು ಪಡೆಯಲು ಒಳಕೋಣೆಗೆ ತೆರಳಿ ಅಂತರೀಕ್ಷಣೆ ಮಾಡಿಕೊಳ್ಳಬೇಕು. ಮೌನದಲ್ಲಿ ಧ್ಯಾನ, ಚಿಂತನೆ ನಡೆಸಬೇಕು. ಇವೆರಡು ಕೋಣೆಗಳಲ್ಲಿ ಸರಿಯಾಗಿ ನಡೆದುಕೊಂಡು ಸಾಗಿಸುವ ಬದುಕು ಸಾರ್ಥಕ. ಅದೇ ಪರಮ ಯೋಗದ ಸೂತ್ರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಆಗಸ್ಟ್ 25, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣತ್ರಯೋದಶಿ ಗಂ. 10-38 ನಕ್ಷತ್ರ: ಪುಷ್ಯ ಗಂ. 16-16 ಯೋಗ: ವರಿಯಾನ್ ಗಂ 25-56, ಕರಣ: ವಣಿಜ ಗಂ. 10-38, ಸಿಂಹ ಮಾಸದ 08 ನೇ ದಿನ. ರಾಹುಕಾಲ : ಮಧ್ಯಾಹ್ನ 01:30 – 03:00
ಸೂರ್ಯೋದಯ : 06-22 ಸೂರ್ಯಾಸ್ತ : 06-43
ಮುಸ್ಲಿಂ ದಿನಾಂಕ : 26 ಮೊಹರಮ್
ದಿನ ವಿಶೇಷ : ಅಘೋರ ಚತುರ್ದಶಿ, ಕೈಲಾಸ ಯಾತ್ರಾ 2
ಅದೃಷ್ಟ ಸಂಖ್ಯೆ : 2, 4

ಮೇಷ: ವಾಹನ ಮಾರಾಟಗಾರರಿಗೆ ಉತ್ತಮ ಆದಾಯ ಸಿಗಲಿದೆ. ನಿಮ್ಮ ಭಾವನೆಗಳಿಗೆ ಬೆಲೆಕೊಡುವ ಸಹಚರರನ್ನು ಹೊಂದುವಿರಿ. ತೈಲ ವ್ಯಾಪಾರ ವ್ಯವಹಾರಗಳಲ್ಲಿ ಪೈಪೋಟಿ ಹೆಚ್ಚಿದ್ದರೂ, ತೃಪ್ತಿಕರ ಆದಾಯವಿರುವುದು.

ವೃಷಭ: ಹೊಸ ಕಾರ್ಯದ ಸಂಪೂರ್ಣ ಜವಾಬ್ದಾರಿ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ನಿಮ್ಮದಾಗಲಿದೆ. ದಾಂಪತ್ಯ ಜೀವನ ಸುಖಮಯವಾಗಿರುತ್ತದೆ. ರೈತರಿಗೆ ಹಾಗೂ ವಿದ್ಯಾರ್ಥಿ ವರ್ಗಕ್ಕೆ ಉತ್ತಮ ಫಲ ದೊರೆಯುವುದು.

ಮಿಥುನ: ಗೆಳೆಯರ ದುಃಖದ ಪರಿಸ್ಥಿತಿಗಳಿಗೆ ಸಮಾಧಾನ ಹೇಳಬೇಕಾಗುವುದು. ಆಪ್ತರ ಕಷ್ಟಗಳ ಕಡೆಗೆ ಗಮನ ಕೊಡಿ. ಅದರಿಂದ ಸಂಬಂಧಗಳೂ ವೃದ್ಧಿಯಾಗಲಿದೆ ಜೊತೆಗೆ ಪುಣ್ಯ ಸಂಪಾದನೆಯೂ ಆಗುವುದು.

ಕರ್ಕಾಟಕ: ರಾಜಕೀಯ ವ್ಯಕ್ತಿಗಳಿಗೆ ಪಕ್ಷದ ವರಿಷ್ಠರೊಂದಿಗೆ ದಿಢೀರ್ ಸಮಾಲೋಚನೆ ನಡೆಸಬೇಕಾದ ಅನಿವಾರ್ಯತೆ ಎದುರಾಗುವುದು. ಸರ್ಕಾರಿ ಕಾಮಗಾರಿಗಳಿಂದ ಬಾಕಿ ಇರುವ ಹಣದ ಬಗ್ಗೆ ಗಮನಹರಿಸಿ.

ಸಿಂಹ: ಚಾಲಕ ವೃತ್ತಿಯವರು ಕೆಲಸದಲ್ಲಿ ಒತ್ತಡ ಎದುರಿಸಬೇಕಾಗುವುದು. ಆಲಸ್ಯ ಮನೋಭಾವ ಹೆಚ್ಚಾಗಿ ಉತ್ಸಾಹ ಕಳೆದುಕೊಂಡಿರುವಂತಾಗಬಹುದು. ಶ್ರಮ ಜೀವಿಗಳಿಗೆ ಆರ್ಥಿಕ ಪರಿಸ್ಥಿತಿಯಲ್ಲಿ ತುಸು ಚೇತರಿಕೆ ಕಾಣುತ್ತದೆ.

ಕನ್ಯಾ: ಮಿತ್ರರಲ್ಲಿನ ಮನಸ್ತಾಪಕ್ಕೆ ತೆರೆ ಎಳೆಯುವ ಪ್ರಯತ್ನದ ಹೊರತಾಗಿ ಸೇಡು ತೀರಿಸಿಕೊಳ್ಳುವ ಮನೋಭಾವ ಸರಿಯಲ್ಲ. ಅವಿವಾಹಿತರಿಗೆ ಸೋದರ ಮಾವನ ಸಹಾಯದಿಂದ ವಿವಾಹ ಸಂಬಂಧಗಳು ಕೂಡಿ ಬರಲಿದೆ.

ತುಲಾ: ಪೀಠೋಪಕರಣಗಳ ವ್ಯಾಪಾರಸ್ಥರು ಪ್ರದರ್ಶನ ಮಾರಾಟದಂತಹ ಯೋಜನೆಯಿಂದ ಅಥವಾ ಜಾಹೀರಾತುಗಳ ಮೂಲಕ ಬೆಳಕಿಗೆ ಬರುವ ಪ್ರಯತ್ನ ಮಾಡಬಹುದು.

ವೃಶ್ಚಿಕ: ನಿಮ್ಮ ಅಭ್ಯುದಯಕ್ಕೆ ಚಂಚಲ ಮನೋಭಾವ ಅಡ್ಡಿಉಂಟುಮಾಡುತ್ತದೆ. ದೇವತಾನುಗ್ರಹದ ಕೊರತೆಯ ಜೊತೆಯಲ್ಲಿ ಮನುಷ್ಯ ಪ್ರಯತ್ನವೂ ಇಲ್ಲದ ಕಾರಣ ನೀವು ಯತ್ನಿಸಿದ ಕಾರ್ಯ ವಿಳಂಬವಾಗುವುದು.

ಧನು: ಯಾತ್ರಾಸ್ಥಳಗಳಲ್ಲಿ ಪಾಲುದಾರಿಕೆಯಲ್ಲಿ ಹೋಟೆಲ್ ನಡೆಸಲು ಒಪ್ಪಿಕೊಳ್ಳಬಹುದು. ಹವಾ ಬದಲಾವಣೆಗಾಗಿ ಕಿರು ಪ್ರವಾಸ ಕೈಗೊಳ್ಳುವ ಮನಸ್ಸಾಗಲಿದೆ. ಕಬ್ಬಿಣ ಸಿಮೆಂಟ್ ದಾಸ್ತಾನುದಾರರಿಗೆ ಉತ್ತಮ ಆದಾಯ

ಮಕರ: ಉನ್ನತ ವ್ಯಾಸಂಗದವರಿಗೆ ಕೆಲಸಕ್ಕೆ ನೇರ ಆಯ್ಕೆಗೊಳ್ಳುವ ಸಂಭವವಿದೆ. ಮೆಕ್ಯಾನಿಕ್ ಕೆಲಸಗಾರರಿಗೆ ಅಧಿಕ ವರಮಾನದ ಇರುವ ದಿನವಿದು.


ಕುಂಭ: ಹಿಂದಿನಿಂದ ಬಂದ ನಿಮ್ಮ ಹಲವು ಕಷ್ಟ ಕಾರ್ಪಣ್ಯಗಳಿಗೆ ಮಾರ್ಗದರ್ಶಕರ ಮೂಲಕವಾಗಿ ದೇವರು ಇಂದು ದಾರಿ ತೋರುತ್ತಾನೆ. ಸಹೋದ್ಯೋಗಿಗಳ ಸಹಕಾರಕ್ಕೆ ಅವರ ಬಳಿಯಲ್ಲಿ ಸ್ನೇಹ ಮನೋಭಾವದಿಂದ ಇರುವುದು ಅಗತ್ಯ.

ಮೀನ: ವೈಯಕ್ತಿಕ ಹಾಗೂ ವೃತ್ತಿ ಚಟುವಟಿಕೆಯಲ್ಲಿ ಯಶಸ್ಸು ಸಾಧಿಸಲು ಕೊಂಚ ಹೆಚ್ಚಿನ ಶ್ರಮ ವಹಿಸಬೇಕಾದೀತು. ಧೈರ್ಯ, ಸಾಹಸ, ಎದೆಗಾರಿಕೆಯ ಬಗ್ಗೆ ಮಿತ್ರರು, ಬಂಧುಗಳು ಟೀಕಿಸುವವರಿದ್ದಾರೆ, ಲೆಕ್ಕಿಸದೆ ಮುನ್ನುಗ್ಗಿ.

ಪದಬಂಧ 5060 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಮಾನವಿಟ್ಟುಕೊಂಡು ಮಾಡಿರುವ ಹೋಲಿಕೆ (4)
3. ಅಂತ್ಯವು ಈ ರೀತಿ ಬಂದಿದೆ (4)
5. ಮೃದುವಲ್ಲದುದು ಇದು (3)
6. ತರಲೆಯ ಶಿರವಿದು (2)
7. ಕೆಲಸಕ್ಕೆ ಬಾರದ ಮಾತಿದು (5)
10. ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
12. ಒನಪು ತೋರಿದಾಗ ಬಂದಿರುವ ಸ್ಮರಣೆ (3)
14. ಈತ ಅದೃಷ್ಟವಿಲ್ಲದವನು (4)
15. ವನದಲ್ಲಿ ಬೆಳವಣಿಗೆ ಕಾಣುತ್ತಿದೆಯೇ? (4)

ಮೇಲಿಂದ ಕೆಳಕ್ಕೆ
1. ಜನಿವಾರ ಇಲ್ಲಿದೆ (4)
2. ಹಳೆಯದನ್ನು ಪುನಃ ಹೊಸತು ಮಾಡುವಿಕೆ (5)
3. ಹಿರಿಯ ಸಹೋದರನಿವನು (2)
4. ಅದೇ ತಾನೆ ಅರಳಿದ ಹೂವು (4)
5. ಸೀಸೆಯ ಮುಚ್ಚಳ (3)
7. ಬಿನ್ನಾಣವನ್ನು ಹೀಗೆ ತೋರಿರಿ! (3)
8. ಬೆಳ್ಳಿ ಹಬ್ಬವಿದು (5)
9. ಮನದೊಳಗಿರುವ ಕುಲ (4)
11. ಸಂಪೂರ್ಣವಾದ ಅರಿವು (4)
13. ಕ್ಷೌರ ಮಾಡಿಕೊಳ್ಳಲು ಆದ ತೊಂದರೆ! (2)



5059ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗೊರವಂಕ 3.ಬಾಲರವಿ 5.ವಿಫಲ 6.ಕೆಲಸ 8.ಸಂಪತ್ತು 9.ಅರುಣ 10.ಕನಕ 12.ಹವೀಜ 14.ಕವಳಿಗೆ 15.ಗರಗಸ

ಮೇಲಿಂದ ಕೆಳಕ್ಕೆ: 1.ಗೊರಕೆ 2.ಕವಿ 3.ಬಾಲ 4.ವಿಪತ್ತು 7.ಸಮೀಕರಣ 8.ಸಂಖ್ಯಾವಾಚಕ 9.ಅಷ್ಟಕ 11.ಕಳಸ 12.ಹಗೆ 13.ಜಗ

ಸುಡೊಕು 5446

6		4				7		8
	9			7	1			
1				4	8			6
		1				9		
			3	9	7		5	4
7		9				8		
5				6		4		
4					3		2	
	6				4		7	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5445 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ಯುಪಿಎಸ್‌ಸಿ: ‘ಒಂದು ಬಾರಿ ನೋಂದಣಿ’ ಪದ್ಧತಿ ಆರಂಭ

ನವದೆಹಲಿ (ಪಿಟಿಐ): ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಸರ್ಕಾರಿ ಉದ್ಯೋಗದ ಆಕಾಂಕ್ಷಿಗಳ ಅನುಕೂಲಕ್ಕಾಗಿ ‘ಒಂದು ಬಾರಿ ನೋಂದಣಿ’ (ಒಟಿಆರ್) ಪದ್ಧತಿ ಆರಂಭಿಸಿದೆ. ಅಭ್ಯರ್ಥಿಗಳು ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಾಗ ಪ್ರತಿಬಾರಿಯೂ ತಮ್ಮ ಮೂಲ ಮಾಹಿತಿ ಭರ್ತಿ ಮಾಡುವುದನ್ನು ತಪ್ಪಿಸುವುದು ಇದರ ಉದ್ದೇಶವಾಗಿದೆ.

ಮುಂದಿನ ದಿನಗಳಲ್ಲಿ ಯುಪಿಎಸ್‌ಸಿ ನಡೆಸಲಿರುವ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸ-ಬಯಸುವವರು ‘ಒಟಿಆರ್’ ಪದ್ಧತಿಯಡಿಯೇ ತಮ್ಮ ಮೂಲ ಮಾಹಿತಿ ದಾಖಲು ಮಾಡಬೇಕು. ಹೀಗೆ ದಾಖಲಿಸಿದ ಮಾಹಿತಿಯನ್ನು ಆಯೋಗದ ಸರ್ವರ್‌ನಲ್ಲಿ ಸುರಕ್ಷಿತವಾಗಿ ಸಂಗ್ರಹಿಸಿಡಲಾ-ಗುತ್ತದೆ.

‘ಆಯೋಗ ನಡೆಸುವ ಪರೀಕ್ಷೆಗಳಿಗೆ ಭಾರಿ ಪ್ರಮಾಣದಲ್ಲಿ ಅರ್ಜಿಗಳು ಸಲ್ಲಿಕೆಯಾಗುತ್ತವೆ. ಒಟಿಆರ್ ಪದ್ಧತಿಯು ಅಭ್ಯರ್ಥಿಗಳ ಸಮಯ ಉಳಿತಾಯಕ್ಕೆ ಸಹಕಾ-ರಿಯಾಗಲಿದೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಸುಲಭಗೊಳಿಸಲೂ ನೆರವಾಗಲಿದೆ’ ಎಂದು ಅಧಿಕಾರಿ-ಯೊಬ್ಬರು ಹೇಳಿದ್ದಾರೆ.

‘ಅಭ್ಯರ್ಥಿಯು ಯಾವುದಾದರೂ ಒಂದು ಹುದ್ದೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮುಂದಾದಾಗ ಆತ ಅಥವಾ ಆಕೆಯ ಮೂಲ ಮಾಹಿತಿಯು ತನ್ನಂತಾನೆ ಅರ್ಜಿಯಲ್ಲಿ ನಮೂದಾಗುತ್ತದೆ. ಒಮ್ಮೊಮ್ಮೆ ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವಾಗ ಕಣ್ತ-ಪ್ಪಿನಿಂದಾಗಿ ತಪ್ಪು ಮಾಹಿತಿಯನ್ನು ಅದರಲ್ಲಿ ನಮೂದಿಸಿಬಿಡುವ ಸಾಧ್ಯತೆ ಇರುತ್ತದೆ. ಒಟಿಆರ್‌ನಿಂದ ಇಂತಹ ಪ್ರಮಾದಗಳಿಗೆ ಕಡಿವಾಣ ಹಾಕಬಹುದು’ ಎಂದು ಆಯೋಗ ಹೇಳಿದೆ.

‘ಆಯೋಗದ ವೆಬ್‌ಸೈಟ್‌ಗಳಾದ upsc.gov.in and upsconline.nic.in ತೆರೆದ ಕೂಡಲೇ ಒಟಿಆರ್‌ನ ಲಿಂಕ್ ಕಾಣಿಸಿಕೊಳ್ಳುತ್ತದೆ. ಅದನ್ನು ಕ್ಲಿಕ್ಕಿಸಿ ಅಭ್ಯರ್ಥಿಗಳು ತಮ್ಮ ಮಾಹಿತಿ ದಾಖಲಿಸಬಹುದು. ಒಟಿಆರ್ ಮೂಲಕ ಭರ್ತಿ ಮಾಡಿರುವ ಶೇ 70ರಷ್ಟು ಮಾಹಿತಿಯು ಆನ್‌ಲೈನ್ ಅರ್ಜಿಯಲ್ಲಿ ನಮೂದಾಗಿ ರುತ್ತದೆ’ ಎಂದು ತಿಳಿಸಿದೆ.

‘ಅಭ್ಯರ್ಥಿಗಳು ಒಟಿಆರ್‌ನಲ್ಲಿ ಬಹಳ ಎಚ್ಚರಿಕೆಯಿಂದ ಮಾಹಿತಿ ತುಂಬಬೇಕು. ಅಲ್ಲಿನ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಮಾಹಿತಿ ಭರ್ತಿ ಮಾಡಬೇಕು. ಆ ಮೂಲಕ ಮುಂದೆ ಯಾವುದೇ ಬಗೆಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು’ ಎಂದೂ ಆಯೋಗ ತಿಳಿಸಿದೆ.

ಆಮ್ ಆದ್ಮಿ ಪಕ್ಷದ ಶಾಸಕರ ಆರೋಪ ನಿರಾಕರಿಸಿದ ಬಿಜೆಪಿ

‘ಬಿಜೆಪಿ ಸೇರಲು ₹20 ಕೋಟಿ ಆಮಿಷ’

ನವದೆಹಲಿ (ಪಿಟಿಐ): ದೆಹಲಿ ಸರ್ಕಾರವನ್ನು ಶತಾಯಗತಾಯ ಬುಡಮೇಲು ಮಾಡಲು ಪ್ರಧಾನಿ ನರೇಂದ್ರ ಮೋದಿ ಅವರು ಯತ್ನಿ-ಸುತ್ತಿದ್ದಾರೆ ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಬುಧವಾರ ಆರೋಪಿಸಿದೆ. ನಾಲ್ವರು ಶಾಸಕರಿಗೆ ತಲಾ ₹20 ಕೋಟಿ ಹಣದ ಆಮಿಷವೊಡ್ಡಲಾಗಿದೆ ಎಂದೂ ಆರೋಪಿಸಿದೆ. ಈ ಆರೋಪವನ್ನು ಬಿಜೆಪಿ ಅಲ್ಲಗಳೆದಿದೆ.

ತಮ್ಮ ಮೇಲಿನ ಸಿಬಿಐ, ಇ.ಡಿ ಪ್ರಕರಣ ಕೈಬಿಡುವ ಮತ್ತು ಮುಖ್ಯಮಂತ್ರಿ ಹುದ್ದೆ ನೀಡುವ ಪ್ರಸ್ತಾವವನ್ನು ದೆಹಲಿಯ ಬಿಜೆಪಿ ಘಟಕ ತಮ್ಮ ಮುಂದೆ ಇರಿಸಿತ್ತು ಎಂದು ದೆಹಲಿ ಉಪಮುಖ್ಯಮಂ-ತ್ರಿ ಮನೀಷ್ ಸಿಸೋಡಿಯಾ ಅವರು ಆರೋಪಿಸಿದ್ದರು. ಆನಂತರ, ಇದೀಗ ಪಕ್ಷದ ಶಾಸಕರನ್ನು ಸೆಳೆಯಲಾಗುತ್ತಿದೆ ಎಂದು ಎಎಪಿ ಆರೋಪಿಸಿದೆ.

ಎಎಪಿ ಶಾಸಕರಾದ ಅಜಯ್ ದತ್, ಸಂಜೀವ್ ಝಾ, ಸೋಮನಾಥ ಭಾರ್ತಿ ಮತ್ತು ಕುಲದೀಪ್ ಕುಮಾರ್ ಅವರನ್ನು ಬಿಜೆಪಿ ನಾಯಕರು ಸಂಪರ್ಕಿಸಿದ್ದಾರೆ ಎಂದು ಎಎಪಿ ವಕ್ತಾರ ಸಂಜಯ್ ಸಿಂಗ್ ಹೇಳಿದ್ದಾರೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಈ ನಾಲ್ವರು ಶಾಸಕರು ಹಾಜರಿದ್ದರು. ಬಿಜೆಪಿ ಆಮಿಷದ ಬಗ್ಗೆ ಟ್ವೀಟ್ ಮಾಡಿರುವ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್, ‘ಇದೊಂದು ಗಂಭೀರ ವಿಚಾರ’ ಎಂದು ಹೇಳಿದ್ದಾರೆ.

‘ಎಎಪಿ ತೊರೆದು ಬಿಜೆಪಿ ಸೇರುವ ಶಾಸಕರಿಗೆ ತಲಾ ₹20 ಕೋಟಿ ಹಣ ಹಾಗೂ ಬೇರೆ ಶಾಸಕರನ್ನು ಬಿಜೆಪಿಗೆ ಕರೆತಂದರೆ ₹25 ಕೋಟಿ ಹಣ ನೀಡುವುದಾಗಿ ಬಿಜೆಪಿ ಪ್ರಸ್ತಾವ ಇರಿಸಿದೆ. ಈ ನಾಲ್ವರು ಶಾಸಕರ ಜೊತೆ ಸ್ನೇಹ ಸಂಬಂಧ ಹೊಂದಿರುವ ಬಿಜೆಪಿ ಮುಖಂಡರು ಈ ಪ್ರಸ್ತಾವ ಮುಂದಿರಿಸಿದ್ದಾರೆ. ಒಂದು ವೇಳೆ ಬಿಜೆಪಿಯ ಈ ಪ್ರಸ್ತಾವವನ್ನು ತಿರಸ್ಕರಿಸಿದರೆ, ಸಿಸೋಡಿಯಾ ಅವರ ರೀತಿ ಸುಳ್ಳು ಮೊಕದ್ದಮೆಗಳ-ನ್ನು ಹೂಡಲಾಗುತ್ತದೆ ಎಂಬುದಾಗಿ ಬಿಜೆಪಿ ನಾಯಕರು ಎಎಪಿ ಶಾಸಕರಿಗೆ ಹೇಳಿದ್ದಾರೆ’ ಎಂದು ಸಂಜಯ್ ಸಿಂಗ್ ಆರೋಪಿಸಿದ್ದಾರೆ.

‘ಎಎಪಿಗೆ ಭಾರಿ ಕಮಿಷನ್’: ಅಬಕಾರಿ ನೀತಿ ಸುಧಾರಣೆ ಕುರಿತು ತಜ್ಞರ ಸಮಿತಿ ಮಾಡಿದ್ದ ಶಿಫಾರಸುಗಳನ್ನು ಗಾಳಿಗೆ ತೂರಿರುವ ಎಎಪಿ, ದೊಡ್ಡ ಮೊತ್ತದ ಕಮಿಷನ್ ನೀಡಿದ ಕಂಪನಿಗಳಿಗೆ ಮದ್ಯ ಮಾರಾಟ ಪರವಾನಗಿ ನೀಡಿದೆ ಎಂದು ಬಿಜೆಪಿ ಆರೋಪಿಸಿದೆ.

‘ಲೆ.ಗವರ್ನರ್–ಮುಖ್ಯಮಂತ್ರಿ ಒಪ್ಪಂದ’: ಅಬಕಾರಿ ನೀತಿ ಜಾರಿಯಲ್ಲಿ ಬಿಜೆಪಿಯ ಲೆಫ್ಟಿನೆಂಟ್ ಗವರ್ನರ್ ಮತ್ತು ದೆಹಲಿ ಮುಖ್ಯಮಂತ್ರಿ ನಡುವೆ ಒಪ್ಪಂದವಾಗಿದೆ ಎಂದು ಕಾಂಗ್ರೆಸ್ ಬುಧವಾರ ಆರೋಪಿಸಿದೆ.



ನವದೆಹಲಿಯ ಪಕ್ಷದ ಕಚೇರಿಯಲ್ಲಿ ಎಎಪಿ ವಕ್ತಾರ ಸಂಜಯ್ ಸಿಂಗ್ ಮತ್ತು ಶಾಸಕರು ಬುಧವಾರ ಮಾಧ್ಯಮಗೋಷ್ಠಿ ನಡೆಸಿದರು —ಪಿಟಿಐ ಚಿತ್ರ

> **ಎಎಪಿ ಶಾಸಕರು ಭಗತ್ ಸಿಂಗ್ ಅವರ ಅನುಯಾಯಿಗಳು ಹಾಗೂ ಕೇಜ್ರಿವಾಲ್ ಅವರ ಸೈನಿಕರು. ನಮ್ಮ ಶಾಸಕರು ಪಕ್ಷಕ್ಕೆ ದ್ರೋಹ ಬಗೆಯುವುದಿಲ್ಲ**
> **ಮನೀಷ್ ಸಿಸೋಡಿಯಾ**
> ದೆಹಲಿ ಉಪಮುಖ್ಯಮಂತ್ರಿ

> **ಭ್ರಷ್ಟಾಚಾರದಲ್ಲಿ ಸಾಧನೆ ಮಾಡಿದ ವಿಭಾಗದಡಿ ಅರವಿಂದ ಕೇಜ್ರಿವಾಲ್ ಹಾಗೂ ಮನೀಷ್ ಸಿಸೋಡಿಯಾ ಅವರಿಗೆ ಭಾರತರತ್ನ ನೀಡಬಹುದು**
> **ಅನಿಲ್ ಚೌಧರಿ**
> ದೆಹಲಿ ಕಾಂಗ್ರೆಸ್ ಘಟಕದ ಮುಖ್ಯಸ್ಥ

ನಾಳೆ ತುರ್ತು ಅಧಿವೇಶನ

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಶುಕ್ರವಾರ (ಆ.26) ದೆಹಲಿ ವಿಧಾನಸಭೆಯ ವಿಶೇಷ ಅಧಿವೇಶನ ಕರೆದಿದ್ದಾರೆ. ಕೇಂದ್ರ ಸರ್ಕಾರದಿಂದ ತನಿಖಾ ಸಂಸ್ಥೆಗಳ ದುರ್ಬಳಕೆ, ಅಬಕಾರಿ ನೀತಿ ಜಾರಿ ಹಾಗೂ ಎಎಪಿ ಶಾಸಕರನ್ನು ಸೆಳೆಯಲು ಮುಂದಾಗಿರುವ ಬಿಜೆಪಿ ನಡೆ ಬಗ್ಗೆ ಅಧಿವೇಶನದಲ್ಲಿ ಚರ್ಚೆಯಾಗುವ ಸಾಧ್ಯತೆಯಿದೆ.

> **ಬಹುಶಃ ಅವರಿಗೆ ಅಬಕಾರಿ ಮಾಫಿಯಾದಿಂದ ಅಷ್ಟು ಮೊತ್ತದ ಆಮಿಷ ಬಂದಿರಬಹುದು. ತಮಗೆ ಆಮಿಷ ಒಡ್ಡಿದವರ ಹೆಸರನ್ನು ಏಕೆ ಬಹಿರಂಗಪಡಿಸುತ್ತಿಲ್ಲ?**
> **ಸಂಬಿತ್ ಪಾತ್ರಾ,** ಬಿಜೆಪಿ ವಕ್ತಾರ

> **ಮಹಾರಾಷ್ಟ್ರದಲ್ಲಿ ಶಿಂದೆ ವಿಚಾರದಲ್ಲಿ ಪ್ರಯೋಗ ಯಶಸ್ವಿಯಾಗಿದೆ. ಸಿಸೋಡಿಯಾ ವಿಚಾರದಲ್ಲಿ ವಿಫಲವಾಗಿದೆ. ಮೋದಿಯವರೇ ನಿಮಗೆ ನಾಚಿಕೆಯಾಗಬೇಕು**
> **ಸಂಜಯ್ ಸಿಂಗ್**
> ಎಎಪಿ ರಾಷ್ಟ್ರೀಯ ವಕ್ತಾರ

ಸುದ್ದಿ 2 ನಿಮಿಷ

ಹೈಕೋರ್ಟ್‌ನಿಂದ ಅರ್ಜಿ ಹಿಂಪಡೆದ ಕಾರ್ತಿ ಚಿದಂಬರಂ

ನವದೆಹಲಿ (ಪಿಟಿಐ): ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರು ಐಎನ್‌ಎಕ್ಸ್ ಮೀಡಿಯಾ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯ-ವು (ಇ.ಡಿ) ತಮ್ಮ ವಿರುದ್ಧ ಬಲವಂತದ ಕ್ರಮ ಕೈಗೊಳ್ಳುವುದಕ್ಕೆ ತಡೆ ನೀಡುವಂತೆ ಕೋರಿ ದೆಹಲಿ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ಬುಧವಾರ ಹಿಂಪಡೆದಿದ್ದಾರೆ.

‘ಪ್ರಕರಣದ ಸಂಬಂಧ ಜಾರಿ ನಿರ್ದೇಶನಾಲಯವು ವಿಚಾರಣಾ ನ್ಯಾಯಾಲಯದಲ್ಲಿ ದೂರು ದಾಖಲಿಸಿದೆ. ಜಾಮೀನು ಕೋರಿ ನಾವು ಸಲ್ಲಿಸಿರುವ ಅರ್ಜಿಯು ಬಾಕಿ ಇದ್ದು, ಅದರ ವಿಚಾರಣೆ ನಡೆಸಲು ನ್ಯಾಯಾಲಯ ಒಪ್ಪಿಗೆ ನೀಡಿದೆ. ಹೀಗಾಗಿ ಅರ್ಜಿ ಹಿಂಪಡೆಯು-ತ್ತಿದ್ದೇವೆ’ ಎಂದು ಕಾರ್ತಿ ಪರ ವಕೀಲ ಅರ್ಷದೀಪ್ ಸಿಂಗ್ ನ್ಯಾಯಾಲಯಕ್ಕೆ ಹೇಳಿದ್ದಾರೆ.



ಸಚಿವರ ದೇಗುಲ ಪ್ರವೇಶ ವಿವಾದ: ಸಿ.ಎಂ ನಿತೀಶ್ ಬೇಸರ

ಪಟನಾ (ಪಿಟಿಐ): ಸಚಿವ ಇಸ್ರೇಲ್ ಅಹ್ಮದ್ ಮನ್ಸೂರಿ ಅವರೊಂದಿಗೆ ಗಯಾ ದೇಗುಲಕ್ಕೆ ಭೇಟಿ ನೀಡಿದ್ದು ವಿವಾದದ ಸ್ವರೂಪ ಪಡೆದಿರುವ ಬಗ್ಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಬುಧವಾರ ಬೇಸರ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಅವರು (ಬಿಜೆಪಿ) ಅನವಶ್ಯಕ ವಿಷಯಗಳನ್ನು ಎಳೆದುತಂದು ಸಮಾಜವನ್ನು ಒಡೆಯಲು ಬಯಸಿದ್ದಾರೆ. ದೇಗುಲಕ್ಕೆ ಭೇಟಿ ನೀಡಿದ್ದರಲ್ಲಿ ಗೊಣಗುವಂಥದ್ದು ಏನಿದೆ? ಅವರ ಸಚಿವರು ನನ್ನೊಂದಿಗೆ ದೇಗುಲಕ್ಕೆ ಭೇಟಿ ನೀಡಿಲ್ಲವೇ’ ಎಂದು ಪ್ರಶ್ನಿಸಿದರು. ನಿತೀಶ್ ಅವರು ಗಯಾದ ವಿಷ್ಣುಪಾದ ದೇವಾಲಯಕ್ಕೆ ಮಾಹಿತಿ ತಂತ್ರಜ್ಞಾನ ಸಚಿವ ಮನ್ಸೂರಿ ಅವರೊಂದಿಗೆ ಪ್ರವೇಶಿಸುವ ಮೂಲಕ ಹಿಂದೂಗಳ ಭಾವನೆಗಳಿಗೆ ಅವಮಾನ ಮಾಡಿದ್ದಾರೆ ಎಂದು ಬಿಜೆಪಿ ಮಂಗಳವಾರ ಆರೋಪಿಸಿತ್ತು.

ಕಾಂಗ್ರೆಸ್ ಅಧ್ಯಕ್ಷ ಸ್ಥಾನ: 28ರಂದು ಚುನಾವಣಾ ವೇಳಾಪಟ್ಟಿ ಪ್ರಕಟ

ಗೆಹಲೋತ್ ಹೆಸರು ಮುಂಚೂಣಿಗೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಚುನಾವಣೆ ವೇಳಾಪಟ್ಟಿ ಇದೇ 28ರಂದು ಪ್ರಕಟಿಸುವ ಸಾಧ್ಯತೆ ಇದ್ದು, ವೈದ್ಯಕೀಯ ತಪಾಸಣೆಗಾಗಿ ಲಂಡನ್‌ಗೆ ತೆರಳಿರುವ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ವರ್ಚುವಲ್ ಮೂಲಕ ಕಾರ್ಯಕಾರಿ ಸಮಿತಿಯ ಸಭೆ ನಡೆಸಿ, ಚುನಾವಣಾ ವೇಳಾಪಟ್ಟಿ ಪ್ರಕಟಿಸಲಿದ್ದಾರೆ.

ಪಕ್ಷದ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲು ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಇಬ್ಬರೂ ನಿರಾಕರಿಸುತ್ತಿದ್ದು, ಅಧ್ಯಕ್ಷ ಸ್ಥಾನಕ್ಕೆ ಪಕ್ಷದ ಹಿರಿಯ ನಾಯಕ ಮತ್ತು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಹೆಸರು ಗಾಂಧಿ ಕುಟುಂಬದ ಬೆಂಬಲದೊಂದಿಗೆ ಮುಂಚೂಣಿಯಲ್ಲಿದೆ.

ಅಂದು ಮಧ್ಯಾಹ್ನ 3.30ಕ್ಕೆ ನಡೆಯಲಿರುವ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯ ಅಧ್ಯಕ್ಷತೆಯನ್ನು ಸೋನಿಯಾ ಅವರು ವರ್ಚು-ವಲ್‌ನಲ್ಲಿ ವಹಿಸಲಿದ್ದಾರೆ. ಅಂದು ಅಧ್ಯಕ್ಷರ ಚುನಾವಣಾ ವೇಳಾಪಟ್ಟಿಗೆ ಅನುಮೋದನೆ ಸಿಗಲಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಟ್ವೀಟ್ ಮಾಡಿದ್ದಾರೆ.

ಪಕ್ಷದ ಹಿರಿಯ ನಾಯಕರೊಬ್ಬರ ಮಾಹಿತಿ ಪ್ರಕಾರ, ಅಧ್ಯಕ್ಷೀಯ ಚುನಾವಣೆ ಘೋಷಿತ ವೇಳಾಪಟ್ಟಿಯನ್ನು ಮೀರಬಹುದು.



ಕೇಂದ್ರ ಚುನಾವಣಾ ಪ್ರಾಧಿಕಾರವು ಅಧಿಸೂಚನೆ ಹೊರಡಿಸಿದ ನಂತರ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ 24 ರಿಂದ 25 ದಿನಗಳು ಬೇಕಾಗಲಿದ್ದು ಚುನಾವಣಾ ಪ್ರಕ್ರಿಯೆ ಅಕ್ಟೋಬರ್ ಮೊದಲ ವಾರ ಪೂರ್ಣವಾಗಲಿದೆ ಎಂದು ಮೂಲಗಳು ಹೇಳಿವೆ.

ಇದೇ ವೇಳೆ ಪಕ್ಷದ ನಾಯಕರು, ರಾಹುಲ್ ಗಾಂಧಿಯವರು ತಮ್ಮ ನಿಲುವಿಗೆ ಅಂಟಿಕೊಂಡರೆ, 2024ರ ವರೆಗೂ ತಾವೇ ಹುದ್ದೆಯಲ್ಲಿ ಮುಂದು-ವರಿಯಬೇಕೆಂದು ಸೋನಿಯಾ ಅವರಿಗೆ ಮನವಿ ಮಾಡಿದ್ದಾರೆ. 2019ರಲ್ಲಿ ರಾಹುಲ್ ರಾಜೀನಾಮೆ ನೀಡಿದ ನಂತರ ಹಂಗಾಮಿ ಅಧ್ಯಕ್ಷೆಯಾಗಿರುವ ಸೋನಿಯಾ ಅವರು ಈ ಹುದ್ದೆಯಲ್ಲಿ ಮುಂದುವರಿಯಲು ಸುತಾರಾಂ ಒಪ್ಪುತ್ತಿಲ್ಲ ಎನ್ನಲಾಗಿದೆ.

ಈ ನಡುವೆ ಪಕ್ಷದ ಅಧ್ಯಕ್ಷ ಸ್ಥಾನ ಮರಳಿ ವಹಿಸಿಕೊಳ್ಳುವಂತೆ ರಾಹುಲ್ ಗಾಂಧಿಯವರಿಗೆ ಮನವಿ ಮಾಡಿರುವ ಗೆಹಲೋತ್ ಬುಧವಾರ ರಾಹುಲ್ ಗಾಂಧಿಯವರನ್ನು ಭೇಟಿ ಮಾಡಲು ಉದ್ದೇಶಿಸಿದ್ದರು. ಆದರೆ ರಾಹುಲ್ ಗಾಂಧಿ ಲಂಡನ್‌ಗೆ ತೆರಳಿದ್ದರಿಂದ ಈ ಭೇಟಿ ಸಾಧ್ಯವಾಗಲಿಲ್ಲ.

ಕಾಂಗ್ರೆಸ್ ತೊರೆದ ಮತ್ತೊಬ್ಬ ನಾಯಕ

ನವದೆಹಲಿ (ಪಿಟಿಐ): ಕಾಂಗ್ರೆಸ್ ವಕ್ತಾರ ಜೈವೀರ್ ಶೆರ್ಗಿಲ್ ಬುಧವಾರ ಪಕ್ಷ ತೊರೆದಿದ್ದು, ಪಕ್ಷದೊಳಗಿನ ಭಟ್ಟಂಗಿತನ ಸಂಘಟನೆಯನ್ನು ಗೆದ್ದಲಿನಂತೆ ತಿನ್ನುತ್ತಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ರಾಷ್ಟ್ರೀಯ ವಕ್ತಾರ ಹುದ್ದೆ ಮತ್ತು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಬರೆದಿರುವ ಪತ್ರದಲ್ಲಿ ಶೆರ್ಗಿಲ್, ‘ಆಧುನಿಕ ಭಾರತ ಮತ್ತು ಯುವಜನರ ಆಕಾಂಕ್ಷೆಗಳಿಗೆ ಕಾಂಗ್ರೆಸ್‌ನ ಸದ್ಯದ ನಿರ್ಣಯಕಾರರ ಸಿದ್ಧಾಂತ ಮತ್ತು ದೂರದೃಷ್ಟಿ ಹೊಂದಿಕೆಯಾಗದು. ಪಕ್ಷ ತ್ಯಜಿಸಲು ಇದೇ ಮೂಲ ಕಾರಣ’ ಎಂದು ತಿಳಿಸಿದ್ದಾರೆ.

‘ನಿರಂತರವಾಗಿ ವಾಸ್ತವಸ್ಥಿತಿ ಕಡೆಗಣನೆ, ಸ್ವಹಿತಾಸಕ್ತಿಯ ಭಟ್ಟಂಗಿತನ ಪ್ರದರ್ಶನ, ಸಾರ್ವಜನಿಕ ಮತ್ತು ದೇಶದ ಹಿತಾಸಕ್ತಿಯಿಲ್ಲದ ನಿರ್ಣಯಗಳನ್ನು ನೈತಿಕವಾಗಿ ಒಪ್ಪಿಕೊಳ್ಳಲು ಮತ್ತು ಇಂತಹವರ ಜತೆ ಕೆಲಸ ಮಾಡಲು ನನಗೆ ಸಾಧ್ಯವಿಲ್ಲ. ಇದನ್ನು ತುಂಬಾ ನೋವಿನಿಂದ ಹೇಳುತ್ತಿರುವೆ’ ಎಂದು ಶೆರ್ಗಿಲ್ ಪತ್ರದಲ್ಲಿ ಹೇಳಿದ್ದಾರೆ.

ಅವಿರೋಧ ಆಯ್ಕೆ ಅನುಮಾನ?

ಅಶೋಕ್ ಗೆಹಲೋತ್ ಅವರು ಗಾಂಧಿ ಪರಿವಾರದ ಅಧಿಕೃತ ಅಭ್ಯರ್ಥಿಯಾಗಿ ಹೊರಹೊಮ್ಮಿದ್ದರೂ, ಪಕ್ಷದ ಜಿ-23 ನಾಯಕರು ತಮ್ಮ ಮನದ ಇಚ್ಛೆಯನ್ನು ಇನ್ನೂ ಬಹಿರಂಗಪಡಿಸಿಲ್ಲ. ಹಾಗಾಗಿ ಗೆಹಲೋತ್ ಅವರ ಅವಿರೋಧ ಆಯ್ಕೆ ಅನುಮಾನ.

ಒಂದು ವೇಳೆ ಚುನಾವಣೆಗೆ ಜಿ–23 ನಾಯಕರು ಒತ್ತಾಯಿಸಿದ್ದೇ ಆದರೆ, ಶಶಿ ತರೂರ್ ಅಥವಾ ಮನೀಶ್ ತಿವಾರಿ ಅವರಂಥ ನಾಯಕರನ್ನು ಮುಂದಿಟ್ಟುಕೊಂಡು ತಮ್ಮ ದಾಳ ಉರುಳಿಸಿ, ಸವಾಲೊಡ್ಡಬಹುದು. ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಗೆ ರಾಜ್ಯಗಳಿಂದ ಸುಮಾರು 9 ಸಾವಿರ ಪ್ರತಿನಿಧಿಗಳು ಮತ ಚಲಾಯಿಸುವ ಅರ್ಹತೆ ಪಡೆದಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾದಿ ಮಹಮ್ಮದ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಶಾಸಕ

ರಾಜಾಸಿಂಗ್ ಬಿಡುಗಡೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಪ್ರವಾದಿ ಮಹಮ್ಮದ್ ಅವರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿ ಬಂಧನಕ್ಕೊಳಗಾಗಿದ್ದ ಬಿಜೆಪಿಯಿಂದ ಅಮಾನತುಗೊಂಡಿರುವ ಶಾಸಕ ರಾಜಾಸಿಂಗ್ ಅವರನ್ನು ಬಿಡುಗಡೆ ಮಾಡಿರುವುದನ್ನು ಆಕ್ಷೇಪಿಸಿ ಹೈದರಾಬಾದ್‌ನ ಹಳೆ ನಗರ ಪ್ರದೇಶಗಳಲ್ಲಿ ಬುಧವಾರ ಪ್ರತಿಭಟನೆಗಳು ನಡೆದಿವೆ.

ಈ ಪ್ರದೇಶದಲ್ಲಿ ಮುಸ್ಲಿಂ ಸಮುದಾಯವು ಹೆಚ್ಚಿನ ಸಂಖ್ಯೆಯಲ್ಲಿದ್ದು, ಪ್ರತಿಭಟನಕಾರರನ್ನು ಹತ್ತಿಕ್ಕಲು ಸೂಕ್ಷ್ಮ ಪ್ರ-ದೇಶಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಶಾಂತಿ ಕಾಪಾಡಲು ನಗರ ಪೊಲೀಸರು ಹಾಗೂ ಕ್ಷಿಪ್ರ ಕಾರ್ಯಾಚರಣೆ ಪಡೆಗಳ ಸಿಬ್ಬಂದಿ ರಸ್ತೆಗಳಲ್ಲಿ ಪಥಸಂಚಲನ ನಡೆಸಿದರು.

ಮಂಗಳವಾರ ಬೆಳಿಗ್ಗೆ ಬಂಧಿಸಲಾಗಿದ್ದ ರಾಜಾಸಿಂಗ್ ಅವರನ್ನು ಕೆಲವೇ ಗಂಟೆಗಳಲ್ಲಿ ಬಿಡುಗಡೆ ಮಾಡಿರುವುದನ್ನು ಪ್ರಶ್ನಿಸಿ ಮುಸ್ಲಿಂ ಯುವ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ರಾಜಾಸಿಂಗ್ ಅವರಿಗೆ ನೋಟಿಸ್ ನೀಡದೆ ಪೊಲೀಸರು ಬಂಧಿಸಿದ್ದರು. ಇದರಿಂದ ಕಾನೂನು ಸೂಕ್ತವಾಗಿ ಪರಿ-ಪಾಲನೆಯಾಗಿಲ್ಲ ಎಂದು ಸಿಂಗ್ ಪರ ವಕೀಲರು ಸ್ಥಳೀಯ ಕೋರ್ಟ್‌ನಲ್ಲಿ ವಾದ ಮಂಡಿಸಿದ್ದರು. ಹಾಗಾಗಿ, ಸಿಂಗ್ ಬಿಡುಗಡೆಗೆ ಕೋರ್ಟ್ ಆದೇಶ ನೀಡಿತ್ತು.

ಈ ನಡುವೆ ರಾಜಾಸಿಂಗ್ ಪ್ರತಿಕ್ರಿಯಿಸಿ, ‘ನಾನು ಶೀಘ್ರ ಕಳುಹಿಸಲಿರುವ ವಿವರಣೆಯಿಂದ ಪಕ್ಷಕ್ಕೆ ತೃಪ್ತಿ-ಯಾಗುತ್ತದೆ ಎಂದು ಭಾವಿಸುತ್ತೇನೆ. ವಿಡಿಯೊದಲ್ಲಿ ನಾನು ಯಾವುದೇ ಸಮುದಾಯಕ್ಕೆ ಅಗೌರವ ತೋರಿಲ್ಲ. ನನ್ನ ವಿರುದ್ಧ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನಾತ್ಮ-ಕವಾಗಿ ಹೋರಾಡುತ್ತೇನೆ’ ಎಂದಿದ್ದಾರೆ

ಪಾಕ್ ಖಂಡನೆ: ತೆಲಂಗಾಣ ಬಿಜೆಪಿ ಶಾಸಕ ಟಿ.ರಾಜಾ ಸಿಂಗ್ ಅವರು ಪ್ರವಾದಿ ಮಹಮ್ಮದ್ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿರುವುದನ್ನು ಪಾಕಿಸ್ತಾನ ಬುಧವಾರ ಖಂಡಿಸಿದೆ.

ಪದೇ ಪದೇ ಆಕ್ಷೇಪಾರ್ಹ ಹೇಳಿಕೆ ಮೂಲಕ ಮುಸ್ಲಿಮರ ಭಾವನೆಗೆ ಧಕ್ಕೆ ತರುತ್ತಿರುವ ಬಿಜೆಪಿ ನಾಯಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದೆ.



ಶಾಸಕ ರಾಜಾ ಸಿಂಗ್ ಬಿಡುಗಡೆ ಖಂಡಿಸಿ ಹೈದರಾಬಾದ್‌ನ ಹಳೆ ನಗರ ಪ್ರದೇಶದಲ್ಲಿ ಬುಧವಾರ ಸ್ಥಳೀಯರು ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಜ್ಞಾನವಾಪಿ: ತೀರ್ಪು ಕಾಯ್ದಿರಿಸಿದ ಕೋರ್ಟ್

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿ– ಶೃಂಗಾರ ಗೌರಿ ಆವರಣ ವಿವಾದಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸುತ್ತಿರುವ ಇಲ್ಲಿಯ ಜಿಲ್ಲಾ ನ್ಯಾಯಾಲಯವು ತೀರ್ಪನ್ನು ಸೆಪ್ಟೆಂಬರ್ 12ರವರೆಗೆ ಕಾಯ್ದಿರಿಸಿದೆ.

ಹಿಂದೂ, ಮುಸ್ಲಿಂ ಅರ್ಜಿದಾರರ ಪರ ವಕೀಲರು ಬುಧವಾರ ತಮ್ಮ ವಾದ ಮಂಡನೆ ಮುಕ್ತಾಯ ಗೊಳಿಸಿರು. ಅದಾದ ಬಳಿಕ ನ್ಯಾಯಾಧೀಶ ಎ.ಕೆ. ವಿಶ್ವೇಶ್ ತೀರ್ಪು ಕಾಯ್ದಿರಿಸಿದ್ದಾ-ರೆಂದು ಹಿಂದು ಅರ್ಜಿದಾರರ ಪರ ವಕೀಲ ಮದನ ಮೋಹನ್ ಯಾದವ್ ತಿಳಿಸಿದ್ದಾರೆ.

‘ಜ್ಞಾನವಾಪಿ ಮಸೀದಿಯು ವಕ್ಫ್ ಮಂಡಳಿಗೆ ಸೇರಿರುವ ಆಸ್ತಿ. ಹಾಗಾಗಿ ಈ ಮೊಕದ್ದಮೆ ಕುರಿತು ವಾದ ಆಲಿಸುವ ಹಕ್ಕು ನ್ಯಾಯಾಲಯಕ್ಕೆ ಇಲ್ಲ ಎಂದು ಈ ಪ್ರಕರಣದಲ್ಲಿ ಮಸೀದಿ ಸಮಿತಿ ಪರ ವಕೀಲರಾಗಿರುವ ಶಮೀಮ್ ಅಹಮದ್ ಹೇಳಿದರು. ಶಮೀಮ್ ಅವರು ಹಳೇ ಹೇಳಿಕೆಯನ್ನೇ ಪುನರುಚ್ಚರಿಸಿದರು. ಅವರು ಕೋರ್ಟ್‌ಗೆ ಒದಗಿಸಿದ ದಾಖಲೆಗಳಲ್ಲಿ ಅಲಾಂಗಿರ್ ಮಸೀದಿಗೆ ಸಂಬಂಧಿಸಿದ ದಾಖಲೆಯೂ ಸೇರಿತ್ತು’ ಎಂದು ಯಾದವ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಭದ್ರತೆ–ಗೋಪ್ಯತೆ: ಅಧಿಕಾರಿಗಳಿಗೆ ನೋಟಿಸ್

ನವದೆಹಲಿ (ಪಿಟಿಐ): ಕಾಂಗ್ರೆಸ್ ಸಂಸದ ಶಶಿತರೂರ್ ನೇತೃತ್ವದ ಮಾಹಿತಿ ತಂತ್ರಜ್ಞಾನ ಕುರಿತ ಸಂಸದೀಯ ಸ್ಥಾಯಿ ಸಮಿತಿಯು ಭಾರತೀಯ ರೈಲ್ವೆ ಕೇಟರಿಂಗ್ ಮತ್ತು ಪ್ರವಾಸೋದ್ಯಮ ನಿಗಮ (ಐಆರ್‌ಸಿಟಿಸಿ) ಹಾಗೂ ಟ್ವಿಟರ್ ಇಂಡಿಯಾದ ಹಿರಿಯ ಅಧಿಕಾರಿಗಳಿಗೆ ಬುಧವಾರ ನೋಟಿಸ್ ನೀಡಿದೆ.

ಸಮಿತಿಯು ನಾಗರಿಕರ ದತ್ತಾಂಶ ಭದ್ರತೆ ಹಾಗೂ ಗೋಪ್ಯತೆ ವಿಚಾರವಾಗಿ ಚರ್ಚಿಸಲು ಶುಕ್ರವಾರ ಸಭೆ ಕರೆದಿದ್ದು, ಈ ವೇಳೆ ಉಭಯ ಸಂಸ್ಥೆಗಳ ಅಧಿಕಾರಿ-ಗಳನ್ನು ಪ್ರಶ್ನಿಸುವ ಸಾಧ್ಯತೆ ಇದೆ.

‘ಆಜಾದ್ ಕಾಶ್ಮೀರ’: ಕೇರಳ ಶಾಸಕನ ವಿರುದ್ಧ ಪ್ರಕರಣ

ತಿರುವನಂತಪುರ: ಜಮ್ಮು ಕಾಶ್ಮೀರವನ್ನು ‘ಭಾರತ ಆಕ್ರಮಿತ ಕಾಶ್ಮೀರ’ ಮತ್ತು ಪಾಕ್ ಆಕ್ರಮಿತ ಕಾಶ್ಮೀರವನ್ನು ‘ಆಜಾದ್ ಕಾಶ್ಮೀರ’ ಎಂದು ಉಲ್ಲೇಖಿಸಿದ ಕಾರಣಕ್ಕೆ ಕೇರಳದ ಎಡಪಕ್ಷದ ಶಾಸಕ ಕೆ. ಟಿ. ಜಲೀಲ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ರಾಷ್ಟ್ರೀಯ ಭಾವೈಕ್ಯತೆ ಮತ್ತು ರಾಷ್ಟ್ರೀಯ ಗೌರವಕ್ಕೆ ಅಪಮಾನ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಪತ್ತನಂತಿಟ್ಟ ಜಿಲ್ಲೆಯ ಕೀಜ್‌ವೈಪುರ್ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಆರ್‌ಎಸ್‌ಎಸ್ ಕಾರ್ಯಕರ್ತನ ಅರ್ಜಿ ಪರಿಗಣಿಸಿ ಪ್ರಕರಣ ದಾಖಲಿಸುವಂತೆ ಸ್ಥಳೀಯ ನ್ಯಾಯಾಲಯ ಪೊಲೀಸರಿಗೆ ಸೂಚಿಸಿದೆ.

ಜಾಮೀನು ಕೋರಿ ‘ಸುಪ್ರೀಂ’ ಮೊರೆ ಹೋದ ಸಿದ್ದಿಕಿ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಹಾಥರಸ್‌ಗೆ ತೆರಳುತ್ತಿದ್ದಾಗ ಬಂಧಿಸಲ್ಪಟ್ಟಿರುವ ಕೇರಳದ ಪತ್ರಕರ್ತ ಸಿದ್ದಿಕಿ ಕಪ್ಪನ್ ಅವರು ಜಾಮೀನು ಕೋರಿ ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ಇದಕ್ಕೂ ಮುನ್ನ ಪ್ರಕರಣದ ವಿಚಾರಣೆ ನಡೆಸಿದ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠ ಕಪ್ಪನ್ ಅವರಿಗೆ ಜಾಮೀನು ನೀಡಲು ನಿರಾಕರಿಸಿತ್ತು.

ಕಾಂಗ್ರೆಸ್ ಯೂಟ್ಯೂಬ್ ಚಾನೆಲ್ ಡಿಲೀಟ್

ನವದೆಹಲಿ (ಪಿಟಿಐ): ತನ್ನ ಯೂಟ್ಯೂಬ್ ಚಾನೆಲ್ ಡಿಲೀಟ್ ಮಾಡಲಾಗಿದೆ ಎಂದು ಕಾಂಗ್ರೆಸ್ ಬುಧವಾರ ತಿಳಿಸಿದ್ದು, ತಾಂತ್ರಿಕ ದೋಷ ಅಥವಾ ವಿಧ್ವಂಸಕ ಕೃತ್ಯ ಇದಕ್ಕೆ ಕಾರಣವೇ ಎಂಬುದರ ಬಗ್ಗೆ ತನಿಖೆ ನಡೆಸುತ್ತಿದೆ.

‘ನಮ್ಮ ಯೂಟ್ಯೂಬ್ ಚಾನೆಲ್ ‘ಇಂಡಿಯನ್ ನ್ಯಾಷನಲ್ ಕಾಂಗ್ರೆಸ್’ ಅನ್ನು ತೆಗೆದು ಹಾಕಲಾಗಿದೆ. ಸರಿಪಡಿಸಲು ಪ್ರಯತ್ನಿಸುತ್ತಿದ್ದು, ಗೂಗಲ್ ಮತ್ತು ಯೂಟ್ಯೂಬ್ ತಂಡಗಳೊಂದಿಗೆ ಸಂಪರ್ಕದಲ್ಲಿದ್ದೇವೆ’ ಎಂದು ಪಕ್ಷವು ತನ್ನ ಅಧಿಕೃತ ಟ್ವಿಟರ್‌ನಲ್ಲಿ ತಿಳಿಸಿದೆ.

ತಾಂತ್ರಿಕ ದೋಷ ಅಥವಾ ವಿಧ್ವಂಸಕ ಕೃತ್ಯ ಇದಕ್ಕೆ ಕಾರಣವೇ ಎಂಬುದರ ಬಗ್ಗೆ ತನಿಖೆ ನಡೆಸುತ್ತಿದ್ದೇವೆ. ಶೀಘ್ರದಲ್ಲೇ ಸರಿ ಹೋಗುವ ಭರವಸೆ ಇದೆ ಎಂದು ಪಕ್ಷದ ಸಾಮಾಜಿಕ ಮಾಧ್ಯಮ ತಂಡ ತಿಳಿಸಿದೆ.

ವಿವಾದಾತ್ಮಕ ಹೇಳಿಕೆ: ನ್ಯಾಯಾಧೀಶರ ವರ್ಗಾವಣೆ

ಕೊಚ್ಚಿ (ಪಿಟಿಐ): ಎರಡು ಪ್ರತ್ಯೇಕ ಲೈಂಗಿಕ ಕಿರುಕುಳ ಪ್ರಕರಣಗಳಲ್ಲಿ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡುವ ವೇಳೆ ವಿವಾದಾತ್ಮಕ ಹೇಳಿಕೆ ನೀಡಿದ್ದ ಕೊಯಿಕ್ಕೋಡ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಎಸ್. ಕೃಷ್ಣಕುಮಾರ್ ಅವರನ್ನು ಕೊಲ್ಲಂ ಜಿಲ್ಲೆಯ ಕಾರ್ಮಿಕ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಲಾಗಿದೆ.

ವರ್ಗಾವಣೆಯು ಆಡಳಿತಾತ್ಮಕ ಕ್ರಮ ಎಂದು ಕೇರಳ ಹೈಕೋರ್ಟ್ ಹೇಳಿದೆ. ಇದೇ ವೇಳೆ ಇನ್ನೂ ಇಬ್ಬರು ನ್ಯಾಯಾಧೀಶರನ್ನು ವರ್ಗಾವಣೆ ಮಾಡಲಾಗಿದೆ. ಕೃಷ್ಣಕುಮಾರ್ ಅವರ ಜಾಗಕ್ಕೆ ಮಂಜೇರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಮುರಳಿ ಕೃಷ್ಣ ಎಸ್. ಅವರನ್ನು ನೇಮಿಸಲಾಗಿದೆ.

ಪರಿಶಿಷ್ಟ ಜಾತಿಯ ಮಹಿಳೆಯ ಮೇಲಿನ ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಚಂದ್ರನ್ ಅವರಿಗೆ ನೀಡಿರುವ ನಿರೀಕ್ಷಣಾ ಜಾಮೀನು ಆದೇಶವನ್ನು ತಡೆಹಿಡಿಯುವಂತೆ ಕೋರಿ ಕೇರಳ ಸರ್ಕಾರವು ಕೇರಳ ಹೈಕೋರ್ಟ್ ಮೆಟ್ಟಿಲೇರಿದೆ.

ಮಹಿಳೆಯೇ ಲೈಂಗಿಕವಾಗಿ ಪ್ರಚೋದನಕಾರಿ ಬಟ್ಟೆ ತೊಟ್ಟಿದ್ದರು ಎಂದು ಹೇಳಿ ಕೃಷ್ಣಕುಮಾರ್, ಸಾಹಿತಿ ಚಂದ್ರನ್ ಅವರಿಗೆ ನಿರೀಕ್ಷಣಾ ಜಾಮೀನು ನೀಡಿದ್ದ ಆದೇಶಕ್ಕೆ ಕೇರಳ ಹೈಕೋರ್ಟ್ ಬುಧವಾರ ತಡೆ ನೀಡಿದೆ.

'ಈ ಪ್ರಕರಣದಲ್ಲಿ ಈ ರೀತಿ ಹೇಳಿಕೆ ನೀಡುವ ಅಗತ್ಯ ಇರಲಿಲ್ಲ. ಆದರೂ ಚಂದ್ರನ್ ಅವರನ್ನು ಬಂಧಿಸಬಾರದು' ಎಂದು ಹೈಕೋರ್ಟ್ ಹೇಳಿದೆ.

ಇ.ಡಿ ದಾಳಿ: ಎರಡು ಎ.ಕೆ –47 ರೈಫಲ್, 60 ಬುಲೆಟ್ ವಶ

ರಾಂಚಿ (ಪಿಟಿಐ): ಜಾರ್ಖಂಡ್‌ನ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಆಗಿರುವ ಹಣ ಅಕ್ರಮ ವರ್ಗಾವಣೆ ಸಂಬಂಧ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಬುಧವಾರ ದೇಶದ ವಿವಿಧೆಡೆ ಶೋಧ ಕಾರ್ಯಾಚರಣೆ ನಡೆಸಿ, ಎರಡು ಎಕೆ - 47 ರೈಫಲ್‌ಗಳು ಮತ್ತು 60 ಜೀವಂತ ಬುಲೆಟ್‌ಗಳನ್ನು ವಶಪಡಿಸಿಕೊಂಡಿದೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿರುವ ಪ್ರೇಮ್ ಪ್ರಕಾಶ್ ಎಂಬುವವರ ರಾಂಚಿಯ ಮನೆಯಲ್ಲಿ ಈ ರೈಫಲ್‌ಗಳು ಮತ್ತು ಜೀವಂತ ಬುಲೆಟ್‌ಗಳನ್ನು ಇ.ಡಿ ವಶಪಡಿಸಿಕೊಂಡಿದೆ. ಜಾರ್ಖಂಡ್, ಬಿಹಾರ, ತಮಿಳುನಾಡು ಮತ್ತು ದೆಹಲಿ ಸೇರಿ ಸುಮಾರು 17ರಿಂದ 20 ಸ್ಥಳಗಳಲ್ಲಿ ಕೇಂದ್ರೀಯ ತನಿಖಾ ಸಂಸ್ಥೆ ಶೋಧ ನಡೆಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಹಾರ: ಸ್ಪೀಕರ್ ಸ್ಥಾನಕ್ಕೆ ಬಿಜೆಪಿಯ ವಿಜಯ್ ಕುಮಾರ್ ರಾಜೀನಾಮೆ

ಬಹುಮತ ಸಾಬೀತುಪಡಿಸಿದ ನಿತೀಶ್

ಪಟ್ನಾ (ಪಿಟಿಐ): ಜೆಡಿಯು ನೇತೃತ್ವದ ಬಿಹಾರದ ಮಹಾಮೈತ್ರಿಕೂಟ ಸರ್ಕಾರವು ಬುಧವಾರ ಬಹುಮತ ಸಾಬೀತು ಮಾಡಿದೆ. 242 ಸದಸ್ಯರ ಬಲದ ವಿಧಾನಸಭೆಯಲ್ಲಿ ಮಹಾಮೈತ್ರಿಕೂಟ ಸರ್ಕಾರವು 160 ಶಾಸಕರ ಬೆಂಬಲ ಪಡೆಯಿತು. ಆದರೆ, ಕಲಾಪವು ಹಲವು ನಾಟಕೀಯ ಬೆಳವಣಿಗೆಗೆ ಸಾಕ್ಷಿಯಾಯಿತು.

ಬಿಜೆಪಿ ಜತೆಗಿನ ಮೈತ್ರಿ ಸರ್ಕಾರದ ಭಾಗವಾಗಿದ್ದ ಜೆಡಿಯು, ಈ ತಿಂಗಳ ಆರಂಭದಲ್ಲಿ ಮೈತ್ರಿಯನ್ನು ತೊರೆದಿತ್ತು. ಮರುದಿನವೇ ಆರ್‌ಜೆಡಿ, ಕಾಂಗ್ರೆಸ್, ಮೂರು ಎಡಪಕ್ಷಗಳು, ಒಂದು ಪ್ರಾದೇಶಿಕ ಪಕ್ಷ ಮತ್ತು ಪಕ್ಷೇತರರ ಬೆಂಬಲ ಪಡೆದು ಸರ್ಕಾರ ರಚಿಸಿತ್ತು.

ಬುಧವಾರ ನಡೆದ ವಿಶೇಷ ಅಧಿವೇಶನದಲ್ಲಿ ವಿಶ್ವಾಸಮತ ಗೊತ್ತುವಳಿಯನ್ನು ಮತಕ್ಕೆ ಹಾಕಬೇಕಿತ್ತು. ಆದರೆ, ಸ್ಪೀಕರ್ ವಿಜಯ್ ಕುಮಾರ್ ಸಿನ್ಹಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಲಾಪವನ್ನು ಮಧ್ಯಾಹ್ನ ಎರಡು ಗಂಟೆಯವರೆಗೆ ಮುಂದೂಡಿದರು. ಸದನ ಆರಂಭವಾದಾಗ, ಜೆಡಿಯು ಶಾಸಕ ನರೇಂದ್ರ ನಾರಾಯಣ್ ಯಾದವ್ ಅವರು ಸ್ಪೀಕರ್ ಸ್ಥಾನದಲ್ಲಿ ಕಲಾಪ ನಡೆಸಲಿದ್ದಾರೆ ಎಂದು ಘೋಷಿಸಿದರು.

ಇದಕ್ಕೆ ಡೆಪ್ಯುಟಿ ಸ್ಪೀಕರ್ ಮಹೇಶ್ವರ್ ಹಜಾರಿ ಆಕ್ಷೇಪ ವ್ಯಕ್ತಪಡಿಸಿದರು. 'ಡೆಪ್ಯುಟಿ ಸ್ಪೀಕರ್ ಇದ್ದರೂ, ಆತ ದಲಿತನಾದ ಕಾರಣ ಕಲಾಪ ನಡೆಸುವ ಅವಕಾಶವನ್ನು ವಿಜಯ್ ಕುಮಾರ್ ಸಿನ್ಹಾ ನಿರಾಕರಿಸಿದ್ದಾರೆ' ಎಂದು ಆರೋಪಿಸಿದರು.

ಎರಡು ಗಂಟೆಗೆ ಕಲಾಪ ಆರಂಭಿಸಿದ ನಾರಾಯಣ್ ಯಾದವ್ ಅವರು, ಕಲಾಪವನ್ನು ಮಹೇಶ್ವರ್ ಹಜಾರಿ ಮುನ್ನಡೆಸಲಿದ್ದಾರೆ ಎಂದು ಹೇಳಿದರು. ಆನಂತರ ಕಲಾಪವನ್ನು ಮಹೇಶ್ವರ್ ಅವರು ಮುನ್ನಡೆಸಿದರು.

ಆದರೆ ಅಷ್ಟರಲ್ಲಿ ಬಿಜೆಪಿ ಮತ್ತು ಮೈತ್ರಿಕೂಟದ ಶಾಸಕರ ಮಧ್ಯೆ ವಾಗ್ವಾದ ನಡೆಯಿತು. ಬಿಜೆಪಿ ಸದಸ್ಯರು ಜೆಡಿಯು ವಿರುದ್ಧ ಘೋಷಣೆ ಕೂಗಿ ಸದನದಿಂದ ಹೊರನಡೆದರು. ಆನಂತರ ತಲೆ ಎಣಿಕೆ ಮೂಲಕ ಬಹುಮತ ಸಾಬೀತು ಮಾಡುವಂತೆ ಸೂಚಿಸಲಾಯಿತು. ಮುಖ್ಯಮಂತ್ರಿ ನಿತೀಶ್ ಕುಮಾರ್ ಇದನ್ನು ನಿರಾಕರಿಸಿದರು. ಆಗ ಗೊತ್ತುವಳಿಯನ್ನು ಧ್ವನಿಮತಕ್ಕೆ ಹಾಕಲಾಯಿತು. ಸದನದಲ್ಲಿ ಇದ್ದ 160 ಮಂದಿಯೂ ಗೊತ್ತುವಳಿಯ ಪರವಾಗಿ ಮತ ಹಾಕಿದರು.



ಸಿಬಿಐ ಶೋಧಕಾರ್ಯದ ವಿರುದ್ಧ ಆರ್‌ಜೆಡಿ ಶಾಸಕರು ಪಟ್ನಾದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

> **ದೆಹಲಿಯಲ್ಲಿ ಕುಳಿತಿರುವವರಿಗೆ ಬಿಹಾರದ ಜನರ ಧೈರ್ಯ ಅರ್ಥವಾಗುವುದಿಲ್ಲ. ನಿಮ್ಮ ಮೂವರು ಅಳಿಯಂದರನ್ನು (ಐಟಿ, ಇ.ಡಿ, ಸಿಬಿಐ) ಇಲ್ಲಿಗೆ ಕಳುಹಿಸಿ ನಮ್ಮನ್ನು ಹೆದರಿಸಲು ಸಾಧ್ಯವಿಲ್ಲ**
> **ತೇಜಸ್ವಿ ಯಾದವ್**, ಬಿಹಾರ ಉಪಮುಖ್ಯಮಂತ್ರಿ

> **ಬಿಹಾರದ ಜನರು ಇದನ್ನೆಲ್ಲಾ ನೋಡುತ್ತಿದ್ದಾರೆ. ಸಿಬಿಐ ಶೋಧ ಕಾರ್ಯದ ಹಿಂದೆ ಏನಿದೆ ಎಂಬುದನ್ನು ಜನರು ಅರ್ಥ ಮಾಡಿಕೊಳ್ಳುತ್ತಾರೆ**
> **ರಾಬ್ಡಿ ದೇವಿ**, ಆರ್‌ಜೆಡಿ ನಾಯಕಿ

> **ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಸರ್ಕಾರದ ಭಾಗವಾಗಿರುವ ಯಾವ ನಾಯಕರ ಮನೆಯಲ್ಲಿ ಶೋಧ ಕಾರ್ಯ ನಡೆಯುವುದೇ ಇಲ್ಲ**
> **ಸಂದೀಪ್ ಸೌರವ್**, ಸಿಪಿಐಎಂಎಲ್ ಶಾಸಕ

ಆರ್‌ಜೆಡಿ ನಾಯಕರ ಮನೆಗಳಲ್ಲಿ ಶೋಧ

ಆರ್‌ಜೆಡಿ ಮಿತ್ರಪಕ್ಷವಾಗಿರುವ ಮಹಾಮೈತ್ರಿಕೂಟ ಸರ್ಕಾರವು ಸದನದಲ್ಲಿ ಬಹುಮತ ಸಾಬೀತು ಮಾಡಬೇಕಿದ್ದ ದಿನವೇ, ಪಕ್ಷದ ಹಲವು ನಾಯಕರ ಮನೆ ಮತ್ತು ಕಚೇರಿಗಳಲ್ಲಿ ಸಿಬಿಐ ಶೋಧಕಾರ್ಯ ನಡೆಸಿದೆ. ಇದು ಮಹಾಮೈತ್ರಿಕೂಟದ ಪಕ್ಷಗಳು ಮತ್ತು ಬಿಜೆಪಿ ನಡುವೆ ವಾಗ್ವಾದಕ್ಕೆ ಕಾರಣವಾಗಿದೆ.

ಪಟ್ನಾ, ಗುರುಗ್ರಾಮ, ದೆಹಲಿ, ಮಧುಬನಿಯಲ್ಲಿನ ಒಟ್ಟು 25 ಸ್ಥಳಗಳಲ್ಲಿ ಏಕಕಾಲದಲ್ಲಿ ಶೋಧಕಾರ್ಯ ನಡೆಸಲಾಗಿದೆ. ಆರ್‌ಜೆಡಿಯ, ವಿಧಾನ ಪರಿಷತ್ ಸದಸ್ಯ ಸುನೀಲ್ ಸಿಂಗ್, ಸಂಸದರಾದ ಅಶ್ಫಾಕ್ ಕರೀಂ ಮತ್ತು ಫಯಾಜ್ ಅಹ್ಮದ್ ಹಾಗೂ ಮಾಜಿ ಶಾಸಕ ಸುಬೋಧ್ ರಾಯ್ ಅವರ ಮನೆ ಮತ್ತು ಕಚೇರಿಗಳಲ್ಲಿ ಶೋಧಕಾರ್ಯ ನಡೆಸಲಾಗಿದೆ. 2004–2009ರ ಯುಪಿಎ–1 ಸರ್ಕಾರದ ಅವಧಿಯಲ್ಲಿ ಲಾಲು ಪ್ರಸಾದ್ ಅವರು ರೈಲ್ವೆ ಸಚಿವರಾಗಿದ್ದಾಗ ಅಕ್ರಮ ಎಸಗಿದ್ದಾರೆ ಎಂದು ಸಿಬಿಐ ಆರೋಪಿಸಿದೆ. ಶೋಧ ಕಾರ್ಯದ ವೇಳೆ, ಆಸ್ತಿ ವರ್ಗಾವಣೆಗೆ ಸಂಬಂಧಿಸಿದ 200 ದಾಖಲೆಗಳು ಮತ್ತು ಭಾರಿ ಪ್ರಮಾಣದ ನಗದು ವಶಕ್ಕೆ ತೆಗೆದುಕೊಳ್ಳಲಾಗಿದೆ. ಆರ್‌ಜೆಡಿ ಮುಖ್ಯಸ್ಥರಾಗಿರುವ ಲಾಲು ಪ್ರಸಾದ್ ಅವರು ತಾವು ರೈಲ್ವೆ ಸಚಿವರಾಗಿದ್ದಾಗ, ನೌಕರಿ ನೀಡಲು ಜಮೀನು ಪಡೆದಿದ್ದರು. ಈ ಹಗರಣಕ್ಕೆ ಸಂಬಂಧಿಸಿದಂತೆ ಬುಧವಾರ ಶೋಧಕಾರ್ಯ ನಡೆಸಲಾಗಿದೆ. ಗುರುಗ್ರಾಮದ ಸೆಕ್ಟರ್ 77ರಲ್ಲಿ ನಿರ್ಮಿಸಲಾಗುತ್ತಿರುವ ಮಾಲ್ ಒಂದರಲ್ಲಿ ತೇಜಸ್ವಿ ಯಾದವ್ ಪಾಲುದಾರಿಕೆ ಹೊಂದಿದ್ದಾರೆ. ನೌಕರಿಗಾಗಿ ಜಮೀನು ಹಗರಣಕ್ಕೂ, ಮಾಲ್ ನಿರ್ಮಿಸುತ್ತಿರುವ ಜಾಗಕ್ಕೂ ಸಂಬಂಧವಿದೆ ಎಂದು ಸಿಬಿಐ ಮೂಲಗಳು ಹೇಳಿವೆ.

ಯುದ್ಧಪೀಡಿತ ಉಕ್ರೇನ್‌ನಲ್ಲಿ 31ನೇ ಸ್ವಾತಂತ್ರ್ಯೋತ್ಸವ

ಕೀವ್/ವಾಷಿಂಗ್ಟನ್ (ರಾಯಿಟರ್ಸ್/ಎಪಿ): ರಷ್ಯಾ ಉಕ್ರೇನ್ ಮೇಲೆ ಸೇನಾ ಕಾರ್ಯಾಚರಣೆ ಆರಂಭಿಸಿ ಬುಧವಾರಕ್ಕೆ (ಆ.24) ಸರಿಯಾಗಿ ಆರು ತಿಂಗಳು ಪೂರ್ಣಗೊಂಡಿತು. ಮೂರು ದಶಕಗಳ ಹಿಂದೆ ಸೋವಿಯತ್ ಒಕ್ಕೂಟದಿಂದ ಹೊರ ಬಂದ ಉಕ್ರೇನ್ ಪಾಲಿಗೂ ಆ.24 ಸ್ವಾತಂತ್ರ್ಯದ ಸಂಭ್ರಮದ ದಿನ. ಆದರೆ, ಈ ಬಾರಿ ಉಕ್ರೇನಿಗರ ಪಾಲಿಗೆ ಸಂಭ್ರಮವಿರಲಿಲ್ಲ. ವಾಯು ದಾಳಿಯ ಸೈರನ್ ಕೇಳಿಸಿಕೊಂಡೇ ಬೆಳಿಗ್ಗೆ ಹಾಸಿಗೆಯಿಂದ ಮೇಲೆದ್ದರು. ಯುದ್ಧಗ್ರಸ್ಥ ನೆಲದಲ್ಲಿ 31ನೇ ವರ್ಷದ ಸ್ವಾತಂತ್ರ್ಯೋತ್ಸವವನ್ನೂ ಸಾಂಕೇತಿಕವಾಗಿ ಆಚರಿಸಿದರು.

ಉಕ್ರೇನ್ ಸ್ವಾತಂತ್ರ್ಯ ದಿನವನ್ನು ಭಂಗಗೊಳಿಸಲು ಭೀಕರ ದಾಳಿಗೆ ರಷ್ಯಾ ಮುಂದಾಗಬಹುದೆಂದು ದೇಶದ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮುನ್ನೆಚ್ಚರಿಕೆ ನೀಡಿದ್ದರಿಂದ ಬುಧವಾರ ದೇಶದಾದ್ಯಂತ ಜನರು ಎಲ್ಲಿಯೂ ದೊಡ್ಡ ಸಂಖ್ಯೆಯಲ್ಲಿ ಒಗ್ಗೂಡಲಿಲ್ಲ.

300 ಕೋಟಿ ಡಾಲರ್ ಮೊತ್ತದ ರಕ್ಷಣಾ ನೆರವು: 31ನೇ ವರ್ಷದ ಸ್ವಾತಂತ್ರ್ಯ ದಿನವನ್ನು ಬುಧವಾರ ಆಚರಿಸಿಕೊಂಡ ಯುದ್ಧಪೀಡಿತ ಉಕ್ರೇನ್‌ಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು 300 ಕೋಟಿ ಡಾಲರ್ ಮೊತ್ತದ ರಕ್ಷಣಾ ನೆರವು ಘೋಷಿಸಿದ್ದಾರೆ.

ಬೈಡನ್ ಆಡಳಿತದ ಪ್ರಮುಖ ಹುದ್ದೆಗಳಿಗೆ 130ಕ್ಕೂ ಹೆಚ್ಚು ಭಾರತೀಯ–ಅಮೆರಿಕನ್ನರು

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಆಡಳಿತದ ವಿವಿಧ ವಿಭಾಗಗಳ ಪ್ರಮುಖ ಹುದ್ದೆಗಳಿಗೆ 130ಕ್ಕೂ ಹೆಚ್ಚು ಭಾರತೀಯ–ಅಮೆರಿಕನ್ನರನ್ನು ನೇಮಕ ಮಾಡಿದ್ದಾರೆ.

ಈ ಮೂಲಕ, 2020ರ ಅಧ್ಯಕ್ಷೀಯ ಚುನಾವಣೆ ವೇಳೆ ನೀಡಿದ್ದ ಭರವಸೆ ಈಡೇರಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ 80ಕ್ಕೂ ಹೆಚ್ಚು ಹಾಗೂ ಬರಾಕ್ ಒಬಾಮ ಅವರ ಅಧಿಕಾರಾವಧಿಯಲ್ಲಿ 60ಕ್ಕೂ ಹೆಚ್ಚು ಭಾರತೀಯ–ಅಮೆರಿಕನ್ನರನ್ನು ನೇಮಕ ಮಾಡಲಾಗಿತ್ತು. ಹಾಗಾಗಿ, ಬೈಡನ್ ಅವರು ಹೆಚ್ಚಿನ ಸಂಖ್ಯೆಯ ಭಾರತೀಯ–ಅಮೆರಿಕನ್ನರಿಗೆ ಮಣೆ ಹಾಕುವ ಮೂಲಕ ಈ ಹಿಂದಿನ ದಾಖಲೆ ಮುರಿದಿದ್ದಾರೆ ಎಂದೂ ತಿಳಿಸಿವೆ.

ಅಮೆರಿಕ ಜನಸಂಖ್ಯೆಯಲ್ಲಿ ಭಾರತೀಯ ಸಮುದಾಯದ ಪ್ರಮಾಣ ಶೇ 1ರಷ್ಟಿದೆ.

ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪ್ರಶ್ನೆ

ಉಚಿತ ಕೊಡುಗೆ ಪರಿಣಾಮದ ಕುರಿತ ಅಧ್ಯಯನಕ್ಕೆ ಸಮಿತಿ ಏಕೆ ರಚಿಸಬಾರದು

ಪ್ರಜಾವಾಣಿ ವಾರ್ತೆ

ನವದೆಹಲಿ: 'ಚುನಾವಣಾ ಪೂರ್ವದಲ್ಲಿ ಮತದಾರರನ್ನು ಸೆಳೆಯಲು ರಾಜಕೀಯ ಪಕ್ಷಗಳು 'ಉಚಿತ ಕೊಡುಗೆ'ಗಳನ್ನು ಪ್ರಕಟಿಸುತ್ತಿದ್ದು, ಇದರಿಂದ ಆಗಬಹುದಾದ ಪರಿಣಾಮದ ಕುರಿತ ಅಧ್ಯಯನಕ್ಕೆ ಸಮಿತಿಯೊಂದನ್ನು ಏಕೆ ರಚಿಸಬಾರದು. ಈ ಸಂಬಂಧ ಸರ್ವಪಕ್ಷಗಳ ಸಭೆ ನಡೆಸಲು ಏಕೆ ಸಾಧ್ಯವಿಲ್ಲ' ಎಂದು ಸುಪ್ರೀಂ ಕೋರ್ಟ್ ಬುಧವಾರ ಕೇಂದ್ರ ಸರ್ಕಾರವನ್ನು ಕೇಳಿದೆ.

ಉಚಿತ ಕೊಡುಗೆಗಳನ್ನು ಘೋಷಿಸುವುದರಿಂದ ಆರ್ಥಿಕತೆ ಮತ್ತು ಪಾರದರ್ಶಕ ಚುನಾವಣೆ ಪ್ರಕ್ರಿಯೆ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ಪರಿಶೀಲಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ವಕೀಲ ಹಾಗೂ ಬಿಜೆಪಿ ಮುಖಂಡ ಅಶ್ವಿನಿ ಕುಮಾರ್ ಉಪಾಧ್ಯಾಯ ಅರ್ಜಿ ಸಲ್ಲಿಸಿದ್ದರು.



ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಸಿ.ಟಿ.ರವಿಕುಮಾರ್ ಅವರನ್ನೊಳಗೊಂಡ ತ್ರಿಸದಸ್ಯ ಪೀಠವು ಬುಧವಾರ ಇದರ ವಿಚಾರಣೆ ನಡೆಸಿತು.

'ಉಚಿತ ಕೊಡುಗೆಗಳನ್ನು ಘೋಷಿಸುವುದು ಹಾಗೂ ಅದನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಸೇರ್ಪಡೆಮಾಡುವುದು ತಮ್ಮ ಮೂಲಭೂತ ಹಕ್ಕು ಎಂದು ಪಕ್ಷಗಳು ಪ್ರತಿಪಾದಿಸುತ್ತವೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ಹೇಳಿದರು.

'ಸಂವಿಧಾನದ ವಿಧಿ 19ರ ಪ್ರಕಾರ ಮುಕ್ತವಾಗಿ ಮಾತನಾಡುವ, ಚುನಾವಣಾ ಭಾಷಣಗಳನ್ನು ಮಾಡುವ ಹಾಗೂ ಭರವಸೆಗಳನ್ನು ನೀಡುವ ಹಕ್ಕು ಇದೆ ಎಂದು ಆಮ್ ಆದ್ಮಿ ಪಕ್ಷ (ಎಎಪಿ) ವಾದಿಸುತ್ತಿದೆ. 'ಉಚಿತ ಕೊಡುಗೆ' ಕುರಿತ ಎಲ್ಲಾ ಮಾಹಿತಿ ಹಾಗೂ ದತ್ತಾಂಶಗಳನ್ನು ಕೇಂದ್ರವು ಶೀಘ್ರವೇ ಪೀಠದ ಮುಂದೆ ಇಡಲಿದೆ' ಎಂದೂ ಮೆಹ್ತಾ ತಿಳಿಸಿದರು.

ನಿವೃತ್ತ ಮುಖ್ಯ ನ್ಯಾಯಮೂರ್ತಿ ಆರ್.ಎಂ.ಲೋಧಾ ಹಾಗೂ ಮಾಜಿ ಸಿಎಜಿ ವಿನೋದ್ ರಾಯ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸುವಂತೆ ಅರ್ಜಿದಾರರ ಪರ ವಕೀಲ ವಿಕಾಸ್ ಸಿಂಗ್ ಅವರು ಪೀಠಕ್ಕೆ ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿಯವರು 'ಈಗಾಗಲೇ ನಿವೃತ್ತರಾಗಿರುವ ಹಾಗೂ ನಿವೃತ್ತಿಯ ಅಂಚಿನಲ್ಲಿರುವವರಿಗೆ ಈ ದೇಶದಲ್ಲಿ ಬೆಲೆ ಇಲ್ಲ' ಎಂದರು.

ಎಚ್–1ಬಿ ವೀಸಾ: 65 ಸಾವಿರ ಅರ್ಜಿ ಸಲ್ಲಿಕೆ

ವಾಷಿಂಗ್ಟನ್ (ಪಿಟಿಐ): ಎಚ್–1ಬಿ ವೀಸಾ ಕೋರಿ 65 ಸಾವಿರ ಅರ್ಜಿಗಳು ಸಲ್ಲಿಕೆಯಾಗಿವೆ. 2023ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿ ಸಂಸತ್ ನಿಗದಿಪಡಿಸಿರುವ ಮಿತಿಯಷ್ಟು ಸಂಖ್ಯೆಯ ಅರ್ಜಿಗಳನ್ನು ಸ್ವೀಕರಿಸಿದಂತಾಗಿದೆ ಎಂದು ಅಮೆರಿಕ ಪೌರತ್ವ ಮತ್ತು ವಲಸೆ ಸೇವಾ ಸಂಸ್ಥೆಯು (ಯುಎಸ್‌ಸಿಐಎಸ್) ಮಂಗಳವಾರ ಹೇಳಿದೆ.

ಅಮೆರಿಕದ ಕಂಪನಿಗಳು, ವಿಶೇಷ ಕೌಶಲ ಅಗತ್ಯವಿರುವ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ವಿದೇಶಿಯರಿಗೆ ಈ ಎಚ್–1ಬಿ ವೀಸಾ ನೀಡಲಾಗುತ್ತದೆ. ಅದರಲ್ಲೂ, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕಂಪನಿಗಳು ಪ್ರತಿವರ್ಷ ಚೀನಾ ಮತ್ತು ಭಾರತದ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡಿಕೊಳ್ಳುತ್ತವೆ.

'ಈ ಮಿತಿಯಿಂದ ವಿನಾಯಿತಿ ನೀಡಲಾದ ವರ್ಗಗಳಿಗೆ ಸೇರಿದ ವೀಸಾ ಅರ್ಜಿಗಳ ಸ್ವೀಕಾರ ಹಾಗೂ ವಿಲೇವಾರಿ ಪ್ರಕ್ರಿಯೆಯನ್ನು ಮುಂದುವರಿಸಲಾಗುವುದು' ಎಂದು ಯುಎಸ್‌ಸಿಐಎಸ್ ಹೇಳಿದೆ.

ಹಿಂದೂ ದೇವರ ಬಗ್ಗೆ ಹೇಳಿಕೆ ನೀಡಿದ ಆರೋಪ

ತಮ್ಮ ಹೇಳಿಕೆಯು ಶೈಕ್ಷಣಿಕ ಭಾಗವಾಗಿದ್ದು, ಇದನ್ನು ತಪ್ಪಾಗಿ ಉಲ್ಲೇಖಿಸಲಾಗಿದೆ ಎಂದು ಕುಲಪತಿ ಶಾಂತಿಶ್ರೀ ಅವರು ಸ್ಪಷ್ಟಪಡಿಸಿದ್ದಾರೆ.

ಜೆಎನ್‌ಯು ಕುಲಪತಿ ಶಾಂತಿಶ್ರೀ ಧೂಳಿಪುಡಿ ವಜಾಕ್ಕೆ ಒತ್ತಾಯ

ಲಖನೌ: ಹಿಂದೂ ದೇವರುಗಳ ಬಗ್ಗೆ ಹೇಳಿಕೆ ನೀಡಿರುವ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಕುಲಪತಿ ಶಾಂತಿಶ್ರೀ ಧೂಳಿಪುಡಿ ಪಂಡಿತ್ ಅವರನ್ನು ತಕ್ಷಣವೇ ವಜಾಗೊಳಿಸಿ, ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಅಯೋಧ್ಯೆಯ ಪ್ರಮುಖ ಸಂತರು ಬುಧವಾರ ಒತ್ತಾಯಿಸಿದ್ದಾರೆ.

'ದೇವರುಗಳು ಮೇಲ್ಜಾತಿಗೆ ಸೇರಿದವರಲ್ಲ. ಶಿವ ಸಹ ಪರಿಶಿಷ್ಟ ಜಾತಿ ಅಥವಾ ಪಂಗಡದವನಾಗಿರಬಹುದು' ಎಂದು ಕುಲಪತಿ ಹೇಳಿಕೆ ನೀಡಿದ್ದರು.

'ಪಂಡಿತ್ ಅವರ ಹೇಳಿಕೆಯು ವಿಶ್ವದಾದ್ಯಂತ ಲಕ್ಷಾಂತರ ಹಿಂದೂಗಳ ಭಾವನೆಗಳಿಗೆ ನೋವುಂಟು ಮಾಡಿದೆ. ಹುದ್ದೆಯಲ್ಲಿ ಮುಂದುವರಿಯಲು ಅವರಿಗೆ ಅವಕಾಶ ನೀಡಬಾರದು. ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿ ಅವರನ್ನು ವಜಾಗೊಳಿಸುವಂತೆ ಒತ್ತಾಯಿಸುತ್ತೇವೆ. ಅವರ ವಿರುದ್ಧ ದೇಶದ ಪ್ರತಿ ಜಿಲ್ಲೆಯಲ್ಲಿ ಪ್ರತಿಭಟನೆ ನಡೆಸುವಂತೆ ಹಿಂದೂ ಸಂಘಟನೆಗಳಿಗೆ ಮನವಿ ಮಾಡಲಾಗುವುದು' ಎಂದು ಅಯೋಧ್ಯೆಯ ಪ್ರಸಿದ್ಧ ಹನುಮಂಗರಹಿ ದೇವಸ್ಥಾನದ ಮಹಂತ್ ರಾಜು ದಾಸ್ ಹೇಳಿದ್ದಾರೆ.


ಥಾಯ್ಲೆಂಡ್ ಪ್ರಧಾನಿ ಪ್ರಯುತ್ ಅಮಾನತು

ಬ್ಯಾಂಕಾಕ್ (ಎಎಫ್‌ಪಿ): ಥಾಯ್ಲೆಂಡ್‌ನ ಸಾಂವಿಧಾನಿಕ ನ್ಯಾಯಾಲಯವು ಪ್ರಯುತ್ ಚನ್–ಒ–ಚಾ ಅವರನ್ನು ಪ್ರಧಾನಿ ಹುದ್ದೆಯಿಂದ ಬುಧವಾರ ಅಮಾನತು ಮಾಡಿದೆ. ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವ ಹೊತ್ತಿನಲ್ಲೇ ಈ ತೀರ್ಮಾನ ಕೈಗೊಂಡಿದೆ.

ಥಾಯ್ಲೆಂಡ್ ಪ್ರಧಾನಿ ಹುದ್ದೆಗೇರುವವರ ಕಾರ್ಯಾವಧಿಯು ಎಂಟು ವರ್ಷದ್ದಾಗಿರಲಿದೆ. ಪ್ರಯುತ್ ಈಗಾಗಲೇ ಈ ಅವಧಿ ಪೂರ್ಣಗೊಳಿಸಿದ್ದಾರೆ. ಹೀಗಾಗಿ ಅವರನ್ನು ಹುದ್ದೆಯಿಂದ ಕೆಳಗಿಳಿಸಬೇಕೆಂದು ಕೋರಿ ವಿರೋಧ ಪಕ್ಷಗಳು ಅರ್ಜಿ ಸಲ್ಲಿಸಿದ್ದವು. ನ್ಯಾಯಾಲಯವು ಬುಧವಾರ ಇದರ ವಿಚಾರಣೆ ನಡೆಸಿತು.

'ಅರ್ಜಿದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಆಗಸ್ಟ್ 24ರಿಂದಲೇ ಜಾರಿಯಾಗುವಂತೆ ಪ್ರಯುತ್ ಅವರನ್ನು ಪ್ರಧಾನಿ ಹುದ್ದೆಯಿಂದ ಅಮಾನತು ಮಾಡುವ ನಿರ್ಣಯ ಕೈಗೊಳ್ಳಲಾಗಿದೆ. ಅಂತಿಮ ತೀರ್ಪು ಪ್ರಕಟವಾಗುವವರೆಗೂ ಅವರು ಅಮಾನತಿನಲ್ಲಿರಲಿದ್ದಾರೆ' ಎಂದು ನ್ಯಾಯಾಲಯ ಹೇಳಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,577
ಇಂದಿನ ಅಂತ್ಯ	17,604
▲	27
ದಿನದ ಗರಿಷ್ಠ	17,623

ವಿನಿಮಯ ದರ

$ ಡಾಲರ್	79.86
£ ಪೌಂಡ್	94.32
€ ಯುರೊ	79.34
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1710 (1660)
ಸೋಯಾ (ರಿಫೈನ್ಡ್)	₹1265 (1255)
ಸೂರ್ಯಕಾಂತಿ (ರಿಫೈನ್ಡ್)	₹1510 (1500
ಪಾಮೋಲಿನ್	₹1080 (1100)

ಮುತ್ತೂಟ್: 'ಮಿಲಿಗ್ರಾಂ ಚಿನ್ನ ಕೊಡುಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುತ್ತೂಟ್ ಫೈನಾನ್ಸ್, ತನ್ನ ಗ್ರಾಹಕರಿಗೆ 'ಮಿಲಿಗ್ರಾಂ ಕೊಡುಗೆ ಕಾರ್ಯಕ್ರಮ' ಆರಂಭಿಸಿದೆ. ಮುತ್ತೂಟ್ ಸಮೂಹದೊಂದಿಗೆ ವ್ಯವಹರಿಸುವ ಗ್ರಾಹಕರಿಗೆ ಕನಿಷ್ಠ ಒಂದು ಮಿಲಿಗ್ರಾಂ ಚಿನ್ನವನ್ನು ಬಹುಮಾನವಾಗಿ ನೀಡಲಾಗುತ್ತದೆ.

ಎರಡು ವರ್ಷಗಳ ಅವಧಿಯ ಈ ಕಾರ್ಯಕ್ರಮವು ಗ್ರಾಹಕರ ನಡುವೆ ಬಾಂಧವ್ಯ ಬಲಪಡಿಸುವ ಮತ್ತು ಗ್ರಾಹಕರನ್ನು ಸೆಳೆಯುವ ಗುರಿ ಹೊಂದಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇದು 2022ರ ಏಪ್ರಿಲ್ 1ರಿಂದ ಎಲ್ಲ ವ್ಯವಹಾರಗಳಿಗೆ ಅನ್ವಯವಾಗುತ್ತದೆ. ಬೇರೆ ಗ್ರಾಹಕರನ್ನು ಪರಿಚಯಿಸುವ ವ್ಯವಹಾರದಲ್ಲಿ (ರೆಫರಲ್) ಪ್ರತಿ ಗ್ರಾಹಕರು 20 ಮಿಲಿಗ್ರಾಂ ಚಿನ್ನ ಪಡೆಯಲಿದ್ದಾರೆ. ಈ ಕಾರ್ಯಕ್ರಮದ ಮೂಲಕ ಪ್ರತಿ ವರ್ಷ ₹ 50 ಕೋಟಿ ಮೌಲ್ಯದ ಚಿನ್ನವನ್ನು ಕೊಡುವ ನಿರೀಕ್ಷೆ ಇದೆ ಎಂದು ಹೇಳಿದೆ.

ದೇಶದಲ್ಲಿ ಇದೇ ಮೊದಲ ಬಾರಿಗೆ 24 ಕ್ಯಾರಟ್ ಬಂಗಾರ ನೀಡುವ ವಿಶಿಷ್ಟ ಉಪಕ್ರಮವನ್ನೂ ಆರಂಭ ಮಾಡಿರುವುದಾಗಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಂಪನಿಯ ವೆಬ್‌ಸೈಟ್‌ಗೆ ಭೇಟಿ ನೀಡಲು ತಿಳಿಸಿದೆ.

ಬ್ಯಾಂಕ್ ಆಫ್ ಬರೋಡ ತಿರಂಗಾ ಠೇವಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಪ್ರಮುಖ ಬ್ಯಾಂಕ್‌ಗಳ ಪೈಕಿ ಒಂದಾಗಿರುವ ಬ್ಯಾಂಕ್ ಆಫ್ ಬರೋಡ, ಬರೋಡ ತಿರಂಗಾ ಠೇವಣಿ ಯೋಜನೆ ಆರಂಭಿಸಿದೆ. ಇದರ ಅಡಿಯಲ್ಲಿ ಅವಧಿ ಠೇವಣಿಗಳಿಗೆ ಹೆಚ್ಚಿನ ಬಡ್ಡಿ ಸಿಗಲಿದೆ.

ಎರಡು ಅವಧಿಗಳ ಠೇವಣಿಗಳು ಇವು. 444 ದಿನಗಳ ಠೇವಣಿ ಮೇಲೆ ಶೇಕಡ 5.75ರಷ್ಟು, 555 ದಿನಗಳ ಠೇವಣಿಗಳಿಗೆ ಶೇ 6ರಷ್ಟು ಬಡ್ಡಿ ನೀಡಲಾಗುತ್ತದೆ ಎಂದು ಬ್ಯಾಂಕ್ ತಿಳಿಸಿದೆ. ಡಿಸೆಂಬರ್ 31ರವರೆಗೆ ಈ ಠೇವಣಿಗಳು ಮುಕ್ತವಾಗಿರಲಿವೆ. ₹ 2 ಕೋಟಿಗಿಂತ ಕಡಿಮೆ ಮೊತ್ತದ ಠೇವಣಿಗಳಿಗೆ ಮಾತ್ರ ಈ ಸೌಲಭ್ಯ ಸಿಗಲಿದೆ.

ಹಿರಿಯ ನಾಗರಿಕರಿಗೆ ಠೇವಣಿಗಳ ಮೇಲೆ ಶೇ 0.50ರಷ್ಟು ಹೆಚ್ಚುವರಿ ಬಡ್ಡಿ ಲಭ್ಯವಾಗಲಿದೆ. ಅಲ್ಲದೆ, ಅವಧಿಗೆ ಮೊದಲು ಹಿಂದಕ್ಕೆ ಪಡೆಯದಿರುವ ಆಯ್ಕೆಯಲ್ಲಿ ಶೇ 0.15ರಷ್ಟು ಹೆಚ್ಚುವರಿ ಬಡ್ಡಿ ಇರಲಿದೆ.

ವಿಸಿಪಿಎಲ್ ವಾರ್ಷಿಕ ವಹಿವಾಟು ₹60 ಸಾವಿರ; ಸಾಲ ನೀಡಿದ್ದು ₹400 ಕೋಟಿ

ಒಪ್ಪಿಗೆ ಕೇಳದೆ ಷೇರು ಸ್ವಾಧೀನ: ಎನ್‌ಡಿಟಿವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯೂಡೆಲ್ಲಿ ಟೆಲಿವಿಷನ್ ಲಿಮಿಟೆಡ್ (ಎನ್‌ಡಿಟಿವಿ) ಅಥವಾ ಅದರ ಸ್ಥಾಪಕ ಪ್ರವರ್ತಕರ ಒಪ್ಪಿಗೆ ಪಡೆಯದೇ ಶೇಕಡ 29ರಷ್ಟು ಷೇರುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂಬ ನೋಟಿಸ್‌ಅನ್ನು ವಿಶ್ವಪ್ರಧಾನ್ ಕಮರ್ಷಿಯಲ್ ಪ್ರೈ.ಲಿ. (ವಿಸಿಪಿಎಲ್) ನೀಡಿದೆ ಎಂದು ಎನ್‌ಡಿಟಿವಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಎನ್‌ಡಿಟಿವಿಯ ಪ್ರವರ್ತಕ ಸಮೂಹ ಕಂಪನಿ ಆಗಿರುವ ಆರ್‌ಆರ್‌ಪಿಆರ್ ಹೋಲ್ಡಿಂಗ್ ಪ್ರೈವೇಟ್ ಲಿಮಿಟೆಡ್ ಅನ್ನು ತನ್ನ ನಿಯಂತ್ರಣಕ್ಕೆ ಪಡೆದುಕೊಂಡಿರುವುದಾಗಿ ವಿಸಿಪಿಎಲ್, ಎನ್‌ಡಿಟಿವಿ ಮತ್ತು ಅದರ ಪ್ರವರ್ತಕರಿಗೆ ನೋಟಿಸ್ ಮೂಲಕ ತಿಳಿಸಿದೆ. ಷೇರುಗಳನ್ನು ವಿಸಿಪಿಎಲ್‌ಗೆ ವರ್ಗಾವಣೆ ಮಾಡಲು ಆರ್‌ಆರ್‌ಪಿಆರ್ ಕಂಪನಿಗೆ ಎರಡು ದಿನ ಸಮಯ ನೀಡಲಾಗಿದೆ.

ವಿಸಿಪಿಎಲ್ ಕಂಪನಿಯು ಎನ್‌ಡಿಟಿವಿಗೆ ಸಾಲ ನೀಡಿತ್ತು. ಈ ಕುರಿತು ಎನ್‌ಡಿಟಿವಿ ಸ್ಥಾಪಕರಾದ ರಾಧಿಕಾ ಮತ್ತು ಪ್ರಣಯ್ ರಾಯ್ ಅವರೊಂದಿಗೆ 2009–10ರಲ್ಲಿ ಸಾಲ ಒಪ್ಪಂದ ಮಾಡಿಕೊಂಡಿತ್ತು.

(ನವದೆಹಲಿ; ಪಿಟಿಐ ವರದಿ): ಸೆಬಿಯ ಆದೇಶವೊಂದರಲ್ಲಿ ಇರುವ ಮಾಹಿತಿಯ ಪ್ರಕಾರ, ವಿಸಿಪಿಎಲ್‌ನ ವಾರ್ಷಿಕ ವಹಿವಾಟು ಮೊತ್ತವು 2017ನೇ ಹಣಕಾಸು ವರ್ಷದಲ್ಲಿ ₹ 60 ಸಾವಿರ. ಆದರೆ, 2009ರಲ್ಲಿ ಎನ್‌ಡಿಟಿವಿಗೆ ಬಡ್ಡಿ ರಹಿತವಾಗಿ ₹ 400 ಕೋಟಿ ಸಾಲ ನೀಡಿದೆ.

ಆರ್‌ಆರ್‌ಪಿಆರ್ ಅನ್ನು ಮಾರಾಟ ಮಾಡಲು ಮುಂದಿನ ಮೂರರಿಂದ ಐದು ವರ್ಷಗಳಲ್ಲಿ ಖರೀದಿದಾರರನ್ನು ಹುಡುಕಲು ಎರಡೂ ಕಂಪನಿಗಳಿಗೆ ಸಾಲ ಒಪ್ಪಂದಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದರೆ, ಖರೀದಿದಾರ ಎನ್‌ಡಿಟಿವಿಯ ಬ್ರ್ಯಾಂಡ್ ಮತ್ತು ವಿಶ್ವಾಸಾರ್ಹತೆಯನ್ನು ಕಾಯ್ದುಕೊಳ್ಳಬೇಕು ಎಂದು ಹೇಳಲಾಗಿತ್ತು. ರಾಧಿಕಾ ಮತ್ತು ಪ್ರಣಯ್ ಅವರು ಆರ್‌ಆರ್‌ಪಿಆರ್ ಹೋಲ್ಡಿಂಗ್ಸ್ ಸ್ಥಾಪಿಸಿದ್ದು, ಈ ಕಂಪನಿಯು ಎನ್‌ಡಿಟಿವಿಯಲ್ಲಿ ಶೇ 29.18ರಷ್ಟು ಷೇರು ಹೊಂದಿತ್ತು. ಅದನ್ನು ವಿಸಿಪಿಎಲ್‌ಗೆ ವರ್ಗಾಯಿಸಲಾಗಿದೆ. ಆ ಬಳಿಕ ಅದಾನಿ ಎಂಟರ್‌ಪ್ರೈಸಸ್ ಲಿ. ಮತ್ತು ಎಎಂಜಿ ಮೀಡಿಯಾ ನೆಟ್‌ವರ್ಕ್ಸ್ ಲಿಮಿಟೆಡ್‌ಗೆ ಮಾರಾಟ ಮಾಡಲಾಗಿದೆ.

ವಿಸಿಪಿಎಲ್‌ನಿಂದ ಬಡ್ಡಿ ರಹಿತ ಸಾಲ!

ಇಂಡಿಯಾಬುಲ್ಸ್‌ನಿಂದ ಪಡೆದಿದ್ದ ಸಾಲವನ್ನು ತೀರಿಸಲು ಎನ್‌ಡಿಟಿವಿಯು ಐಸಿಐಸಿಐ ಬ್ಯಾಂಕ್‌ನಿಂದ ವರ್ಷಕ್ಕೆ ಶೇ 19ರಷ್ಟು ಬಡ್ಡಿದರಕ್ಕೆ ಸಾಲ ಪಡೆಯಿತು. ಆ ಬಳಿಕ ಐಸಿಐಸಿಐ ಬ್ಯಾಂಕ್‌ನಿಂದ ಪಡೆದಿದ್ದ ಸಾಲವನ್ನು ತೀರಿಸಲು ಎನ್‌ಡಿಟಿವಿಯು 2009ರಲ್ಲಿ ವಿಸಿಪಿಎಲ್‌ನಿಂದ ₹ 350 ಕೋಟಿ ಸಾಲವನ್ನು ಬಡ್ಡಿ ರಹಿತವಾಗಿ ಪಡೆಯಿತು. ಒಂದು ವರ್ಷದ ಬಳಿಕ ವಿಸಿಪಿಎಲ್‌ನಿಂದ ಮತ್ತೆ ₹ 53.85 ಕೋಟಿ ಸಾಲ ಪಡೆದುಕೊಂಡಿತು.

ಒಪ್ಪಂದದ ಪ್ರಕಾರ, ಆರ್‌ಆರ್‌ಪಿಆರ್‌ನಲ್ಲಿ ಪ್ರವರ್ತಕರು ಹೊಂದಿರುವ ಎಲ್ಲ ಷೇರುಗಳನ್ನು ಸ್ವಾಧೀನಪಡಿಸಿಕೊಳ್ಳುವ ಹಕ್ಕನ್ನು ವಿಸಿಪಿಎಲ್ ಪಡೆದುಕೊಂಡಿದೆ. ವಿಸಿಪಿಎಲ್ ಆಗಲಿ ಅದರ ಸಹವರ್ತಿ ಕಂಪನಿಗಳಾಗಲಿ ಸಾಲ ನೀಡಿರುವ ಯಾವುದೇ ಇತಿಹಾಸ ಹೊಂದಿಲ್ಲ. ಮೇಲಾಗಿ ಬಡ್ಡಿರಹಿತವಾಗಿ ಸಾಲ ನೀಡುವ ಸಾಮರ್ಥ್ಯವನ್ನೂ ಹೊಂದಿರುವಂತೆ ಕಾಣುತ್ತಿಲ್ಲ ಎನ್ನುವುದನ್ನು ಸೆಬಿ ಗುರುತಿಸಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹333-705
ದ್ವಿತಳಿ (ಬಿ.ವಿ)	₹362-850

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹157
ಆರ್‌ಎಸ್‌ಎಸ್-5	₹148
ಗುಡ್ ಲಾಟ್	₹140

ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)

ಕನಿಷ್ಠ	₹13,100
ಗರಿಷ್ಠ	₹13,750
ಮಾದರಿ	₹13,500
ಒಟ್ಟು ಆವಕ (ಚೀಲ)	₹3,127

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಮುಂಬೈ ಧಾರಣೆ

ಶೇಂಗಾ

24–8-2022

ಜಾವಾ 70/80(ಹೊಸ)	11400-11450
ಜಾವಾ 80/90(ಹೊಸ)	10800-10850
ದಪ್ಪ ಮಧ್ಯಪ್ರದೇಶ(ಹೊಸ)	10100-10150
ದಪ್ಪ ಗುಜರಾತ್(ಹೊಸ)	10800-10850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1720 (1670)
ಒಂದು ವಾರದ ಡೆಲಿವರಿ	1715 (1665)
ಸೋಯಾ ಕಚ್ಚಾ	1220 (1205)
ಪಾಮ್ ವಾರದ ಡೆಲಿವರಿ	1078 (1098)
ಸೂರ್ಯಕಾಂತಿ ಎಣ್ಣೆ ಕಚ್ಚಾ	1450 (1450)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,400 (51,300)
ಬೆಳ್ಳಿ ಕೆ.ಜಿ 55,200 (55,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹಳತು	40000-47500
ಕುಮಟ	
ಚಿಪ್ಪು	30869-34809
ಕೋಕ	21509-34019
ಫ್ಯಾಕ್ಟರಿ	14019-22549
ಹೊಸಚಾಲಿ	40109-42699
ಹಳೆಚಾಲಿ	43509-47399
ಪುತ್ತೂರು	
ಕೋಕ	11000-26000
ಹೊಸತು	34500-47500
ಸಿದ್ದಾಪುರ	
ಬಿಳಿಗೋಟು	29399-35112
ಚಾಲಿ	38899-43599
ಕೋಕ	27786-34909
ಕೆಂಪುಗೋಟು	30689-33289
ರಾಶಿ	49599-51539
ತಟ್ಟಿಬೆಟ್ಟೆ	39889-49889
ಶಿರಸಿ	
ಬೆಟ್ಟೆ	16899-47699
ಬಿಳಿಗೋಟು	16011-37399
ಚಾಲಿ	36089-44721
ರಾಶಿ	45899-52489
ಶಿವಮೊಗ್ಗ	
ಬೆಟ್ಟೆ	50009-56139
ಗೊರಬಲು	17009-40599
ರಾಶಿ	48869-55055
ಸರಕು	60199-79600

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16750	15700	16000	214.70 ಸೆಂಟ್ಸ್
ಎಸಿ	9100	8200	8900	
ಆರ್‌ಪಿ	9900	9500	9750	ಲಂಡನ್
ಆರ್‌ಸಿ	4800	4500	4700	2215 ಡಾಲರ್ಸ್

ಬ್ಯಾಂಕ್ ಆಸ್ತಿ–ಹೊರೆ ನಡುವೆ ಭಾರಿ ವ್ಯತ್ಯಾಸ: ಪ್ರಣಬ್ ಸೇನ್

ಕೋಲ್ಕತ್ತ (ಪಿಟಿಐ): ದೇಶದ ಬ್ಯಾಂಕಿಂಗ್ ವಲಯದಲ್ಲಿ ಆಸ್ತಿ ಮತ್ತು ಹೊರೆಯ ನಡುವೆ ಭಾರಿ ಪ್ರಮಾಣದ ವ್ಯತ್ಯಾಸವಿದ್ದು, ಇದು ಯಾವುದೇ ಸಂದರ್ಭದಲ್ಲಿ 'ಆಸ್ಫೋಟದ' ಹಂತವನ್ನು ತಲುಪಬಹುದು ಎಂದು ಅರ್ಥಶಾಸ್ತ್ರಜ್ಞ ಪ್ರಣಬ್ ಸೇನ್ ಎಚ್ಚರಿಸಿದ್ದಾರೆ.

ದೇಶದ ಬಹುತೇಕ ಬ್ಯಾಂಕ್‌ಗಳು ಸರ್ಕಾರಿ ಸ್ವಾಮ್ಯದ್ದಾಗಿರುವ ಕಾರಣ ಈ 'ಆಸ್ಫೋಟ' ಸಂಭವಿಸಿಲ್ಲ ಎಂದಿದ್ದಾರೆ. ದೇಶದ ಬ್ಯಾಂಕ್‌ಗಳು ಬ್ರಿಟಿಷ್ ಮಾದರಿಯನ್ನು ಪಾಲಿಸುತ್ತಿವೆ. ಈ ಮಾದರಿಯು ಬ್ಯಾಂಕ್‌ಗಳಿಗೆ ಬಂಡವಾಳ ಮಾರುಕಟ್ಟೆಯಿಂದ ಹಣ ಪಡೆಯಲು ಅವಕಾಶ ನೀಡುವುದಿಲ್ಲ. ಹೀಗಾಗಿ, ಬ್ಯಾಂಕ್‌ಗಳಿಗೆ ಠೇವಣಿಯೇ ಹಣಕಾಸಿನ ಪ್ರಧಾನ ಮೂಲ.

'ಇಂದು ಬ್ಯಾಂಕ್‌ಗಳು ನೀಡುವ ಸಾಲದ ಸರಾಸರಿ ಅವಧಿಯು 9 ವರ್ಷ. ಠೇವಣಿಗಳ ಸರಾಸರಿ ಅವಧಿಯು ಎರಡೂವರೆ ವರ್ಷ. ಅಂದರೆ, ಬ್ಯಾಂಕ್‌ನ ಆಸ್ತಿಯ ಅವಧಿಯ 9 ವರ್ಷ, ಹೊರೆಯ ಅವಧಿ ಎರಡೂವರೆ ವರ್ಷ. ಇದು ಸಮಸ್ಯೆ ಸೃಷ್ಟಿಸಬಹುದು' ಎಂದು ಸಾಂಖ್ಯಿಕ ಆಯೋಗದ ಮಾಜಿ ಅಧ್ಯಕ್ಷ ಕೂಡ ಆಗಿರುವ ಸೇನ್ ಹೇಳಿದ್ದಾರೆ.

'ಬ್ಯಾಂಕಿಂಗ್ ಕಾಯ್ದೆಗಳು ಬ್ಯಾಂಕ್‌ಗಳಿಗೆ ಬಂಡವಾಳ ಮಾರುಕಟ್ಟೆಯಿಂದ ಹಣ ಸಂಗ್ರಹಿಸಲು ಅವಕಾಶ ಕಲ್ಪಿಸುವಂತೆ ಇರಬೇಕು' ಎಂದು ಅವರು ಹೇಳಿದ್ದಾರೆ.

ಭಾರತ 'ಎ' ತಂಡಕ್ಕೆ ಪಾಂಚಾಲ್ ನಾಯಕ: ಪ್ರಸಿದ್ಧಗೆ ಸ್ಥಾನ

ನವದೆಹಲಿ (ಪಿಟಿಐ): ಭಾರತ ಎ ಕ್ರಿಕೆಟ್ ತಂಡಕ್ಕೆ ಗುಜರಾತ್ ಬ್ಯಾಟರ್ ಪ್ರಿಯಾಂಕ್ ಪಾಂಚಾಲ್ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ. ಕನ್ನಡಿಗ ಪ್ರಸಿದ್ಧಕೃಷ್ಣ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಬಿಸಿಸಿಐ ಆಯ್ಕೆ ಸಮಿತಿಯು ಬುಧವಾರ 16 ಆಟಗಾರರ ತಂಡವನ್ನು ಪ್ರಕಟಿಸಿದೆ.

ಸೆ.1 ರಿಂದ 'ಟೆಸ್ಟ್' ಸರಣಿ ನಡೆಯಲಿದೆ. ಮೂರು ಪಂದ್ಯಗಳು ನಡೆಯಲಿವೆ. ಮೊದಲ ಹಾಗೂ ಮೂರನೇ ಪಂದ್ಯವು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹಾಗೂ ಎರಡನೇ ಪಂದ್ಯವು ಹುಬ್ಬಳ್ಳಿಯ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ನಡೆಯಲಿದೆ. ಏಕದಿನ ಪಂದ್ಯಗಳೂ ಚೆನ್ನೈನಲ್ಲಿ ಜರುಗಲಿವೆ.

ತಂಡ: ಪ್ರಿಯಾಂಕ್ ಪಾಂಚಾಲ್ (ನಾಯಕ), ಅಭಿಮನ್ಯು ಈಶ್ವರನ್, ಋತುರಾಜ್ ಗಾಯಕವಾಡ್, ರಜತ್ ಪಾಟೀದಾರ್, ಸರ್ಫರಾಜ್ ಖಾನ್, ತಿಲಕ್ ವರ್ಮಾ, ಕೆ.ಎಸ್. ಭರತ್ (ವಿಕೆಟ್‌ಕೀಪರ್), ಉಪೇಂದ್ರ ಯಾದವ್ (ವಿಕೆಟ್‌ಕೀಪರ್), ಕುಲದೀಪ್ ಯಾದವ್, ಸೌರಭ್ ಕುಮಾರ್, ರಾಹುಲ್ ಚಾಹರ್, ಪ್ರಸಿದ್ಧಕೃಷ್ಣ, ಉಮ್ರಾನ್ ಮಲಿಕ್, ಮುಖೇಶ್ ಕುಮಾರ್, ಯಶ್ ದಯಾಳ್, ಅರ್ಜಾನ್ ನಾಗವಾಸ್ವಲ್ಲಾ.

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಕಿದಂಬಿ ಶ್ರೀಕಾಂತ್‌ಗೆ ಆಘಾತ

ಪ್ರಣಯ್, ಸೇನ್ ಮುನ್ನಡೆ

ಟೋಕಿಯೊ (ಪಿಟಿಐ): ಭಾರತದ ಲಕ್ಷ್ಯ ಸೇನ್ ಹಾಗೂ ಎಚ್‌.ಎಸ್. ಪ್ರಣಯ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪ್ರೀಕ್ವಾರ್ಟರ್‌ಫೈನಲ್ ತಲುಪಿದರು. ಆದರೆ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಆಘಾತ ಅನುಭವಿಸಿದರು.

ಬುಧವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಹಣಾಹಣಿಯಲ್ಲಿ ಲಕ್ಷ್ಯ 21–17, 21–10ರಿಂದ ಸ್ಪೇನ್‌ನ ಲೂಯಿಸ್ ಪೆನಾಲ್ವರ್ ಅವರನ್ನು ಸೋಲಿಸಿದರು. 72 ನಿಮಿಷಗಳಲ್ಲಿ ಗೆಲುವಿನ ರುಚಿ ಸವಿದರು. ಈಚೆಗಷ್ಟೇ ಲಕ್ಷ್ಯ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಜಯಿಸಿದ್ದರು.

ಮೊದಲ ಗೇಮ್‌ನ ಆರಂಭದಲ್ಲಿ 3–4ರಿಂದ ಹಿನ್ನಡೆಯಲ್ಲಿದ್ದ ಲಕ್ಷ್ಯ, ಬಳಿಕ ತಿರುಗೇಟು ನೀಡಿ 13–7ರಿಂದ ಮುನ್ನಡೆ ಸಾಧಿಸಿದರು. ಅದೇ ಲಯದೊಂದಿಗೆ ಮುನ್ನುಗ್ಗಿ ಗೇಮ್ ತಮ್ಮದಾಗಿಸಿಕೊಂಡರು.

ಹೋದ ಸಲದ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಕ್ಷ್ಯ, ಎರಡನೇ ಗೇಮ್‌ನಲ್ಲಿ ಮತ್ತಷ್ಟು ಪರಿಣಾಮಕಾರಿ ಎನಿಸಿದರು. ಗೇಮ್‌ನ ಮೊದಲ ಆರು ಪಾಯಿಂಟ್‌ಗಳನ್ನು ಇಬ್ಬರೂ ಆಟಗಾರರು ಹಂಚಿಕೊಂಡರು. ಬಳಿಕ ಲಕ್ಷ್ಯ ಪಾರಮ್ಯ ಮೆರೆದರು. ಒಂದು ಹಂತದಲ್ಲಿ ಒಂಬತ್ತು ಪಾಯಿಂಟ್ ಅಂತರ ಸಾಧಿಸಿದ ಅವರು ಬಳಿಕ ತಿರುಗಿ ನೋಡಲಿಲ್ಲ.

ಇಲ್ಲಿ ಶ್ರೇಯಾಂಕರಹಿತ ಆಟಗಾರನಾಗಿರುವ ಪ್ರಣಯ್ 21–17, 21–16ರಿಂದ ಎರಡನೇ ಶ್ರೇಯಾಂಕದ, ಜಪಾನ್‌ನ ಕೆಂಟೊ ಮೊಮೊಟಾ ಅವರನ್ನು ಮಣಿಸಿದರು. ಮೊಮೊಟಾ ಎದುರು ಆಡಿದ ಎಂಟು ಪಂದ್ಯಗಳಲ್ಲಿ ಭಾರತದ ಆಟಗಾರ ಮೊದಲ ಜಯ ಸಂಪಾದಿಸಿದರು. ಎಲ್ಲ ಹಣಾಹಣಿಗಳು ಸೇರಿ ಕೇವಲ ಒಂದು ಗೇಮ್‌ನಲ್ಲಿ ಮಾತ್ರ ಪ್ರಣಯ್ ಅವರು ಮೊಮೊಟಾಗೆ ಸೋಲುಣಿಸಿದ್ದರು.



ಎಚ್‌. ಎಸ್. ಪ್ರಣಯ್ ಆಟದ ರೀತಿ– ಎಎಫ್‌ಪಿ ಚಿತ್ರ



ಲಕ್ಷ್ಯ ಸೇನ್– ಪಿಟಿಐ ಚಿತ್ರ

ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಪ್ರಣಯ್ ಹಾಗೂ ಲಕ್ಷ್ಯ ನಡುವೆಯೇ ಪೈಪೋಟಿ ನಡೆಯಲಿದೆ.

ಹೋದ ಆವೃತ್ತಿಯಲ್ಲಿ ಬೆಳ್ಳಿ ಜಯಿಸಿದ್ದ ಕಿದಂಬಿ ಶ್ರೀಕಾಂತ್, ಎರಡನೇ ಸುತ್ತಿನ ಪಂದ್ಯದಲ್ಲಿ 18–21, 17–21ರಿಂದ ಚೀನಾದ ಜಾವೊ ಜುನ್ ಪೆಂಗ್ ಎದುರು ಎಡವಿದರು. ಕೇವಲ 34 ನಿಮಿಷಗಳಲ್ಲಿ ಈ ಪಂದ್ಯ ಮುಗಿಯಿತು.

ಮೊದಲ ಗೇಮ್‌ಅನ್ನು ಕೇವಲ 12 ನಿಮಿಷಗಳಲ್ಲಿ ಕಳೆದುಕೊಂಡ ಶ್ರೀಕಾಂತ್, ಎರಡನೇ ಗೇಮ್‌ಅನ್ನು ಸ್ವಯಂಕೃತ ತಪ್ಪುಗಳಿಂದ ಕೈಚೆಲ್ಲಿದರು. ಒಂದು ಹಂತದಲ್ಲಿ 16–14ರಿಂದ ಮುನ್ನಡೆ ಸಾಧಿಸಿದರೂ, ಗೆಲುವು ಸಾಧ್ಯವಾಗಲಿಲ್ಲ.

ಅರ್ಜುನ್–ಧ್ರುವ ಮುನ್ನಡೆ: ಪುರುಷರ ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್– ಧ್ರುವ ಕಪಿಲ ಜೋಡಿಯೂ ಪ್ರೀಕ್ವಾರ್ಟರ್‌ಫೈನಲ್ ತಲುಪಿತು. ಭಾರತದ ಆಟಗಾರರು 21–17, 21–16ರಿಂದ ಕಳೆದ ಆವೃತ್ತಿಯಲ್ಲಿ ಕಂಚಿನ ಪದಕ ಜಯಿಸಿದ್ದ ಡೆನ್ಮಾರ್ಕ್‌ನ ಕಿಮ್ ಅಸ್ಟ್ರುಪ್– ಆ್ಯಂಡ್ರೆಸ್ ಸ್ಕರೂಪ್ ರಾಸ್ಮಸನ್ ಎದುರು ಗೆದ್ದರು.

ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಕೂಡ 16ರ ಘಟ್ಟ ತಲುಪಿದರು. ಎರಡನೇ ಸುತ್ತಿನಲ್ಲಿ ಅವರು 21-8 21-10ರಿಂದ ಗ್ವಾಟೆಮಾಲಾದ ಸಾಲಿಸ್ ಜೊನಾಥನ್ ಮತ್ತು ಅನಿಬಲ್ ಮರಾಕ್ವಿನ್ ಎದುರು ಗೆದ್ದರು.

ಮಹಿಳಾ ಡಬಲ್ಸ್‌ನ ಎರಡನೇ ಸುತ್ತಿನಲ್ಲಿ ಅಶ್ವಿನಿ ಪೊನ್ನಪ್ಪ– ಎನ್. ಸಿಕ್ಕಿರೆಡ್ಡಿ 15–21, 10–21ರಿಂದ ಚೀನಾದ ಚೆನ್ ಕಿಂಗ್ ಚೆನ್– ಜಿಯಾಯಿ ಫಾನ್ ವಿರುದ್ಧ ಸೋತರು. ಪೂಜಾ ದಂಡು–ಸಂಜನಾ ಸಂತೋಷ್ ಕೂಡ 15-21, 7-21ರಿಂದ ಕೊರಿಯಾದ ಶಿನ್ ಸೆಯುಂಗ್– ಲೀ ಸೊಹೀ ಎದುರು ಮುಗ್ಗರಿಸಿದರು.

ಸ್ನೂಕರ್: ಬೆಳ್ಳಿ ಗೆದ್ದ ಅನುಪಮಾ

ನವದೆಹಲಿ (ಪಿಟಿಐ): ಭಾರತದ ಅನುಪಮಾ ರಾಮಚಂದ್ರನ್ ಹಾಗೂ ಕೀರ್ತನಾ ಪಾಂಡ್ಯನ್ ವಿಶ್ವ ಜೂನಿಯರ್ ಸ್ನೂಕರ್ ಚಾಂಪಿಯನ್‌ಷಿಪ್‌ನ 21 ವರ್ಷದೊಳಗಿನವರ ವಿಭಾಗದಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ರುಮೇನಿಯಾದ ಬುಕರೆಸ್ಟ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಮಂಗಳವಾರ ಅನುಪಮಾ 1–4ರಿಂದ ಥಾಯ್ಲೆಂಡ್‌ನ ಪಂಚಾಯಾ ಚನ್ನೊಯಿ ಎದುರು ಸೋತರು.

ಕೀರ್ತನಾ ಕೂಡ 0–3ರಿಂದ ಚನ್ನೊಯಿ ವಿರುದ್ಧವೇ ಮಣಿದು ಕಂಚು ತಮ್ಮದಾಗಿಸಿಕೊಂಡರು.

ದುಲೀಪ್ ಟ್ರೋಫಿ: ಪಶ್ಚಿಮ ವಲಯಕ್ಕೆ ರಹಾನೆ ನಾಯಕ

ನವದೆಹಲಿ (ಪಿಟಿಐ): ಫಿಟ್‌ನೆಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಭಾರತ ತಂಡದ ಆಟಗಾರ ಅಜಿಂಕ್ಯ ರಹಾನೆ ಮುಂದಿನ ತಿಂಗಳು ನಡೆಯಲಿರುವ ದುಲೀಪ್ ಟ್ರೋಫಿ ಟೂರ್ನಿಯಲ್ಲಿ ಪಶ್ಚಿಮ ವಲಯ ತಂಡವನ್ನು ಮುನ್ನಡೆಸಲಿದ್ದಾರೆ.

ಕಳೆದ ಬಾರಿ ರಣಜಿ ಟ್ರೋಫಿ ಫೈನಲ್‌ನಲ್ಲಿ ಆಡಿದ್ದ ಮುಂಬೈ ತಂಡದ ಪೃಥ್ವಿ ಶಾ, ಶಾರ್ದೂಲ್ ಠಾಕೂರ್, ಯಶಸ್ವಿ ಜೈಸ್ವಾಲ್ ಸೇರಿದಂತೆ 6 ಮಂದಿ ಸ್ಥಾನ ಪಡೆ ದಿದ್ದಾರೆ.

ಇದೇ ಸಂದರ್ಭದಲ್ಲಿ ಕೇಂದ್ರ ವಲಯ ತಂಡವನ್ನೂ ಪ್ರಕಟಿಸಲಾಗಿದ್ದು, ಕರಣ್ ಶರ್ಮಾ ನಾಯಕರಾಗಿದ್ದಾರೆ.

ಸೆಪ್ಟೆಂಬರ್ 8ರಿಂದ 25ರವರೆಗೆ ತಮಿಳುನಾಡಿನಲ್ಲಿ ಟೂರ್ನಿ ನಡೆಯಲಿದೆ.

ಪಶ್ಚಿಮ ವಲಯ: ಅಜಿಂಕ್ಯ ರಹಾನೆ (ನಾಯಕ), ಪೃಥ್ವಿ ಶಾ, ಯಶಸ್ವಿ ಜೈಸ್ವಾಲ್, ಶಮ್ಸ್ ಮಲಾನಿ, ತನುಷ್ ಕೋಟ್ಯಾನ್, ಶಾರ್ದೂಲ್ ಠಾಕೂರ್ (ಮುಂಬೈ), ರಾಹುಲ್ ತ್ರಿಪಾಠಿ, ಸತ್ಯಜೀತ್ ಬಚಾವ್ (ಮಹಾರಾಷ್ಟ್ರ), ಹಿತ್ ಪಟೇಲ್, ಚಿಂತನ್ ಗಾಜಾ (ಗುಜರಾತ್), ಜಯದೇವ್ ಉನದ್ಕತ್, ಚಿರಾಗ್ ಜಾನಿ (ಸೌರಾಷ್ಟ್ರ), ಅತಿತ್ ಶೇಥ್ (ಬರೋಡ)

ಸುದ್ದಿ 2 ನಿಮಿಷ

ರ‍್ಯಾಂಕಿಂಗ್: ಶುಭಮನ್‌ಗೆ ಬಡ್ತಿ


ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರು ಐಸಿಸಿ ಏಕದಿನ ರ‍್ಯಾಂಕಿಂಗ್‌ನಲ್ಲಿ ಭಾರೀ ಬಡ್ತಿ ಪಡೆದಿದ್ದು, 38ನೇ ಸ್ಥಾನಕ್ಕೇರಿದ್ದಾರೆ.

ಬುಧವಾರ ಪ್ರಕಟವಾದ ಕ್ರಮಾಂಕದಲ್ಲಿ ಅವರು 45 ಸ್ಥಾನಗಳ ಏರಿಕೆ ದಾಖಲಿಸಿದ್ದಾರೆ. ವಿರಾಟ್ ಕೊಹ್ಲಿ ಐದನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಜಿಂಬಾಬ್ವೆ ವಿರುದ್ಧ ಇತ್ತೀಚೆಗೆ ನಡೆದ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ 22 ವರ್ಷದ ಗಿಲ್, ಉತ್ತಮವಾಗಿ ಬ್ಯಾಟ್ ಬೀಸಿದ್ದರು. ಹರಾರೆಯಲ್ಲಿ ನಡೆದ ಕೊನೆಯ ಪಂದ್ಯದಲ್ಲಿ ಶತಕವನ್ನೂ (97 ಎಸೆತಗಳಲ್ಲಿ 130 ರನ್) ದಾಖಲಿಸಿದ್ದರು.

ಈ ಸರಣಿಯಲ್ಲಿ ಆಡದಿದ್ದ ವಿರಾಟ್ ಐದನೇ ಸ್ಥಾನ ಕಾಯ್ದುಕೊಂಡಿದ್ದಾರೆ. ರೋಹಿತ್ ಶರ್ಮಾ ಕೂಡ ಈ ಸರಣಿಯಲ್ಲಿ ಆಡಿರಲಿಲ್ಲ. ಅವರು ಸದ್ಯ ಆರನೇ ಸ್ಥಾನದಲ್ಲಿದ್ದಾರೆ.

ಶಿಖರ್ ಧವನ್ ಒಂದು ಸ್ಥಾನ ಕುಸಿತ ಕಂಡು 12ನೇ ಸ್ಥಾನಕ್ಕಿಳಿದಿದ್ದಾರೆ. ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಅಗ್ರಸ್ಥಾನ ಅಬಾಧಿತವಾಗಿದೆ. ದಕ್ಷಿಣ ಆಫ್ರಿಕಾದ ರಸಿ ವ್ಯಾನ್ ಡರ್ ಡಸೆನ್ ಎರಡನೇ ಸ್ಥಾನದಲ್ಲಿದ್ದಾರೆ.



ಬೌಲರ್‌ಗಳ ವಿಭಾಗದಲ್ಲಿ ನ್ಯೂಜಿಲೆಂಡ್ ವೇಗಿ ಟ್ರೆಂಟ್ ಬೌಲ್ಟ್ ಮೊದಲ ಸ್ಥಾನದಲ್ಲಿದ್ದರೆ, ಬಾಂಗ್ಲಾದೇಶದ ಶಕೀಬ್ ಅಲ್ ಹಸನ್ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಜನಾಂಗೀಯ ನಿಂದನೆ: ಆರೋಪ

ಕೋಲ್ಕತ್ತ (ಪಿಟಿಐ): ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ತಮ್ಮ ಆಟಗಾರನಿಗೆ ಜನಾಂಗೀಯ ನಿಂದನೆ ಮಾಡಲಾಗಿದೆ ಎಂದು ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಆರೋಪಿಸಿದೆ.

ಇಲ್ಲಿಯ ಕಿಶೋರ್ ಭಾರತಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಇಂಡಿಯನ್ ಏರ್‌ಫೋರ್ಸ್ ಎದುರಿನ ಪಂದ್ಯದ ವೇಳೆ ಈ ಘಟನೆ ನಡೆದಿದ್ದು, ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಈ ವಿಷಯ ತರಲಾಗಿದೆ ಎಂದು ಕ್ಲಬ್ ತಿಳಿಸಿದೆ.

'ಎದುರಾಳಿ ತಂಡದ ಆಟಗಾರನೊಬ್ಬ ನಮ್ಮ ಆಟಗಾರನಿಗೆ ನಿಂದಿಸಿದ ಬಗ್ಗೆ ತಿಳಿದುಬಂದಿದೆ. ಎಲ್ಲಿಯೂ ತಾರತಮ್ಯ ಇರಬಾರದು ಎಂಬುದು ನಮ್ಮ ಸ್ಪಷ್ಟ ನುಡಿ. ಫುಟ್‌ಬಾಲ್ ಎಲ್ಲರಿಗಾಗಿ ಇದೆ' ಎಂದು ಕ್ಲಬ್ ಹೇಳಿಕೆ ನೀಡಿದೆ.ಈ ಪಂದ್ಯದಲ್ಲಿ ಬೆಂಗಳೂರು 4–0ಯಿಂದ ಏರ್‌ಫೋರ್ಸ್ ತಂಡವನ್ನು ಸೋಲಿಸಿತ್ತು.

ಇಂಫಾಲ್‌ನಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ನೆರೊಕಾ ಎಫ್‌ಸಿ– ಆರ್ಮಿ ರೆಡ್ ಫುಟ್‌ಬಾಲ್ ತಂಡಗಳ ನಡುವಣ ಪಂದ್ಯ ಗೋಲುರಹಿತ ಡ್ರಾನಲ್ಲಿ ಅಂತ್ಯಕಂಡಿತು.

ಚಂದ್ರಚೂಡ್ ನೇತೃತ್ವದ ನ್ಯಾಯಪೀಠಕ್ಕೆ ಬಿಸಿಸಿಐ ಪ್ರಕರಣ

ನವದೆಹಲಿ: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಸಂಬಂಧಿಸಿದಂತೆ ಇರುವ ಪ್ರಕರಣವನ್ನು ಇನ್ನು ಮುಂದೆ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ವಿಚಾರಣೆ ನಡೆಸುವುದು ಎಂದು ಬುಧವಾರ ಸುಪ್ರೀಂ ಕೋರ್ಟ್ ತಿಳಿಸಿದೆ.

'ನ್ಯಾಯಪೀಠದಲ್ಲಿದ್ದ ಇನ್ನಿಬ್ಬರು ನ್ಯಾಯಮೂರ್ತಿಗಳು ನಿವೃತ್ತರಾಗಿದ್ದಾರೆ. ಜಸ್ಟಿಸ್ ಚಂದ್ರಚೂಡ್ ಒಬ್ಬರೇ ಈಗ ಇದ್ದಾರೆ. ಆದ್ದರಿಂದ ಅವರ ಪೀಠವೇ ಬಿಸಿಸಿಐ ಪ್ರಕರಣವನ್ನು ವಿಚಾರಣೆ ನಡೆಸಲಿದೆ' ಎಂದು ಮುಖ್ಯ ನ್ಯಾಯಮೂರ್ತಿ ತಿಳಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಪೀಠವು 2018ರ ಆಗಸ್ಟ್‌ನಲ್ಲಿ ಬಿಸಿಸಿಐ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿತ್ತು.

ನಿಯಮಾವಳಿ ಜಾರಿ ಕುರಿತು ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ, ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಹಾಗೂ ಡಿ.ವೈ. ಚಂದ್ರಚೂಡ್ ಅವರ ಪೀಠವು ಆದೇಶ ನೀಡಿತ್ತು.

ನಿಯಮಗಳಲ್ಲಿ ಪರಿಷ್ಕರಣೆ ಕೋರಿರುವ ಬಿಸಿಸಿಐ ಆಡಳಿತ ಸಮಿತಿಯು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ನಿವೃತ್ತ ನ್ಯಾಯ ಮೂರ್ತಿ ಆರ್‌.ಎಂ. ಲೋಧಾ ಸಮಿತಿಯು ಶಿಫಾರಸು ಮಾಡಿರುವ ನಿಯಮಾವಳಿಯಲ್ಲಿರುವ ಕೂಲಿಂಗ್ ಆಫ್ ಅವಧಿ, ಪದಾಧಿಕಾರಿಗಳ ವಯೋ ಮಿತಿ ಕುರಿತ ನಿಯಮಗಳ ಪರಿಷ್ಕರಣೆ ಮಾಡಬೇಕು ಎಂದು ಮನವಿ ಸಲ್ಲಿಸಲಾಗಿದೆ.

ಹೋದ ತಿಂಗಳು ಈ ಪ್ರಕರಣದ ವಿಚಾರಣೆಗೆ ಸಂಬಂಧಿಸಿದಂತೆ ಮಾಜಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಮಣಿಂದರ್ ಸಿಂಗ್ ಅವರನ್ನು ಅಮಿಕಸ್ ಕ್ಯೂರಿ ಆಗಿ ನೇಮಕ ಮಾಡಲಾಗಿತ್ತು.

ಇದಕ್ಕೂ ಮುನ್ನ ಅಮಿಕಸ್ ಕ್ಯೂರಿ ಆಗಿದ್ದ ಪಿ.ಎಸ್. ನರಸಿಂಹನ್ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ನೀಡಲಾಗಿದ್ದರಿಂದ ಮಣಿಂದರ್ ಸಿಂಗ್ ನೇಮಕವಾದರು.

ಫುಟ್‌ಬಾಲ್: ಥಾಂಕೊಸ್ ಸ್ಟೂಡೆಂಟ್ಸ್‌ಗೆ ಜಯ

ಬೆಂಗಳೂರು: ಥಾಂಕೊಸ್ ಸ್ಟೂಡೆಂಟ್ಸ್ ಯೂನಿಯನ್ ತಂಡ, ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಜಯ ಗಳಿಸಿತು. ಬುಧವಾರ 2–1ರಿಂದ ಎಡಿಇ ಎಫ್‌ಸಿ ತಂಡವನ್ನು ಸೋಲಿಸಿತು. ಇನ್ನೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ 3–2ರಿಂದ ರೆಬೆಲ್ಸ್ ವಿರುದ್ಧ ಗೆದ್ದಿತು.

ಟಿಟಿ: ಹಂಸಿಣಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ಹಂಸಿಣಿ ಮಥನ್ ರಾಜನ್ ಅವರು ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಟೂರ್ನಿಯ 13 ವರ್ಷದೊಳಗಿನವರ ವಿಭಾಗದಲ್ಲಿ ಅವರಿಗೆ ಇದು ನಾಲ್ಕನೇ ಪ್ರಶಸ್ತಿಯಾಗಿದೆ.

ಈಕ್ವೆಡಾರ್‌ನಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಹಂಸಿಣಿ 11-7, 11-8, 11-7ರಿಂದ ಕೊಲಂಬಿಯಾದ ಮರಿಯಾನಾ ರಾಡ್ರಿಗಸ್ ಅವರನ್ನು ಮಣಿಸಿದರು.

15 ವರ್ಷದೊಳಗಿನವರ ವಿಭಾಗದಲ್ಲಿ ಕಂಚಿನ ಪದಕವೂ ಹಂಸಿಣಿ ಅವರಿಗೆ ಒಲಿಯಿತು.



ಹಂಸಿಣಿ ರಾಜನ್– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಇದಕ್ಕೂ ಮೊದಲು ಕರ್ನಾಟಕದ ಯಶಸ್ವಿನಿ ಘೋರ್ಪಡೆ 19 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆಗಿದ್ದರು. ಸುಹಾನಾ ಸೈನಿ 17 ವರ್ಷದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದರು.

ಭಾರತದ ಮೂವರೂ ಆಟಗಾರ್ತಿಯರು ಅಂತರರಾಷ್ಟ್ರೀಯ ಟೇಬಲ್ ಟೆನಿಸ್ ಫೆಡರೇಷನ್ (ಐಟಿಟಿಎಫ್) ಆಯೋಜಿಸಿದ್ದ ಹೈ ಪರ್ಫಾರ್ಮನ್ಸ್ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಭಾರತ ತಂಡದ ಮಾಜಿ ತರಬೇತುದಾರ ಮ್ಯಾಸಿಮೊ ಕಾನ್‌ಸ್ಟಂಟಿ ಇವರಿಗೆ ಮಾರ್ಗದರ್ಶನ ಮಾಡಿದ್ದರು.

ಏಷ್ಯಾ ಕಪ್: ಲಕ್ಷ್ಮಣ್ ಹಂಗಾಮಿ ಕೋಚ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರನ್ನು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡಕ್ಕೆ ಹಂಗಾಮಿ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ.

ರಾಹುಲ್ ದ್ರಾವಿಡ್ ಅವರಿಗೆ ಕೋವಿಡ್ ಆಗಿರುವುದರಿಂದ ಟೂರ್ನಿಗೆ ತೆರಳುತ್ತಿಲ್ಲ. ಅವರ ಸ್ಥಾನಕ್ಕೆ ಲಕ್ಷ್ಮಣ್ ಅವರನ್ನು ನೇಮಕ ಮಾಡಲಾಗಿದೆ.



ಲಕ್ಷ್ಮಣ್

'ಜಿಂಬಾಬ್ವೆಯಲ್ಲಿ ಈಚೆಗೆ ನಡೆದ ಏಕದಿನ ಸರಣಿಯಲ್ಲಿ ಆಡಿದ ಭಾರತ ತಂಡಕ್ಕೂ ಲಕ್ಷ್ಮಣ್ ಕೋಚ್ ಆಗಿ ತೆರಳಿದ್ದರು. ಇದೀಗ ದ್ರಾವಿಡ್ ಅವರು ಕೋವಿಡ್ ನಿಂದಾಗಿ ತಂಡದೊಂದಿಗೆ ತೆರಳುತ್ತಿಲ್ಲ. ಲಕ್ಷ್ಮಣ್ ಅವರನ್ನು ಹಂಗಾಮಿಯಾಗಿ ನೇಮಕ ಮಾಡಲಾಗಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರು ತಿಳಿಸಿದ್ದಾರೆ.

'ದ್ರಾವಿಡ್ ಅವರು ಕೋವಿಡ್‌ನಿಂದ ಚೇತರಿಸಿಕೊಂಡ ನಂತರ ಹಾಗೂ ನೆಗೆಟಿವ್ ವರದಿ ಬಂದ ನಂತರ ದುಬೈಗೆ ತೆರಳುವರು. ತಂಡವನ್ನು ಸೇರಿಕೊಳ್ಳುವರು' ಎಂದು ಬಿಸಿಸಿಐ ವೈದ್ಯಕೀಯ ಸಮಿತಿ ತಿಳಿಸಿದೆ.

'ಮಾನ್ಸೂನ್' ರೇಸ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮೈಸೂರು: 'ಮೈಸೂರು ರೇಸ್ ಕ್ಲಬ್ ವತಿಯಿಂದ ಮಾನ್ಸೂನ್ ರೇಸ್‌ಗಳನ್ನು ಗುರುವಾರ ಆರಂಭಿಸಲಾಗುವುದು' ಎಂದು ಕ್ಲಬ್ ಅಧ್ಯಕ್ಷ ವೈ.ಬಿ.ಗಣೇಶ್ ತಿಳಿಸಿದರು.

'ಮಾನ್ಸೂನ್ ರೇಸ್'ನ 18 ದಿನಗಳಲ್ಲಿ 140 ರೇಸ್ ನಡೆಯಲಿವೆ. ಆಗಸ್ಟ್ 26, ಸೆಪ್ಟೆಂಬರ್ 2, 16, 24, ಅಕ್ಟೋಬರ್ 6, 7, 14, 29 ಹಾಗೂ 30ರಂದು ಪ್ರಮುಖ ರೇಸ್‌ಗಳು ನಡೆಯಲಿವೆ. ಪ್ರವೇಶ ದರವನ್ನು ₹ 100ರಿಂದ 200ಕ್ಕೆ ಹೆಚ್ಚಿಸಲಾಗಿದೆ. ಭಾಗವಹಿಸುವವರು ಗುರುವಾರ ಬೆಳಿಗ್ಗೆ 10ರ ಒಳಗೆ ನೋಂದಣಿ ಮಾಡಿಕೊಳ್ಳಬೇಕು' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮೈಸೂರು ರೇಸ್

ಎಮೆಲ್ಡಾ ಗೆಲ್ಲುವ ನಿರೀಕ್ಷೆ

ಹೆಚ್.ಹೆಚ್.ಜಯಚಾಮರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಮೆಲ್ಡಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮ್ಯೂಸಿಕ್ ಡಿವೈನ್ 8, ಐ ದಿ ಮೈಂಡ್ 3, ಫುನಂಬಲಿಸ್ಟ್ 6
2ನೇ ರೇಸ್: ಕಮ್ ಅಲೈವ್ 1, ಸಮಯ್ ಬಲ್ವಾನ್ 2, ವರ್ಜೀನಿಯಾ ಕ್ವೀನ್ 14
3ನೇ ರೇಸ್: ಕಂಟ್ರೆಸ್ ಫ್ಲಾಶ್ 13, ಲವ್ಲಿ ಥಾಟ್ಸ್ 10, ಎಡ್ಡಿ ದಿ ಈಗಲ್ 5
4ನೇ ರೇಸ್: ಫ್ಲಾಶ್ ಬಾಂಡ್ 6, ಡ್ರುಸಿಲ್ಲಾ 8, ಅಬಲರ್ 1
5ನೇ ರೇಸ್: ಎಮೆಲ್ಡಾ 2, ಮೇಕ್ ಮೈ ವೇ 1
6ನೇ ರೇಸ್: ಫಾರೆಸ್ಟ್ ವ್ಯೂ 1, ಆರಿಲ್ 2, ಕೂರ್ಗ್ ಜನರಲ್ 3
7ನೇ ರೇಸ್: ನೀಚ್ ಕನ್ನಾಬಿಸ್ 1, ಪರ್ಸಿವೇಲ್ 2, ಫೆಸ್ಟಿವ್ ಸ್ಟಾರ್ 6

ಉತ್ತಮ ಬೆಟ್: ಫ್ಲಾಶ್ ಬಾಂಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಮಹಾರಾಜ ಟ್ರೋಫಿ: ಗುಲ್ಬರ್ಗಕ್ಕೆ ಮೈಸೂರು ಸವಾಲು

ಮನೀಷ್–ಕರುಣ್ ಮುಖಾಮುಖಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಣಜಿ ಕ್ರಿಕೆಟ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಮನೀಷ್ ಪಾಂಡೆ ಹಾಗೂ ಕರುಣ್ ನಾಯರ್ ಗುರುವಾರ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿ ಎರಡನೇ ಕ್ವಾಲಿಫೈಯರ್‌ನಲ್ಲಿ ಮುಖಾಮುಖಿಯಾಗಲಿದ್ದಾರೆ.

ಮನೀಷ್ ನಾಯಕತ್ವದ ಗುಲ್ಬರ್ಗ್ ಮಿಸ್ಟಿಕ್ಸ್ ಹಾಗೂ ಕರುಣ್ ನೇತೃತ್ವದ ಮೈಸೂರು ವಾರಿಯರ್ಸ್ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೆಣಸಲಿವೆ. ಈ ಪಂದ್ಯದಲ್ಲಿ ಜಯಿಸಿದವರು ಫೈನಲ್‌ನಲ್ಲಿ ಮಯಂಕ್ ಅಗರವಾಲ್ ನಾಯಕತ್ವದ ಬೆಂಗಳೂರು ವಾರಿಯರ್ಸ್ ತಂಡವನ್ನು ಎದುರಿಸುವರು.

ಗುಲ್ಬರ್ಗ ತಂಡವು ಮೊದಲ ಕ್ವಾಲಿಫೈಯರ್‌ನಲ್ಲಿ ಬೆಂಗಳೂರು ಎದುರು ಸೋತಿತ್ತು. ರೋಹನ್ ಪಾಟೀಲ ಅವರು ಗಳಿಸಿದ್ದ ಸುಂದರ ಶತಕ ವ್ಯರ್ಥವಾಗಿತ್ತು. ಯುವ ಬೌಲರ್‌ಗಳೂ ವೈಫಲ್ಯ ಅನುಭವಿಸಿದ್ದರಿಂದ ಬೆಂಗಳೂರು 227 ರನ್ ಗಳಿಸಿ ಬೃಹತ್ ಗುರಿಯೊಡ್ಡಿತ್ತು.



ಕರುಣ್



ಮನೀಷ್ ಪಾಂಡೆ

ಮೈಸೂರು ತಂಡವು ಎಲಿಮಿನೇಟರ್ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ಎದುರು ಜಯಿಸಿತ್ತು. ತಂಡದ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಹಾಗೂ ಬ್ಯಾಟರ್ ನಿಹಾಲ್ ಉಲ್ಲಾಳ ಮಿಂಚಿದ್ದರು.

ತಂಡಗಳು: ಗುಲ್ಬರ್ಗ ಮಿಸ್ಟಿಕ್ಸ್: ಮನೀಷ್ ಪಾಂಡೆ (ನಾಯಕ), ರೋಹನ್ ಪಾಟೀಲ, ಜಸ್ವಂತ್ ಆಚಾರ್ಯ, ಕೃಷನ್ ಶ್ರೀಜಿತ್ (ವಿಕೆಟ್ ಕೀಪರ್), ಮನೋಜ್ ಬಾಂಡಗೆ, ಅಜಯ್ ಗೌಡ, ರಿತೇಶ್ ಭಟ್ಕಳ್, ಕುಶಾಲ್ ವಾಧ್ವಾನಿ, ಪ್ರಣವ್ ಭಾಟಿಯಾ, ವಿದ್ವತ್ ಕಾವೇರಪ್ಪ ಮತ್ತು ಧನುಷ್ ಗೌಡ

ಮೈಸೂರು ವಾರಿಯರ್ಸ್: ಕರುಣ್ ನಾಯರ್ (ನಾಯಕ), ನಿಹಾಲ್ ಉಲ್ಲಾಳ, ಪವನ್ ದೇಶಪಾಂಡೆ, ಎಸ್. ಶಿವರಾಜ್, ನಾಗಭರತ್, ಶುಭಾಂಗ್ ಹೆಗಡೆ, ಶ್ರೇಯಸ್ ಗೋಪಾಲ್, ಭರತ್ ಧುರಿ, ವಿದ್ಯಾಧರ್ ಪಾಟೀಲ, ಆದಿತ್ಯ ಗೋಯಲ್, ಪ್ರತೀಕ್ ಜೈನ್, ನಿತಿನ್ ಭಿಲ್ಲೆ.

ಪಂದ್ಯ ಆರಂಭ: ರಾತ್ರಿ 7

ನೇರಪ್ರಸಾರ; ಸ್ಟಾರ್ ಸ್ಪೋರ್ಟ್ಸ್

ಕೊಕ್ಕೊ ಲೀಗ್‌ನಲ್ಲಿ ಕೂಲಿ ಕಾರ್ಮಿಕನ ಮಗ ತಾಸೀನ್

● ಹಿತಾ ಪ್ರಕಾಶ್

ಬೆಂಗಳೂರು: ಸದ್ಯ ನಡೆಯುತ್ತಿರುವ ಚೊಚ್ಚಲ ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಕರ್ನಾಟಕದ ದಿನಗೂಲಿ ಕಾರ್ಮಿಕನ ಮಗ ಮೊಹಮ್ಮದ್ ತಾಸೀನ್ ಕಣಕ್ಕಿಳಿದಿದ್ದು, ಭವಿಷ್ಯ ಕಟ್ಟಿಕೊಳ್ಳುವ ಕನಸು ಹೊತ್ತಿದ್ದಾರೆ.

ರಾಜಸ್ಥಾನ ವಾರಿಯರ್ಸ್ ತಂಡದ ಪರ ಆಡುತ್ತಿರುವ ಆಲ್‌ರೌಂಡರ್ ತಾಸೀನ್, ಹರಪನಹಳ್ಳಿಯ ಕಟ್ಟಡ ಕಾರ್ಮಿಕ ಎಂ. ಕರಾಮತಿ ಹಾಗೂ ರಶೀದಾ ಬಾನು ಅವರ ಮೂರು ಮಕ್ಕಳಲ್ಲಿ ಎರಡನೆಯವರು.

2018ರಲ್ಲಿ ಡಿವೈಇಎಸ್‌ಗೆ ಸೇರಿದ ತಾಸೀನ್, ಕೋಚ್ ರಾಮಲಿಂಗಪ್ಪ ಅವರ ಬಳಿ ತರಬೇತಿ ಪಡೆದವರು. ಅಸ್ಸಾಂನಲ್ಲಿ ನಡೆದ ಖೇಲೊ ಇಂಡಿಯಾ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದ ರಾಜ್ಯ ತಂಡದಲ್ಲಿದ್ದರು. ಈ ವರ್ಷ ಮಧ್ಯಪ್ರದೇಶದಲ್ಲಿ ನಡೆದ ರಾಷ್ಟ್ರೀಯ ಟೂರ್ನಿಯಲ್ಲಿ ಕರ್ನಾಟಕ ತಂಡ ಮೂರನೇ ಸ್ಥಾನ ಗಳಿಸಿದ್ದು, ಈ ತಂಡವನ್ನು ಪ್ರತಿನಿಧಿಸಿದ್ದ ತಾಸೀನ್ ಅವರ ಅದೃಷ್ಟದ ಬಾಗಿಲು ತೆರೆಯಿತು.



ತಾಸೀನ್

'ನನ್ನ ಅಕ್ಕನಿಗೆ ಮದುವೆಯಾಗಿದೆ. 17 ವರ್ಷದ ತಮ್ಮ 9ನೇ ತರಗತಿ ಮುಗಿಸಿದ್ದು, ಬಡತನದಲ್ಲಿದ್ದ ಕುಟುಂಬಕ್ಕೆ ಆರ್ಥಿಕವಾಗಿ ನೆರವಾಗಲು ತಂದೆಯೊಂದಿಗೆ ಕೈಜೋಡಿಸಿದ್ದಾನೆ. ಕುಟುಂಬದ ಸ್ಥಿತಿಯಿಂದಾಗಿ ನಮ್ಮಲ್ಲಿ ಒಬ್ಬರು ಮಾತ್ರ ಕಲಿಯಲು ಅವಕಾಶವಿತ್ತು. ನನಗಾಗಿ ಆತ ತನ್ನ ಅಧ್ಯಯನ ತ್ಯಜಿಸಿದ' ಎಂದು ತಾಸೀನ್ ಹೇಳುತ್ತಾರೆ.

ಟಿವಿಯಲ್ಲಿ ತಾಸೀನ್ ಆಟವನ್ನು ವೀಕ್ಷಿಸುತ್ತಿರುವ ಪೋಷಕರು ಅವರ ಸಾಧನೆಗೆ ಹೆಮ್ಮೆಪಡುತ್ತಿದ್ದಾರೆ.

ಪಂಚಾಯತ್‌ರಾಜ್, ಕ್ರೀಡಾ ಇಲಾಖೆಯಿಂದ ಕೊಕ್ಕೊ, ಕಬಡ್ಡಿ, ಎತ್ತಿನ ಗಾಡಿ ಓಟ

ಪಂಚಾಯಿತಿಮಟ್ಟದಲ್ಲಿ ಗ್ರಾಮೀಣ ಕ್ರೀಡೆಗಳ ಸುಗ್ಗಿ

● ಸಚ್ಚಿದಾನಂದ ಕುರಗುಂದ

ಬೆಂಗಳೂರು: ಗ್ರಾಮೀಣ ಕ್ರೀಡೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಇದೇ ಮೊದಲ ಬಾರಿ ಎತ್ತಿನ ಗಾಡಿ, ಕಬಡ್ಡಿ, ಕೊಕ್ಕೊ ಕ್ರೀಡೆಗಳನ್ನು ಆಯೋಜಿಸಲು ಸರ್ಕಾರ ಮುಂದಾಗಿದೆ.

ಗ್ರಾಮ ಮಟ್ಟದಿಂದ ರಾಜ್ಯಮಟ್ಟದವರೆಗೆ ನಡೆಯುವ ಈ ಸ್ಪರ್ಧೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಂಟಿಯಾಗಿ ಆಯೋಜಿಸಲಿವೆ.

ವಯೋಮಿತಿ ಇಲ್ಲದ ಮುಕ್ತ ಕ್ರೀಡಾಕೂಟ ಇದಾಗಿದ್ದು, ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಎಲ್ಲ ಸ್ಪರ್ಧೆಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಕ್ರೀಡಾಕೂಟಕ್ಕೆ ಅಗತ್ಯವಿರುವ ತಾಂತ್ರಿಕ ನೆರವನ್ನು ಕ್ರೀಡಾ ಇಲಾಖೆ ನೀಡಲಿದೆ.

ಇದೇ ಮೊದಲ ಬಾರಿ ಈ ರೀತಿಯ ಕ್ರೀಡಾ ಸ್ಪರ್ಧೆಗಳನ್ನು ದೊಡ್ಡ ಪ್ರಮಾಣದಲ್ಲಿ ವ್ಯವಸ್ಥಿತವಾಗಿ ಆಯೋಜಿಸಲಾಗುತ್ತಿದೆ. ಉದ್ಯೋಗ ಖಾತ್ರಿ ಅಡಿಯಲ್ಲಿ ಅಭಿವೃದ್ಧಿಪಡಿಸಲಾದ ಮೈದಾನಗಳಲ್ಲಿಯೂ ಕ್ರೀಡಾಕೂಟಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಸ್ಪರ್ಧೆಗಳನ್ನು ಯಾವ ರೀತಿ ಆಯೋಜಿಸಬೇಕು ಎನ್ನುವ ವಿವರಗಳ ಕುರಿತು ಇಲಾಖೆ ಸುತ್ತೋಲೆ ಹೊರಡಿಸಿದೆ.

ಗ್ರಾಮ ಪಂಚಾಯಿತಿಗಳು ಶೇ 2ರಷ್ಟು ಆದಾಯವನ್ನು ಈ ಕ್ರೀಡೆಗಳನ್ನು ಆಯೋಜಿಸಲು ಬಳಸಬಹುದು. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ ಜಿಲ್ಲಾ ಪಂಚಾಯಿತಿಗಳ ಮೂಲಕ ಕ್ರೀಡಾ ಚಟುವಟಿಕೆಗಳಿಗೆ ನೀಡುವ ಅನುದಾನವನ್ನು ಬಳಸಲು ಸೂಚಿಸಲಾಗಿದೆ.

ತಾಲ್ಲೂಕು ಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ₹200 ಮತ್ತು ಜಿಲ್ಲಾಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ₹250 ನೀಡಲು ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ತಲಾ ₹300 ಅನ್ನು ಉಪಾಹಾರ, ಭೋಜನಕ್ಕೆ ನೀಡುವಂತೆ ಸೂಚಿಸಲಾಗಿದೆ.

ಮೂರು ತಾಲ್ಲೂಕುಗಳಿಂತಲೂ ಕಡಿಮೆ ಇರುವ ಜಿಲ್ಲೆಗಳಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆದವರ ಹೆಸರುಗಳನ್ನು ಜಿಲ್ಲಾಮಟ್ಟಕ್ಕೆ ಕಳುಹಿಸಬೇಕು. ನಾಲ್ಕರಿಂದ ಐದು ತಾಲ್ಲೂಕುಗಳಿರುವ ಜಿಲ್ಲೆಗಳು ಎರಡು ತಂಡಗಳನ್ನು ಮಾತ್ರ ಕಳುಹಿಸಬೇಕು. ಆರು ಅಥವಾ ಅದಕ್ಕಿಂತಲೂ ಹೆಚ್ಚು ತಾಲ್ಲೂಕುಗಳು ಇರುವ ಜಿಲ್ಲೆಗಳು ಮೊದಲ ಸ್ಥಾನ ಪಡೆದ ತಂಡಗಳನ್ನು ಮಾತ್ರ ಕಳುಹಿಸಬೇಕು. ಜಿಲ್ಲಾಮಟ್ಟದಲ್ಲಿ ಮೊದಲ ಸ್ಥಾನ ಪಡೆದವರಿಗೆ ಮಾತ್ರ ರಾಜ್ಯಮಟ್ಟದಲ್ಲಿ ಭಾಗವಹಿಸಲು ಅವಕಾಶ ದೊರೆಯಲಿದೆ ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ.

ಗ್ರಾಮೀಣ ಕ್ರೀಡಾಕೂಟವನ್ನು ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಶಸ್ವಿಯಾಗಿ ಆಯೋಜಿಸುವುದನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಖಾತರಿಪಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

'ದೇಶಿ ಕ್ರೀಡೆಗಳಿಗೆ ಪ್ರೋತ್ಸಾಹದ ಆಶಯ'

'ಪಾರಂಪರಿಕ ಮತ್ತು ದೇಶಿಯ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಈ ಕ್ರೀಡೆಗಳನ್ನು ಆಯೋಜಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ಜನರಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು' ಎಂದು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ತಿಳಿಸಿದ್ದಾರೆ.

'ಈ ಕ್ರೀಡೆಗಳಲ್ಲಿ ವಯೋಮಿತಿಯನ್ನು ಸಹ ನಿಗದಿಪಡಿಸಿಲ್ಲ. ಗ್ರಾಮೀಣ ಕ್ರೀಡಾಕೂಟಕ್ಕೆ ಸ್ಥಳೀಯವಾಗಿ ಜನಪ್ರಿಯವಾಗಿರುವ ಕ್ರೀಡೆಗಳನ್ನೇ ಆಯ್ಕೆ ಮಾಡಲಾಗುತ್ತಿದೆ. ಮುಖ್ಯವಾಗಿ ಆರೋಗ್ಯ ರಕ್ಷಣೆಯ ಬಗ್ಗೆಯೂ ಜಾಗೃತಿ ಮೂಡಿಸುವ ಪ್ರಯತ್ನ ಮಾಡಲಾಗುವುದು' ಎಂದು ವಿವರಿಸಿದ್ದಾರೆ.